

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 5 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 50 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸಿಎಂ ವಾರ್ನ್...

ಬೆಂಗಳೂರು, ಜೂ.4(ಕೆಎಂಶಿ)– ಭ್ರಷ್ಟಾಚಾರಕ್ಕೆ ಕಡಿವಾಣ, ಮಾದಕದ್ರವ್ಯಗಳ ದಂಧೆಗೆ ತಡೆ ಹಾಗೂ ಗೂಂಡಾಗಿರಿ ಹಾವಳಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಹಿರಿಯ ಪೊಲೀಸ್ ಮತ್ತು ಐಎಎಸ್ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ನೂತನ ಸರ್ಕಾರದ ಮೊದಲ ಸಂಪುಟ ಸಭೆಯಲ್ಲಿ ಕೈಗೊಂಡ 6 ಯೋಜನೆಗಳ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಅಧಿಕಾರಿಗಳು ಮುಂದಾಗಬೇಕು ಎಂದರು.

ಆಡಳಿತಯಂತ್ರ ಚುರುಕಾಗಬೇಕು, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೇರಿದಂತೆ ಎಲ್ಲಾ 6 ಪ್ರಮುಖ ಯೋಜನೆಗಳು ತಕ್ಷಣದಿಂದ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳಬೇಕು.

ಸರ್ಕಾರದ ಸುಗಮ ಆಡಳಿತಕ್ಕೆ ಅಧಿಕಾರಿಗಳೇ ಬೆನ್ನೆಲುಬಾಗಿದ್ದು, ಯಾವುದೇ ಕಾರಣಕ್ಕೂ ಗುರಿ ತಪ್ಪಬಾರದು. ರಾಜ್ಯದಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡಬಾರದು, ಅಮಾಯಕ ಜನರನ್ನು ಪೀಡಿಸುವ ರೌಡಿಗಳ ಹೆಡೆಮುರಿ ಕಟ್ಟಿ, ಜೂಜು, ಡ್ರಗ್ಸ್ ದಂಧೆ ಸೇರಿದಂತೆ ಎಲ್ಲ ರೀತಿಯ ■6ನೇ ಪುಟಕ್ಕೆ



ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಸರ್ಕಾರದ ಆಡಳಿತ ವೈಖರಿ ಸಂಬಂಧ ಮಾಧ್ಯಮಗಳಿಗೆ ವಿವರ ನೀಡಿದರು.

ಜವಾಬ್ದಾರಿ, ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿ

ಡಿಸಿಎಂ ಡಾ. ಪರಮೇಶ್ವರ್ ಸಲಹೆ

ಬೆಂಗಳೂರು, ಜೂ.4(ಕೆಎಂಶಿ)– ಜನತೆಗೆ ನೀಡಿರುವ ಭರವಸೆಯಂತೆ ಉತ್ತಮ ಆಡಳಿತ ನೀಡುವಲ್ಲಿ ಅಧಿಕಾರಿಗಳು ಸರ್ಕಾರದ ಯೋಜನೆಗಳನ್ನು ನಿಗದಿತ ಸಮಯದೊಳಗೆ ಫಲಾನುಭವಿಗಳಿಗೆ ತಲುಪಿಸುವಲ್ಲಿ ಜವಾಬ್ದಾರಿ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಿಂದ ಎಲ್ಲ ಅಧಿಕಾರಿಗಳು ಬದ್ಧತೆಯಿಂದ ಕೆಲಸ ನಿರ್ವಹಿಸುವ ಮೂಲಕ ಸರ್ಕಾರಕ್ಕೆ ಒಳ್ಳೆಯ ಹೆಸರು ತಂದಿದ್ದೀರಿ, ಅನೇಕ ಭರವಸೆಗಳನ್ನೂ ಈಡೇರಿಸಲಾಗಿದೆ ಎಂದರು.

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಅಧಿಕಾರಿಗಳ ಮೇಲೆ ಅಪಾರ ನಿರೀಕ್ಷೆ ಇಟ್ಟುಕೊಂಡಿದೆ. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಮೂಲಕ ಜನಸಮುದಾಯಕ್ಕೆ ಅನುಕೂಲವಾಗಬೇಕು.

ಯುವ ಸಮುದಾಯ ಸರ್ಕಾರದ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಯುವ ಜನರ ಆಪೇಕ್ಷೆಯಂತೆ ಆಡಳಿತ ನೀಡಬೇಕು ಎಂಬುದು ಸರ್ಕಾರದ ದೃಷ್ಟಿಕೋನವಾಗಿದೆ. ಕರ್ನಾಟಕ ಪ್ರಗತಿಪರ ■6ನೇ ಪುಟಕ್ಕೆ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಣಕಾಸು; ಪ್ರಿಯಾಂಕ್‌ಗೆ ಗೃಹ, ಪರಮೇಶ್ವರ್‌ಗೆ ಕಂದಾಯ, ಕೃಷ್ಣ ಬೈರೇಗೌಡರಿಗೆ ಜಿಬಿಎ, ರಾಮಲಿಂಗಾ ರೆಡ್ಡಿಗೆ ಜಲ ಸಂಪನ್ಮೂಲ

ಬೆಂಗಳೂರು, ಜೂ.4– ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಸಂಪುಟದ 13 ಸದಸ್ಯರಿಗೆ ಗುರುವಾರ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಹಣಕಾಸು, ಡಿಪಿಎಆರ್ ಜತೆಗೆ ಹಂಚಿಕೆಯಾಗದ ಎಲ್ಲ ಖಾತೆಗಳನ್ನು ಮುಖ್ಯಮಂತ್ರಿಯವರು ಉಳಿಸಿಕೊಂಡಿದ್ದಾರೆ.

ಡಿಸಿಎಂ ಡಾ.ಜಿ.ಪರಮೇಶ್ವರ್ ಅವರು ಬಯಸಿದಂತೆ ಗೃಹ ಖಾತೆಯಿಂದ ಬಿಡುಗಡೆ ಸಿಕ್ಕಿದ್ದು, ಕಂದಾಯ ಇಲಾಖೆ ಕೈಹಿಡಿದಿದೆ. ಡಿಸಿಎಂಗೆ ಹೆಚ್ಚುವರಿಯಾಗಿ ಕ್ರೀಡೆ ಮತ್ತು ಯುವಜನ ಸಬಲೀಕರಣ ಖಾತೆಯನ್ನು ನೀಡಲಾಗಿದೆ.

ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ ಹಾಗೂ ಡಾ.ಶರಣ ಪ್ರಕಾಶ್ ಪಾಟೀಲ್ ಈ ಮುಂಚಿನ ಖಾತೆಗಳಲ್ಲೇ ಮುಂದುವರಿದಿದ್ದಾರೆ. ಕೆ.ಜೆ.ಜಾರ್ಜ್ ಅವರಿಗೆ ಇಂಧನದ ಜತೆಗೆ ಪ್ರವಾಸೋದ್ಯಮ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಅರಣ್ಯ ಸಚಿವರಾಗಿದ್ದ ಈಶ್ವರ ಖಂಡ್ರೆ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಿಕ್ಕಿದ್ದು, ಯು.ಟಿ. ಖಾದರ್ ಅವರಿಗೆ 2013ರಲ್ಲಿ ನಿರ್ವಹಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೇ ಸಿಕ್ಕಿದೆ. ಸಂಪುಟಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಡಾ.ಯತೀಂದ್ರ ಅವರಿಗೆ ನಗರಾಭಿವೃದ್ಧಿ ಖಾತೆ ದಕ್ಕಿದೆ. ■6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಸಂಪುಟದ 13 ಸಚಿವರಿಗೆ ಖಾತೆ ಹಂಚಿಕೆ

ಖಾತೆ ಹಂಚಿಕೆ ವಿವರ

ಡಿ.ಕೆ.ಶಿವಕುಮಾರ್	– ಸಿಎಂ–ಹಣಕಾಸು, ಡಿಪಿಎಆರ್, ಹಂಚಿಕೆಯಾಗದ ಖಾತೆಗಳು
ಡಾ. ಜಿ.ಪರಮೇಶ್ವರ್	– ಡಿಸಿಎಂ–ಕಂದಾಯ, ಕ್ರೀಡೆ ಮತ್ತು ಯುವಜನ ಸಬಲೀಕರಣ
ಕೆ.ಎಚ್.ಮುನಿಯಪ್ಪ	– ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳು
ಕೆ.ಜೆ.ಜಾರ್ಜ್	– ಇಂಧನ, ಪ್ರವಾಸೋದ್ಯಮ
ಎಂ.ಬಿ.ಪಾಟೀಲ್	– ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ
ರಾಮಲಿಂಗಾರೆಡ್ಡಿ	– ಜಲ ಸಂಪನ್ಮೂಲ
ಸತೀಶ್ ಜಾರಕಿಹೊಳಿ	– ಲೋಕೋಪಯೋಗಿ
ಕೃಷ್ಣ ಬೈರೇಗೌಡ	– ಬೆಂಗಳೂರು ನಗರಾಭಿವೃದ್ಧಿ (ಜಿಬಿಎ)
ಪ್ರಿಯಾಂಕ್ ಖರ್ಗೆ	– ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಯು.ಟಿ.ಖಾದರ್	– ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಈಶ್ವರ ಖಂಡ್ರೆ	– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಡಾ. ಯತೀಂದ್ರ	– ನಗರಾಭಿವೃದ್ಧಿ
ಬೈರತಿ ಸುರೇಶ್	– ಸಾರಿಗೆ
ಡಾ. ಶರಣ ಪ್ರಕಾಶ್ ಪಾಟೀಲ್	– ವೈದ್ಯಕೀಯ ಶಿಕ್ಷಣ

ಕೇರಳಕ್ಕೆ ಎಂಟ್ರಿ ಕೊಟ್ಟ ಮುಂಗಾರು; ಇನ್ನೆರಡು ದಿನದಲ್ಲಿ ಕರ್ನಾಟಕದಲ್ಲಿ ಭಾರೀ ಮಳೆ ಮುನ್ಸೂಚನೆ

ಬೆಂಗಳೂರು, ಜೂ.4– ಕೇರಳಕ್ಕೆ ಗುರುವಾರ ಮುಂಗಾರು ಪ್ರವೇಶಿಸಿದೆ. ವಾಡಿಕೆಗಿಂತ ಮೂರು ದಿನ ತಡವಾಗಿ ಮುಂಗಾರು ಶುರುವಾಗಿದೆ. ಇದರ ಬೆನ್ನಲ್ಲೇ ಕರ್ನಾಟಕದಲ್ಲೂ ಇನ್ನೆರಡು ದಿನದಲ್ಲಿ ಮಳೆ ಅಬ್ಬರಿಸಲಿದೆ ಎಂದು ಹವಾ ಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರ್ನಾಟಕದಲ್ಲಿ ಮುಂಗಾರು ಅಧಿಕೃತವಾಗಿ ಯಾವ ದಿನ ಪ್ರವೇಶಿಸಲಿದೆ ಎಂಬುದನ್ನು ಗುರುವಾರ ಮುಂಗಾರು ಗಾಳಿಯನ್ನು ಪರಿಶೀಲಿಸಿದ ಬಳಿಕ ಘೋಷಿಸಲಾಗುತ್ತದೆ ಎಂದು ಇಲಾಖೆ ತಿಳಿಸಿದೆ. ಇದರ ನಡುವೆ ರಾಜ್ಯದ ಬಹುತೇಕ ಜಿಲ್ಲೆಗಳಿಗೆ ಮುಂದಿನ ಐದು ದಿನಗಳ ಕಾಲ ಹವಾಮಾನ ಇಲಾಖೆ ■6ನೇ ಪುಟಕ್ಕೆ

ಸಂಚಾರ ನಿಯಮ ಉಲ್ಲಂಘನೆ: ದಂಡದಲ್ಲಿ ಮತ್ತೊಮ್ಮೆ ಶೇ.50 ರಿಯಾಯಿತಿ

ಬೆಂಗಳೂರು, ಜೂ.4– ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ50 ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಿ, ಆದೇಶಿಸಿದೆ.



ಜೂನ್ 21 ರಿಂದ ಜುಲೈ 10 ರವರೆಗೆ ಕಾಲಾವಕಾಶ ನೀಡಿ ಆದೇಶಿಸಿದೆ. 20 ದಿನ ನೀಡಿರುವ ಕಾಲಾವಕಾಶ ಬಳಸಿಕೊಂಡು ವಾಹನಗಳ ಮಾಲೀಕರು ದಂಡ ಪಾವತಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ■6ನೇ ಪುಟಕ್ಕೆ

ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಫ್ರೀ ಬಸ್ ಪಾಸ್

ಸರ್ಕಾರದಿಂದ ಅಧಿಕೃತ ಆದೇಶ

ಬೆಂಗಳೂರು, ಜೂ.4– ರಾಜ್ಯದ ಎಲ್ಲಾ ಶಾಲಾ, ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸುವುದಾಗಿ ರಾಜ್ಯ ಸರ್ಕಾರ ಇಂದು ಅಧಿಕೃತ ಆದೇಶ ಹೊರಡಿಸಿದೆ. ಕರ್ನಾಟಕದ ಮುಖ್ಯಮಂತ್ರಿಯಾಗಿ ಬುಧವಾರ (ಜೂ.3) ತಮ್ಮ ಮೊದಲ ಸಚಿವ ಸಂಪುಟ ಸಭೆ ನಡೆಸಿದ ಡಿ.ಕೆ.ಶಿವಕುಮಾರ್, ಹಲವು ಮಹತ್ವದ ತೀರ್ಮಾನ ಗಳನ್ನು ಪ್ರಕಟಿಸಿದ್ದರು. ಈ ಪೈಕಿ ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಸರ್ಕಾರಿ ಬಸ್‌ನಲ್ಲಿ ಉಚಿತ ಬಸ್ ಪಾಸ್ ತೀರ್ಮಾನ ಪ್ರಕಟಿಸಿದ್ದರು. ಈ ಕುರಿತು ಇಂದು ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ■6ನೇ ಪುಟಕ್ಕೆ

ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲೂ ಅಧಿಕಾರಿಗಳು, ಸಿಬ್ಬಂದಿ, ಮಧ್ಯವರ್ತಿಗಳ ಮಧ್ಯರಾತ್ರಿ ಅಭಿವೃದ್ಧಿ ಕಾರ್ಯ!

'ಮೈಸೂರು ಮಿತ್ರ'ನ ಕ್ಯಾಮರಾ ಕಂಡು ಎದ್ದು–ಬಿದ್ದು ಪರಾರಿ!



ಗುರುವಾರ ಸರಿರಾತ್ರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 'ಪರಿಶ್ರಮ' ಪಡುತ್ತಿರುವ ಸಿಬ್ಬಂದಿ, ಅಧಿಕಾರಿಗಳು ಮತ್ತು ಹೊಂಚು ಹಾಕುತ್ತಿರುವ ಮಧ್ಯವರ್ತಿಗಳು.!

ಮೈಸೂರು, ಜೂ.4– ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಅರ್ಥಾತ್ ಇಂದಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದಲ್ಲಿ ಏನೋ ನಡೆಯುತ್ತಿದೆ ಎಂಬ ಅನುಮಾನ ಹಿಂದೆ ಮಾತ್ರವಲ್ಲ ಈಗಲೂ ಜನತೆಯನ್ನು ಕಾಡುತ್ತಲೇ ಇದೆ.

ಕಾರಣ, ಇದರ ಕಾರ್ಯ ವೈಖರಿ. ಸರ್ಕಾರದ ಎಲ್ಲಾ ಇಲಾಖೆಗಳು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಕಾರ್ಯ ನಿರ್ವಹಿಸುವುದೇ ಪ್ರಯಾಸದ ಸಂಗತಿ. ಅಂಥಹದ್ದರಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸರಿರಾತ್ರಿವರೆಗೆ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿದ್ದಾರೆ ಎಂದು ಕೇಳಿದರೆ ಅಚ್ಚರಿಯಾಗುತ್ತದೆ ಅಲ್ಲವೇ!!! ಅವರಿಗೆ ನೆರವಾಗಲು 'ಮಧ್ಯವರ್ತಿ'ಗಳು ಇರುತ್ತಾರೆ.

ಸಾರ್ವಜನಿಕರು ನೀಡಿದ ಮಾಹಿತಿ ಅನುಸಾರ 'ಮೈಸೂರು ಮಿತ್ರ' ಪ್ರತಿನಿಧಿ ರಾತ್ರಿ 11.30ರ ವೇಳೆಗೆ ಸ್ಥಳಕ್ಕೆ ಭೇಟಿ ನೀಡಿದರು. ■6ನೇ ಪುಟಕ್ಕೆ

ಮುಡಾ ಬಾರೀ ಹಗರಣದ ನಡುವೆ ಡಾ. ಯತೀಂದ್ರ ನಗರಾಭಿವೃದ್ಧಿ ಸಚಿವ!

ಬೆಂಗಳೂರು, ಜೂ.4– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಳೆದ ಮೂರು ವರ್ಷದ ಅಧಿಕಾರಾವಧಿಯಲ್ಲಿ ಅವರ ಪರಮಾಪ್ತರಾಗಿದ್ದ ಭೈರತಿ ಸುರೇಶ್ ಅವರಲ್ಲಿದ್ದ ನಗರಾಭಿ ವೃದ್ಧಿ ಖಾತೆ ಇದೀಗ ಸಿದ್ದರಾಮಯ್ಯನವರ ಪುತ್ರ ಡಾ. ಯತೀಂದ್ರ ಪಾಲಿಗೆ ಬಂದಿದೆ. ಇದು ಜನರಲ್ಲಿ ಬಾರೀ ಅಚ್ಚರಿ ಮೂಡಿಸಿದೆ.



ಭೈರತಿ ಸುರೇಶ್



ಯತೀಂದ್ರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಬ್ರಹ್ಮಾಂಡ ಭ್ರಷ್ಟಾಚಾರ ಹಾಗೂ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ಕುಟುಂಬ ಬದಲಿ ನಿವೇಶನ ಪಡೆದ ಪ್ರಕರಣ ಭಾರೀ ವಿವಾದ ಸೃಷ್ಟಿಸಿತ್ತು. ಮುಡಾ ಹಗರಣ ಬಯಲಾಗುತ್ತಿದ್ದಂತೆ ಹೆಲಿಕಾಪ್ಟರ್‌ನಲ್ಲಿ ಬಂದ ಅಂದಿನ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಭೆ ನಡೆಸಿ ಏನೂ ಹಾಗೆ ಇಲ್ಲ ಎಂದು ಹೇಳಿ ಹೋಗಿದ್ದರು. ಆದರೆ, ಬಿಜೆಪಿ ನಾಯಕರು ಅವರು ದಾಖಲೆ ಸಾಗಿಸಿದ ಆರೋಪ ಮಾಡಿದ್ದರು. ನಂತರ ಸಾವಿರಾರು ಕೋಟಿ ಭ್ರಷ್ಟಾಚಾರ ಬಯಲಾಗುತ್ತಿದ್ದಂತೆ ಕೊನೆಗೆ ತಾವು ಪಡೆದಿದ್ದ ಬದಲಿ ನಿವೇಶನಗಳನ್ನು ಸಿದ್ದರಾಮಯ್ಯರ ■6ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 5 ಜೂನ್ 2026

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ



'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಪುರಸ್ಕೃತರಾದ ಎನ್.ಆರ್.ನಾಗೇಶ್ ಹಾಗೂ ಜಯಂತ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ಜೂ.4–ಮೈಸೂರು ಜಿಲ್ಲಾ ಆಡಳಿತ, ಕನ್ನಡ–ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ರಾಜ್ಯಮಟ್ಟದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮದಲ್ಲಿ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಸ್ವೀಕರಿಸಿದ ಸಮಾಜ ಸೇವಕ ಎನ್.ಆರ್.ನಾಗೇಶ್ ಹಾಗೂ ಡಿಡಿ ನ್ಯೂಸ್ ವರದಿಗಾರ ಜಯಂತ್ ಅವರನ್ನು ವಿವಿಧ ಸಂಘಟನೆಗಳ ಮುಖಂಡರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಓಬಿಸಿ ಘಟಕದ ಹಿರಿಯ ಉಪಾಧ್ಯಕ್ಷ ಎಂ.ಎಲ್.ಗೋಪಾಲ್, ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಸಂಚಾಲಕ ಲಕ್ಷ್ಮೀನಾರಾಯಣ್, ಸಂಘಟನಾ ಕಾರ್ಯದರ್ಶಿ ಶ್ರೀಕಾಂತ್ ಯಾದವ್, ರಾಜು ರೆಡ್ಡಿ, ರವಿ ಕುಂಬಾರ್, ಶ್ರೀರಾಮ್ ಮಡಿವಾಳ, ಸಿದ್ದಪ್ಪಾಜಿ ವಿಶ್ವಕರ್ಮ, ಕಿರಣ್ ಕುಮಾರ್ ವಿಶ್ವಕರ್ಮ, ಎಂ.ಎನ್.ಗೀತಾ, ಅನಿತಾ, ಸೌಮ್ಯ, ಮಂಜುಳಾ, ಮಂಗಳ, ಕುಮುದಾ, ವನಜ, ಶಾರದಾ, ಸರಸ್ವತಿ, ಆಶ್ರಯ ಸಮಿತಿ ಸದಸ್ಯ ಮಂಜುನಾಥ್, ಟಿ.ನರಸೀಪುರದ ನಾಗೇಂದ್ರ, ಈ.ರಾಜು, ಲೋಕೇಶ್, ಮುರಳೀಧರ್, ಹುಣಸೂರಿನ ದೇವರಾಜ್, ಪಿರಿಯಾಪಟ್ಟಣ ಕೃಷ್ಣ, ಸಿದ್ದಾರ್ಥನಗರ ಮಹದೇವ್, ಬೋಗಾದಿ ರವಿ, ಮಹೇಶ್, ವಿಷ್ಣುಕುಮಾರ್, ಹೂಟಗಳ್ಳಿ ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ ಚಾರಿಟಬಲ್ ಟ್ರಸ್ಟ್‌ನಿಂದ ವಿದ್ಯಾರ್ಥಿವೇತನ ವಿತರಣೆ



ಮಲಬಾರ್ ಗೋಲ್ಡ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಿಎಸ್‌ಆರ್ ಅನುದಾನದಲ್ಲಿ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಮೈಸೂರು, ಜೂ.4(ಎಂಟಿವೈ)– ಮಲಬಾರ್ ಗೋಲ್ಡ್ ಸಂಸ್ಥೆಯು ಸಿಎಸ್‌ಆರ್ ಫಂಡ್‌ನ ದೊಡ್ಡ ಮೊತ್ತವನ್ನು ಶಿಕ್ಷಣ ಕ್ಷೇತ್ರಕ್ಕೆ ವಿನಿಯೋಗಿಸುತ್ತಿರುವುದು ಶ್ಲಾಘನೀಯ ಎಂದು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್.ಪ್ರತಿಮಾ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಭಾಂಗಣದಲ್ಲಿ ಮಲಬಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಶಿಕ್ಷಣ ಸಬಲೀಕರಣ ಮತ್ತು ಮಹಿಳಾ ಸಬಲೀಕರಣ'ದ ಅಂಗವಾಗಿ ಆಯೋಜಿಸಿದ್ದ ಮೈಸೂರು ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ 52 ಕಾಲೇಜುಗಳ 442 ವಿದ್ಯಾರ್ಥಿನಿಯರಿಗೆ 35.66 ಲಕ್ಷ ಮೊತ್ತದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಲಬಾರ್ ಗೋಲ್ಡ್ ಚಾರಿಟಬಲ್ ಟ್ರಸ್ಟ್ ಸಿಎಸ್‌ಆರ್ ಫಂಡ್‌ನಲ್ಲಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು, ಅದನ್ನು ವಿದ್ಯಾರ್ಥಿನಿಯರು ಸದುಪಯೋಗ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ವಿದ್ಯಾರ್ಥಿನಿಯರಿಗೆ ಶಿಕ್ಷಣವು ಒಂದು ಆಭರಣ. ಎಲ್ಲ ವಿದ್ಯಾರ್ಥಿನಿಯರು ಉತ್ತಮ ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಪಡೆದುಕೊಳ್ಳಲು ಶ್ರಮಿಸಬೇಕು. ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನದ ಹಣವನ್ನು ಸದ್ಬಳಕೆ ಮಾಡಿಕೊಂಡು ಅತ್ಯುತ್ತಮ ವಿದ್ಯಾರ್ಥಿ ಆಗಬೇಕು. ಸಮಾಜ ಕಟ್ಟುವ ಕಾರ್ಯವನ್ನು ಮಲಬಾರ್ ಚಾರಿಟಬಲ್ ಸಂಸ್ಥೆಯು ಮಾಡುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಸಿಎಸ್‌ಆರ್ ಫಂಡ್‌ನಲ್ಲಿ 200 ಕೋಟಿ ರೂ. ವಿವಿಧ ಕಾರ್ಯಕ್ರಮಗಳಿಗೆ ಮೀಸಲಿಟ್ಟಿದೆ. ಪ್ರತಿವರ್ಷ ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನದ ಮೂಲಕ ಸಮಾಜಮುಖಿ ಸೇವೆಯಲ್ಲಿ ತೊಡಗಿಕೊಂಡಿರುವುದು ಶ್ಲಾಘನೀಯ ಎಂದರು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ದಕ್ಷಿಣ ವಲಯ ಮುಖ್ಯಸ್ಥ ಪಿ. ಶರಪುದ್ದೀಪ್ ಮಾತನಾಡಿ, ಸಂಸ್ಥೆಯು 1999ರಲ್ಲಿ ಮಲಬಾರ್ ಚಾರಿಟಬಲ್ ಟ್ರಸ್ಟ್ ಪ್ರಾರಂಭ ಮಾಡಿದ್ದು, ವ್ಯವಹಾರದಿಂದ ಬರುವ ಲಾಭಾಂಶದಲ್ಲಿ ಶೇ.5ರಷ್ಟು ಸಮಾಜಮುಖಿ ಕಾರ್ಯಕ್ಕೆ ನೀಡುತ್ತಿದೆ. ಹಸಿವು ಮುಕ್ತ ಜಗತ್ತು ಹಾಗೂ ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ರಾಜ್ಯದಾದ್ಯಂತ 7,614 ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ನೆರವಾಗುವ ದೃಷ್ಟಿಯಿಂದ ಒಟ್ಟು 6.11 ಕೋಟಿ ಮೊತ್ತದ ವಿದ್ಯಾರ್ಥಿವೇತನ ವಿತರಿಸಲಾಗುತ್ತಿದೆ ಎಂದರು. ಈ ವೇಳೆ ಕಾರ್ಯಕ್ರಮದಲ್ಲಿ ರುಡ್‌ಸೆಟ್ ನಿರ್ದೇಶಕಿ ಕೆ.ಎಸ್.ಸರಿತಾ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಪಿ.ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

ನೂತನ ಸಚಿವ ಕೆ.ಎಚ್.ಮುನಿಯಪ್ಪಗೆ ಸನ್ಮಾನ...



ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆ.ಎಚ್.ಮುನಿಯಪ್ಪ ಅವರನ್ನು ಕರ್ನಾಟಕ ಮಾದರ್ ಮಹಾಸಭಾ ವತಿಯಿಂದ ಬೆಂಗಳೂರಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಮಾಜಿ ಕಾರ್ಪೊರೇಟರ್ ಸುನಂದಕುಮಾರ್, ಕಲೀಂ ಪಾಷ, ಮಹದೇವ, ಕೃಷ್ಣ ಕೈಲಾಸಪುರಂ ಇನ್ನಿತರರು ಉಪಸ್ಥಿತರಿದ್ದರು.


ನಾಳೆ ಎಸ್‌ಜೆಸಿಇಯಲ್ಲಿ 'ಓಪನ್ ಡೇ'

ಮೈಸೂರು, ಜೂ.4(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು (ಎಸ್‌ಜೆಸಿಇ) ಆವರಣದಲ್ಲಿ ಜೂ.6ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ 'ಮುಕ್ತ ದಿನ(ಓಪನ್ ಡೇ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜು ಪ್ರಾಂಶುಪಾಲ ಡಾ. ಸಿ.ನಟರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್‌ಮಠ್, ಡಿಡಿಪಿಯು ಎಂ.ಪಿ.ನಾಗಮ್ಮ, ಜೆಎಸ್‌ಎಸ್ ಎಂವಿಪಿ ನಿರ್ದೇಶಕ ಡಾ.ಬಿ.ಸುರೇಶ್, ಜೆಎಸ್‌ಎಸ್ ಎಟಿಯು ಉಪ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಕಾಲೇಜಿನಲ್ಲಿ 60ಕ್ಕೂ ಹೆಚ್ಚು ಕೋರ್ಸ್‌ಗಳಿದ್ದು, ದ್ವಿತೀಯ ಪಿಯು ನಂತರ ಮುಂದೇನು ಎಂಬ ಪ್ರಶ್ನೆಗೆ ಉತ್ತರ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಯಾವ ಯಾವ ಕೋರ್ಸ್‌ಗಳಿಂದ ಏನೇನು ಉಪಯುಕ್ತತೆ ಎಂಬ ಮಾಹಿತಿಯನ್ನು ನೀಡಲಾಗುವುದು. ಕಳೆದ ಬಾರಿ ಸುಮಾರು 15 ಸಾವಿರ ವಿದ್ಯಾರ್ಥಿಗಳು, ಅವರ ಪೋಷಕರು, ಭೇಟಿ ನೀಡಿ ಬೋಧಕ ವರ್ಗದವರಿಂದ ಮಾಹಿತಿ ಪಡೆದಿದ್ದಾರೆ. ಈ ಬಾರಿ ಸಹಾ ಅಷ್ಟೇ ಮಂದಿಯನ್ನು ನಿರೀಕ್ಷಿಸಲಾಗಿದೆ ಎಂದರು. ಡೀನ್ ಡಾ.ಎಂ.ಎನ್.ನಾಗೇಂದ್ರಪ್ರಸಾದ್ ಉಪಸ್ಥಿತರಿದ್ದರು.

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ....



ಮೈಸೂರಿನ ಕೆಆರ್ ಸರ್ಕಲ್‌ನಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತಿ ಆಚರಿಸಲಾಯಿತು. ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಭಾರತೀಯ ಜನತಾ ಪಾರ್ಟಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಮೈಸೂರು ವಿಭಾಗ ಪ್ರಭಾರಿಗಳಾದ ಮರ್ಳಾಪುರ ಸ್ವಾಮಿ, ಸಹಪ್ರಭಾರಿ ಈ.ಸಿ ನಿಂಗರಾಜು, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಕದಂಬ ಕನ್ನಡ ಸೇನೆ ನಗರ ಜಿಲ್ಲಾಧ್ಯಕ್ಷ ಶಿವರಾಜ್, ಮಾಜಿನಗರ ಪಾಲಿಕೆ ಸದಸ್ಯ ಜಗದೀಶ್, ಎಲ್.ಪ್ರೀತಮ್ ಗೌಡ, ಕೇಬಲ್ ಮಹೇಶ್ ಇನ್ನಿತರರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

'ಕಿಷ್ಕಿಂಧ ಕಲಹ' ನಾಟಕ ಪೋಸ್ಟರ್ ಬಿಡುಗಡೆ



ಕನ್ನಡ–ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ನಾಟಕದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಜೂ. 4– ಮೈಸೂರಿನ ಸಾತ್ವಿಕಿ ಫೌಂಡೇಶನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಆಯೋಜಿಸಲಾಗಿರುವ 40 ದಿನಗಳ ಉಚಿತ ರಂಗ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ ಪ್ರದರ್ಶಿಸಲಿರುವ 'ಕಿಷ್ಕಿಂಧ ಕಲಹ' ನಾಟಕದ ಪೋಸ್ಟರ್ ಅನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ರಂಗಭೂಮಿಯಂತಹ ಸೃಜನಾತ್ಮಕ ಚಟುವಟಿಕೆಗಳು ಯುವಜನರಲ್ಲಿ ಕಲಾಸಕ್ತಿ, ಶಿಸ್ತು ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸಲು ಸಹಕಾರಿಯಾಗುತ್ತವೆ. ಸಾತ್ವಿಕಿ ಫೌಂಡೇಶನ್ ನಡೆಸುತ್ತಿರುವ ಉಚಿತ ರಂಗ ತರಬೇತಿ ಶಿಬಿರವು ಹೊಸ ಪ್ರತಿಭೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು. ಈ ಸಂದರ್ಭದಲ್ಲಿ ಸಾತ್ವಿಕಿ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷೆ ಓ.ಸರಸ್ವತಿ, ರಂಗಕರ್ಮಿ ಕೃಷ್ಣಮೂರ್ತಿ ತಲಕಾಡು, ರಂಗ ನಿರ್ದೇಶಕ ಹಾಗೂ ನಟ ಅಂಕಿತ್‌ರಾಜ್ ಉಪಸ್ಥಿತರಿದ್ದರು.

ಶಿಬಿರದ ಸಮಾರೋಪವಾಗಿ ಜೂನ್ 5ರಂದು ಸಂಜೆ 7 ಗಂಟೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ 'ಕಿಷ್ಕಿಂಧ ಕಲಹ' ನಾಟಕ ಪ್ರದರ್ಶನವಿರಲಿದೆ. ಮಾಹಿತಿಗೆ ಮೊ.ಸಂ.805040 9543/ 9148502314 ಸಂಪರ್ಕಿಸಬಹುದು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು.ಜೂ.4– ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು, ಜೂ.9ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮೈಸೂರಿನ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ: 9448753597, 9916155453, 9448738657.

ಜೂ.6ಕ್ಕೆ ಎಡಿನ್ ಕ್ರಿಕೆಟ್ ಲೀಗ್



ಮೈಸೂರು, ಜೂ.4(ಎಂಕೆ)– ಅಪೋಲೊ ಆಸ್ಪತ್ರೆಗಳ 'ಎಡಿನ್ ಕ್ರಿಕೆಟ್ ಲೀಗ್ (ಇಸಿಎಲ್)–2026' 7ನೇ ಆವೃತ್ತಿ ಪಂದ್ಯಾವಳಿಯೂ ಜೂ.6ರಂದು ಬೆಳಗ್ಗೆ 8.30ಕ್ಕೆ ಸಂತ ಫಿಲೋಮಿನಾ ಕಾಲೇಜು ಮೈದಾನದಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಎಡಿನ್ ಫೌಂಡೇಷನ್ ಉಪಾಧ್ಯಕ್ಷೆ ಜಿ.ಪಿ.ಬಿಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜೂ.21ರವರೆಗೆ ಪ್ರತಿ ಶನಿವಾರ ಹಾಗೂ ಭಾನುವಾರ ನಡೆಯಲಿದೆ. ಮೈಸೂರಿನ ಪ್ರಮುಖ ಕೈಗಾರಿಕೆಗಳು, ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಒಟ್ಟುಗೂಡಿ ಈ ಪಂದ್ಯಾವಳಿ ಆಯೋಜಿಸಿವೆ ಎಂದು ಮಾಹಿತಿ ನೀಡಿದರು.

ಪಂದ್ಯಾವಳಿಯಲ್ಲಿ ಪುರುಷರ 38 ತಂಡಗಳು ಹಾಗೂ 5 ಮಹಿಳಾ ತಂಡಗಳು ಭಾಗವಹಿಸಲಿದ್ದು, ಆಕರ್ಷಕ ಟ್ರೋಫಿಯೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮುವ ಪುರುಷರ ತಂಡಕ್ಕೆ ಥೈಲ್ಯಾಂಡ್ ಹಾಗೂ ಮಹಿಳಾ ತಂಡವನ್ನು ಗೋವಾ ಪ್ರವಾಸಕ್ಕೆ ಕಳುಹಿಸಲಾಗುವುದು ಎಂದು ಮಾಹಿತಿ ನೀಡಿದರು. ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲ ಡಾ.ರವಿ ಜೆ.ಡಿ.ಸಲ್ಡಾನಾ, ಮೈಸೂರು ಅಪೋಲೊ ಆಸ್ಪತ್ರೆಯ ಡಾ.ಶ್ರೇಯಸ್ ಆಳ್ವಾ, ಮಾರ್ಕೆಟಿಂಗ್ ಮ್ಯಾನೇಜರ್ ಟಿ.ಕುಶಾಲ್ ರಾವ್, ಟಾಟಾ ಅರಸ್ ಕಾರ್‌ನ ಮಾರಾಟ ವ್ಯವಸ್ಥಾಪಕರಾದ ಎನ್.ಕಿಶನ್ ಮತ್ತು ಮೇದಪ್ಪ, ಸ್ಮಾರ್ಟ್ ಸಲ್ಯೂಷನ್ಸ್‌ನ ಎಂಡಿ ಎನ್.ಕಿರಣ್‌ಕುಮಾರ್, ಸಿಹೆಚ್‌ಆರ್‌ಒ ಫೋರಂ ಕಾರ್ಯದರ್ಶಿ ಸಾಗರ್ ಬಿ.ಎಸ್.ಗೌಡ, ಸೈಟ್‌ಸೀ ಹಾಲಿಡೇಸ್ ಪ್ರೈ.ಲಿ.ನ ಸಿಇಒ ಶಶಿಕುಮಾರ್ ಉಪಸ್ಥಿತರಿದ್ದರು.

ನೈಪುಣ್ಯದಲ್ಲಿ ನಾಲ್ವಡಿ ಜಯಂತಿ ಆಚರಣೆ...



ಮೈಸೂರು ಸಂಸ್ಥಾನದ ಅಭಿವೃದ್ಧಿಯ ಹರಿಕಾರ ಹಾಗೂ ರಾಜರ್ಷಿ ಎಂದು ಖ್ಯಾತರಾಗಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲಾ ಆವರಣದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಅವರ ದೂರದೃಷ್ಟಿಯ ಆಡಳಿತ, ಶಿಕ್ಷಣ, ನೀರಾವರಿ, ಕೈಗಾರಿಕೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಕಾರ್ಯಕ್ರಮದಲ್ಲಿ ಸ್ಮರಿಸಲಾಯಿತು. ಈ ವೇಳೆ ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಕೆ.ಎಸ್.ದೇಚಮ್ಮ, ಶಾಲೆಯ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಜೂ.20ರಿಂದ ವಾರಾಂತ್ಯ ರಂಗಾಭಿನಯ ತರಬೇತಿ

ಮೈಸೂರು.ಜೂ.4–ಕೆ.ಎನ್.ವರದರಾಜು ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್, ಶ್ರೀಕಾಂತ ವಿದ್ಯಾಸಂಸ್ಥೆ ಹಾಗೂ ಲಯ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ವಾರಾಂತ್ಯ ರಂಗಾಭಿನಯ ತರಬೇತಿಯನ್ನು ಜೂನ್ 20ರಿಂದ 2027ರ ಮಾರ್ಚ್ 31 ವರೆಗೆ ಮೈಸೂರಿನ ಅಗ್ರಹಾರದ ಶಂಕರ ಮಠ ಬಡಾವಣೆಯ ಶ್ರೀಕಾಂತ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಲಾಗಿದೆ. ಈ ತರಗತಿಗಳು ಶನಿವಾರ ಮಧ್ಯಾಹ್ನ 3.30 ರಿಂದ ಸಂಜೆ 6.30ರವರೆಗೆ, ಭಾನುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯಲಿದೆ. ಶಿಬಿರದಲ್ಲಿ ರಂಗಭೂಮಿ ಪರಿಚಯ, ರಂಗ ಸಂಗೀತ, ಕೋಲಾಟ, ನವರಸ, ದೇಹ ಭಾಷೆ, ಧ್ವನಿ ಅಭ್ಯಾಸ, ಪ್ರಸಾದನ, ಮಾಸ್ಕ್ ಮೇಕಿಂಗ್ ಮುಂತಾದ ರಂಗ ತರಬೇತಿಗೆ ಸಂಬಂದಿಸಿದ ತರಗತಿ ನಡೆಸಲಾಗುತ್ತದೆ. ಮಾಹಿತಿಗೆ ಮೊ: ಕೌಶಿಕ್ ಕೆ.ಆರ್.ಪೇಟೆ 9036325575, ನಾಗರಾಜ ಹರನೂರ–9945567159 ಸಂಪರ್ಕಿಸಿ.

ಉಚಿತ ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು.ಜೂ.4– ಮೈಸೂರಿನ ಕುವೆಂಪುನಗರದ ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ ಉಚಿತ ಸಿದ್ಧ ಸಮಾಧಿ ಯೋಗ ಶಿಬಿರವನ್ನು ಜೂ.8ರಿಂದ 14 ದಿನಗಳವರೆಗೆ ಹಮ್ಮಿಕೊಳ್ಳಲಾಗಿದೆ. ಜೂ.7ರಂದು ಸಂಜೆ 6 ಗಂಟೆಗೆ ಸಿದ್ಧ ಸಮಾಧಿ ಯೋಗ ಶಿಬಿರದ ಪರಿಚಯ ಕಾರ್ಯಕ್ರಮ ನಡೆಯಲಿದೆ. ನೋಂದಣಿ, ವಿವರಗಳಿಗೆ ಮೊ: ರಮೇಶ್‌ಚಂದ್ರ 9448458050, ಮನೋಹರ್‌ರಾವ್ 8618762110 ಸಂಪರ್ಕಿಸಿ.

ಸತ್ಯ ಚೆಟ್ಟಿ ನೇಮಕ



ಮೈಸೂರು: ಭಾರತೀಯ ವಕೀಲರ ಸಂಘ ಮೈಸೂರು ಘಟಕದ ಅಧ್ಯಕ್ಷರಾಗಿ ಸತ್ಯ ಚೆಟ್ಟಿ ನೇಮಕಗೊಂಡಿದ್ದಾರೆ. ಅವರು ಅಟಾರ್ನಿ ಅಟ್ ಲಾ, ಸಾಲಿಸಿಟರ್ ಆಗಿದ್ದು, ಕಾನೂನು, ವ್ಯವಹಾರ ನಿರ್ವಹಣೆ, ಕಾರ್ಪೊರೇಟ್–ಹಣಕಾಸು ಕಾನೂನು, ಫರೆನ್ಸಿಕ್ ಸೈನ್ಸ್, ಕ್ರಿಮಿನಲ್ ಲಾ ಹಾಗೂ ಬೌದ್ಧಿಕ ಆಸ್ತಿ ಹಕ್ಕುಗಳ ಕ್ಷೇತ್ರಗಳಲ್ಲಿ ಬಹುಶಾಖಾ ಶೈಕ್ಷಣಿಕ ಅರ್ಹತೆಗಳನ್ನು ಹೊಂದಿದ್ದಾರೆ.

ನಿಧನ

ಆನಂದ್ ಆಳ್ವಾರ್



ಮೈಸೂರು, ಜೂ. 4– ಮೈಸೂರಿನ ಬನ್ನಿಮಂಟಪ, ಹನುಮಂತನಗರದ ಕೆಎಸ್‌ಆರ್‌ಟಿಸಿ ಬ್ಲಾಕ್ ನಿವಾಸಿ ಹಾಗೂ ಕೆಎಸ್‌ಆರ್‌ಟಿಸಿ ನಿವೃತ್ತ ಜೂನಿಯರ್ ಅಕೌಂಟೆಂಟ್ ಆನಂದ್ ಆಳ್ವಾರ್(86) ಅವರು ಬುಧವಾರ(ಜೂ.3) ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ ಶ್ರೀಮತಿ ಕುಮುದ, ಪುತ್ರಿಯರಾದ ಎ.ಲಕ್ಷ್ಮಿ, ಎ.ಪರಂದೇವಿ, ಪುತ್ರ ಎ.ಶ್ರೀನಿವಾಸಚಾರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಬೆಳಗ್ಗೆ ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.06.2026 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ ಆಸ್ಪತ್ರೆ, ಜೆಎಲ್‌ಬಿ ರಸ್ತೆ, ಬೆಳಗ್ಗೆಯಿಂದ.
- **ಶ್ರೀ ವೇಂಕಟಾಚಲಧಾಮ, ಶ್ರೀ ಭಾಗವತಾಶ್ರಮ ಪ್ರತಿಷ್ಠಾನ (ಉಡುಪಿ ಶ್ರೀ ಭಂಡಾರಕೇರಿ ಮಠ) :** 15ನೇ ವಾರ್ಷಿಕೋತ್ಸವ, ಬೆಳಗ್ಗೆ ತತ್ತ್ವಮಂತ್ರ ಹೋಮಾದಿಗಳು, ಕಲಶಾಭಿಷೇಕ, ಅಲಂಕಾರ, ಶ್ರೀಗಳವರಿಂದ ಶ್ರೀ ಮನ್ಮಧ್ವಕರಾರ್ಚಿತ ಶ್ರೀ ಕೋದಂಡರಾಮದೇವರ ಸಂಸ್ಥಾನ ಪೂಜೆ, ಸಂಜೆ ಸಂಗೀತ ಕಾರ್ಯಕ್ರಮ, ಶ್ರೀಗಳವರ ಆಶೀರ್ವಚನ, ರಥೋತ್ಸವ, ಸಂಕೀರ್ತನೆಗಳು, ಅಷ್ಟಾವಧಾನ, ರಂಗಪೂಜೆ ಇತ್ಯಾದಿಗಳು, ಸ್ಥಳ: ಶ್ರೀ ವೇಂಕಟಾಚಲಧಾಮ, ಚಾಮರಾಜ ಜೋಡಿ ರಸ್ತೆ.
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀಯವರಿಗೆ ಮಹಾಭಿಷೇಕ, ಸಂಜೆ 7ಕ್ಕೆ ವರ್ಷೋತ್ಸವ, ಸ್ಥಳ: ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ, ಶ್ರೀ ಶ್ರೀನಿವಾಸಸ್ವಾಮಿ ದೇವಸ್ಥಾನದ ರಸ್ತೆ, ತಿಲಕ್‌ನಗರ.
- **ಸುಯೋಗ್ ಆಸ್ಪತ್ರೆ :** ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಸಮರ್ಥನಂ ಅಂಗವಿಕಲರ ಸಂಸ್ಥೆ :** 8ನೇ ವರ್ಷದ ವನಮಹೋತ್ಸವ ಹಾಗೂ ವಿಶ್ವ ಪರಿಸರ ದಿನಾಚರಣೆ, ಸ್ಥಳ: ಜೋಡಿ ರಸ್ತೆ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.
- **ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು :** ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಉಪಸ್ಥಿತರು: ಉಪನ್ಯಾಸಕ ವಿ.ಪ್ರದೀಪ್, ಬಿ.ರಾಧ, ಎಸ್.ವೇದಾವತಿ, ಪ್ರಿನ್ಸಿಪಾಲ್ ವಿ.ಡಿ.ಸುನೀತಾರಾಣಿ, ಸ್ಥಳ: ದ್ವಿತೀಯ ಪಿಯುಸಿ ಕೊಠಡಿ, ಬೆಳಗ್ಗೆ 11ಕ್ಕೆ.
- **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯೂವೆಲ್ಸ್ :** ಆಭರಣ ಪ್ರದರ್ಶನ, ಮುಖ್ಯ ಅತಿಥಿಗಳು : ನಟಿ ಮತ್ತು ರೂಪದರ್ಶಿ ಶ್ರೀಮತಿ ರೋಶನಿ ಪ್ರಕಾಶ್, ಸ್ಥಳ: ಗ್ರ್ಯಾಂಡ್ ಮರ್ಕ್ಯೂರ್ ಮೈಸೂರು, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಕಾಡುಕಲಿಸುವ ಪಾಠ', ಪ್ರಾಯೋಜಕರು–Prabha Super Speciality Eye Clinic, Bengaluru & Vittala Institute of Ophthalmology, Bengaluru, ಪ್ರಸ್ತುತಿ–ಟಿ.ಎಸ್. ಗೋಪಾಲ್, 8.30 ಯೋಗದ ಜಗತ್ತು, 8.45 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಅಂತಾರಾಷ್ಟ್ರೀಯ ಪರಿಸರ ದಿನಾಚರಣೆಯ ಸಂದರ್ಭದಲ್ಲಿ 'ಪರಿಸರ ಮತ್ತು ಆರೋಗ್ಯ' ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಮೈಸೂರು ಘಟಕದ ಅಧ್ಯಕ್ಷರು ಹಾಗೂ ಮಕ್ಕಳ ತಜ್ಞರಾದ ಡಾ. ಶಿವು .ಪಿ ಹಾಗೂ ಮಕ್ಕಳ ನರರೋಗ ತಜ್ಞರಾದ ಡಾ.ಅನುಷಾರಾಜ್ .ಕೆ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ – ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಿ.ವಿ. ರಾಮನ್ ಹಾಗೂ ಬಿ.ವಿ.ಲಕ್ಷ್ಮಣನ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲ ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ 'ಕೆನ್ನಾಯಿಯ ಜಾಡಿನಲಿ' ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಶೇಷ ಸಂದರ್ಶನ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಈ ಕುರಿತು ಮಂಡ್ಯ ತಾಲೂಕು ದುದ್ದ ಹೋಬಳಿ, ಗೊರವಾಲೆ ಗ್ರಾಮದ ಜಯಶಂಕರ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಪದ್ಮಮೂರ್ತಿ – ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ, ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯ ಸಂತುಷ್ಠ ತೀರ್ಥರ ಸನ್ನಿಧಾನ:** ಅಧಿಕ ಮಾಸೋತ್ಸವ, ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ, ಯುವಾತ್ಮ ಮೈಸೂರು ತಂಡದವರಿಂದ ವಿಜಯಾಗ್ರಜ ಜಯ ನಾಟಕ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 6.30ರಿಂದ.
- **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್ :** ವಿಶ್ವ ಪರಿಸರ ಮಾಸಾಚರಣೆ, ಮುಖ್ಯ ಅತಿಥಿಗಳು : ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ರಮೇಶ್ ಕುಮಾರ್, ಗೌರವ ಅತಿಥಿಗಳು : ಎಂಬಿಸಿಟಿ ವ್ಯವಸ್ಥಾಪಕ ಟ್ರಸ್ಟಿ ಎನ್. ಸುಬ್ರಮಣ್ಯ, ಸ್ಥಳ: ಎಂಬಿಸಿಟಿ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ವಿಶ್ವೇಶ್ವರನಗರ, ಸಂಜೆ 6.30ಕ್ಕೆ.

ಮೈಸೂರಿನಾದ್ಯಂತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

- ಅರಮನೆ ಮುಂಭಾಗದಿಂದ ವೈಭವದ ಮೆರವಣಿಗೆ, ಮತ್ತೊಂದೆಡೆ ಸಾರೋಟು ಮೆರವಣಿಗೆ
- ನಾಲ್ವಡಿಯವರ ಸಾಧನೆ, ಕೊಡುಗೆಗಳನ್ನು ಕೊಂಡಾಡಿದ ನಾಯಕರು, ಮೆರುಗು ತಂದ ಕಲಾತಂಡಗಳು



ಕಲಾಮಂದಿರದಲ್ಲಿ ನಾಲ್ವಡಿ ಅವರಿಗೆ ಯದುವೀರ್ ಪುಷ್ಪಾರ್ಚನೆ ಸಲ್ಲಿಸಿದರು.

> ಈ ದಿನ ನಾನು ಯಾರ ವಿರುದ್ಧವು ಮಾತನಾಡುವುದಿಲ್ಲ. ಆದರೆ ರಾಜ್ಯವು ಈಗಾಗಲೇ ಸಾಲದ ಸುಳಿಯಲ್ಲಿದ್ದು ಅದನ್ನು ಮುಖ್ಯಮಂತ್ರಿಗಳು ಹೇಗೆ ನಿರ್ವಹಣೆ ಮಾಡುತ್ತಾರೆ ಕಾದು ನೋಡಬೇಕಾಗಿದೆ. ಪ್ರಮುಖವಾಗಿ ಎಲ್ಲಾ ರಸ್ತೆಗಳು ಗುಂಡಿ ಬಿದ್ದಿದ್ದು ಅವುಗಳ ಅಭಿವೃದ್ಧಿಗೆ ಗಮನಹರಿಸಬೇಕಾಗಿದೆ.
> -ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು

ಮೈಸೂರು, ಜೂ.4(ಜಿಎ)–ಮೈಸೂರು ನಗರದಾದ್ಯಂತ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ ಸಮಿತಿ ವತಿಯಿಂದ ಅರಮನೆ ಆವರಣದಲ್ಲಿರುವ ಪುರಾತನ ಶ್ರೀ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಮೆರವಣಿಗೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಸಿ.ಎನ್. ಮಂಜೇಗೌಡ ಚಾಲನೆ ನೀಡಿದರು.

ಬೆಳ್ಳಿ ರಥದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರವನ್ನು ಇರಿಸಿ, ಪೊಲೀಸ್ ಅಶ್ವಾರೋಹಿ ದಳ, ಪೊಲೀಸ್ ಬ್ಯಾಂಡ್ ಹಾಗೂ ವಿವಿಧಕಲಾತಂಡಗಳೊಂದಿಗೆ ಮೆರವಣಿಗೆ ಹೊರಟು ಕೆ.ಆರ್.ವೃತ್ತ ತಲುಪಿತು. ಈ ವೇಳೆ ಗಣ್ಯರು ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಸಲ್ಲಿಸಿದರು. ನಂತರ ಅದ್ದೂರಿ ಮೆರವಣಿಗೆಯೂ ಡಿ.ದೇವರಾಜ ಅರಸು ರಸ್ತೆ–ಮೆಟ್ರೋಪೋಲ್ ವೃತ್ತದ ಮೂಲಕ ಕಲಾಮಂದಿರ ತಲುಪಿತು. ನಂತರ ಕಲಾ ಮಂದಿರದಲ್ಲಿ ಆಯೋಜಿಸಿದ್ದ

ವೇದಿಕೆ ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಿ ಮಾತನಾಡಿ, ಇಂದು ಕರ್ನಾಟಕವು ಒಂದು ಪ್ರಗತಿಪರ ರಾಜ್ಯವಾಗಿ ಗುರುತಿಸಿಕೊಂಡಿರುವುದಕ್ಕೆ ಅನೇಕ ನಾಯಕರ ಕೊಡುಗೆ ಇದೆ. ಅದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ಸಾಧನೆಗಳು ಅತ್ಯಂತ ಪ್ರಮುಖವಾದವು. ಅವರ ಈ ಸಾಧನೆಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು. ಸುವರ್ಣ ಮೈಸೂರಿನಂತೆ ಒಂದು ಅಭಿವೃದ್ಧಿ ಹೊಂದಿದ ಕರ್ನಾಟಕವನ್ನು ನಿರ್ಮಿಸುವುದೇ ನಾಲ್ವಡಿ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ. ಅವರ ಮೌಲ್ಯಗಳನ್ನು ಮತ್ತು ತತ್ವಗಳನ್ನು ಮುಂಬರುವ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರು ಹಾಗೂ ಲೇಖಕರು ಸಿದ್ದಸ್ವಾಮಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದ 29 ಮಂದಿಗೆ ಕರ್ನಾಟಕ ರಾಜ್ಯ ಸರ್ಕಾರದ ಪ್ರತಿಷ್ಠಿತ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಅಭಿನಂದಿಲಾಯಿತು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ.ಬಿ.ಎಸ್.ಮಂಜುನಾಥ ಸ್ವಾಮಿ, ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ. ಸುದರ್ಶನ್, ಮಾಜಿ ಮೇಯರ್ ಪುರುಷೋತ್ತಮ್, ಸೋಮಯ್ಯ ಮಲಿಯೂರು, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅರಸು ಮಂಡಳಿಯಿಂದ ನಾಲ್ವಡಿ ಜಯಂತಿ: ಮೈಸೂರಿನ ಅರಸು ಮಂಡಳಿ ವತಿಯಿಂದ ಕೃಷ್ಣ ಬುಲೇವಾರ್ಡ್ ರಸ್ತೆಯಲ್ಲಿರುವ ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ ಸಂಸ್ಥೆ ಆವರಣ ದಿಂದ ನಾಲ್ವಡಿ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಕಪ್ಪಡಿ ಕ್ಷೇತ್ರದ ಮಠಾಧಿಪತಿ ಎಂ.ಎಲ್. ಶ್ರೀ ವರ್ಚಸ್ವಿ ಶ್ರೀಕಂಠ ಸಿದ್ದಲಿಂಗ ರಾಜೇಅರಸ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಅವರುಗಳು ನಾಲ್ವಡಿ ಕಾರ್ಯಗಳನ್ನು ಸ್ಮರಿಸಿದರು.

ವಿಶೇಷ ಮೆರವಣಿಗೆ : ಕಂಸಾಳೆ, ವೀರಗಾಸೆ, ಹರಿನಾಮ ಸ್ಮರಣೆ ಮಾಡುವವರು ಮೆರವಣಿಗೆಯ ಮೆರುಗು ಹೆಚ್ಚಿಸಿದರು. ಸಾರೋಟುಗಳಲ್ಲಿ ನಾಲ್ವಡಿ ಅವರ ಸಾಧನೆಯ ಬರಹವುಳ್ಳ ಬ್ಯಾನರ್‌ಗಳು ರಾರಾಜಿಸಿದವು. ಜಯಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್‌ನಿಂದ ಆರಂಭವಾದ ಮೆರವಣಿಗೆಯು ಕೃಷ್ಣರಾಜ ಬುಲೇವಾರ್ಡ್ ರಸ್ತೆಯ ಮೂಲಕ, ವಾಣಿ ವಿಲಾಸ ರಸ್ತೆ, ಮಾಧವರಾವ್ ವೃತ್ತ, ಸಯ್ಯಾಜಿ ರಾವ್ ರಸ್ತೆ ಮೂಲಕ ಸಾಗಿ ಕೃಷ್ಣರಾಜ ವೃತ್ತದಲ್ಲಿ ಸಮಾಪನಗೊಂಡಿತು.



ಅರಸು ಮಂಡಳಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ನಾಲ್ವಡಿ ಅವರಿಗೆ ನಮಿಸಿದರು.

ಮೈಸೂರು ಜಿಲ್ಲೆಯಲ್ಲಿ ಶೇ.96ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣ

ಜೂ.30ರಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ

- ತಪ್ಪು ಮಾಹಿತಿ ನೀಡುವುದು ಶಿಕ್ಷಾರ್ಹ ಅಪರಾಧ
- ಅರ್ಹ ಮತದಾರರ ಸೇರ್ಪಡೆಗೆ ಅವಕಾಶ



ಮತದಾರರ ಮ್ಯಾಪಿಂಗ್ ಮತ್ತು ಎಸ್‌ಐಆರ್ ಪ್ರಕ್ರಿಯೆ ಸಂಬಂಧ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಗುರುವಾರ ಸಭೆ ನಡೆಸಿದರು.

ಮೈಸೂರು, ಜೂ.4(ಎಂಕೆ)–ಚುನಾವಣಾ ಆಯೋಗದ ನಿರ್ದೇಶನದಂತೆ ಮೈಸೂರು ಜಿಲ್ಲೆಯಲ್ಲಿ ಶೇ.96 ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದ್ದು, ಜೂ.30 ರಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದರು.

ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಗುರುವಾರ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜು.29ರವರೆಗೆ ಬಿಎಲ್‌ಓ (ಬೂತ್ ಮಟ್ಟದ ಅಧಿಕಾರಿಗಳು)ಗಳು ಮನೆ ಮನೆಗೆ ಭೇಟಿ ನೀಡಲಿದ್ದು, ಜೂ.20ರಿಂದ 29 ರವರೆಗೆ ಸಿದ್ಧತೆ, ತರಬೇತಿ ಮತ್ತು ಮುದ್ರಣ ಚಟುವಟಿಕೆಗಳು ನಡೆಯಲಿವೆ ಎಂದರು. ಜೂ.30ರಿಂದ ಜು.29ರವರೆಗೆ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಲಿದ್ದು, ಜು. 29 ರಂದು ಮತಗಟ್ಟೆಗಳ ರಾಷನಲೈಜೇಷನ್ ಪ್ರಕ್ರಿಯೆ ನಡೆಸಲಾಗುವುದು. ಆ.5ರಂದು ಕರಡು ಮತ ದಾರರ ಪಟ್ಟಿ ಪ್ರಕಟಿಸಲಿದ್ದು,

ಆ.5ರಿಂದ ಸೆ.4ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗುವುದು. ಸೆ.5ರಿಂದ ಅ.3ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಇತ್ಯರ್ಥಗೊಳಿಸಿ, ಅ.7 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ವಿವರಿಸಿದರು.

ಶಿಕ್ಷಾರ್ಹ ಅಪರಾಧ!: ಮನೆ ಮನೆಗೆ ಭೇಟಿ ನೀಡುವ ಬಿಎಲ್‌ಓಗಳು ಎನ್ಯೂಮರೇಷನ್ ಫಾರಂ (ಗಣತಿ ನಮೂನೆ) ನೀಡಲಿದ್ದು, ಜು.29ರೊಳಗೆ ಭರ್ತಿ ಮಾಡಿದ ಎನ್ಯೂಮರೇಷನ್ ಫಾರಂ ಅನ್ನು ವಾಪಸ್ ಪಡೆದು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಿದ್ದಾರೆ. ಆದ್ದರಿಂದ ಸಾರ್ವಜನಿಕರು ತಮಗೆ ನೀಡಲಾಗುವ ಎನ್ಯೂಮರೇಷನ್ ಫಾರಂನಲ್ಲಿ ನಿಖರ ಮಾಹಿತಿ ಭರ್ತಿ ಮಾಡಿ, ಸಹಿ ಮಾಡಿ ನೀಡಬೇಕು. ಮರಣ ಹೊಂದಿರುವವರು, ವಲಸೆ ಹೋಗಿರುವವರ ವಿವರವನ್ನು ಭರ್ತಿ ಮಾಡಿ ನೀಡುವುದು ಹಾಗೂ ಇನ್ನಿತರೆ ತಪ್ಪು ಮಾಹಿತಿ ಒದಗಿಸುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಎಚ್ಚರಿಕೆ ನೀಡಿದರು.

ಪಾರದರ್ಶಕವಾಗಿ ನಡೆಯಲಿದೆ: ಭಾರತ ದೇಶದ ಪ್ರಜೆಯಾಗಿರುವ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು. ಒಂದು ಸ್ಥಳದಲ್ಲಿ ಮಾತ್ರ ಮತದಾನದ ಹಕ್ಕು ಪಡೆದಿರಬೇಕು ಎಂಬ ಸದುದ್ದೇಶದಿಂದ ಪಾರದರ್ಶಕವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ವಿವಿಧ ಪರಿಶೀಲನೆ, ಅಗತ್ಯ ಮಾಹಿತಿ ಮತ್ತು ದಾಖಲೆ ಪಡೆದ ನಂತರ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾಗುವುದು ಎಂದರು.

ಶೇ.96ರಷ್ಟು ಪೂರ್ಣ: ಚುನಾವಣಾ ಆಯೋಗದ ಮಾರ್ಗಸೂಚಿಯಂತೆ 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು, ಪ್ರಸ್ತುತ ಇರುವ 2025ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಮಾಡಿ ಮ್ಯಾಪಿಂಗ್ ಪ್ರಕ್ರಿಯೆ ನಡೆಸಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜಿಲ್ಲೆಯಲ್ಲಿ ಈಗಾಗಲೇ ಶೇ.96ರಷ್ಟು ಮತದಾರರನ್ನು ಗುರುತಿಸಿ, ಕುಟುಂಬಗಳ ಲಿಂಕೇಜ್‌ನೊಂದಿಗೆ ಹೊಂದಾಣಿಕೆ ಮಾಡಲಾಗಿದೆ ಎಂದರು.

ಅರ್ಹ ಮತದಾರರ ಹೆಸರು ಸೇರ್ಪಡೆ: ಅಗತ್ಯ ದಾಖಲೆ ಪಡೆದು ಅರ್ಹ ಮತದಾರರ ಹೆಸರು ಮತಪಟ್ಟಿಗೆ ಸೇರ್ಪಡೆ ಮಾಡಲಾಗುವುದು. ಕುಟುಂಬದ ಮುಖ್ಯಸ್ಥರ ಹೆಸರು 2002ರ ಮತದಾರರ ಪಟ್ಟಿಯಲ್ಲಿದ್ದರೆ, ಹೊಸದಾಗಿ ಅರ್ಹತೆ ಪಡೆಯುವ ಕುಟುಂಬದ ಇತರೆ ಸದಸ್ಯರ ಹೆಸರನ್ನು ಸೇರ್ಪಡೆ ಮಾಡುವುದು ಸುಲಭವಾಗುತ್ತದೆ. ಮದುವೆಯಾಗಿ ಅಥವಾ ವಲಸೆ ಬಂದು ನೆಲೆಸಿರುವವರ ಹೆಸರು ಹಳೆಯ ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ, ಅವರಿಗೆ ಫ್ಯಾಮಿಲಿ ಲಿಂಕೇಜ್ ಸಿಗುವುದಿಲ್ಲ. ಈ ಹಿಂದೆ ಅವರು ವಾಸವಾಗಿದ್ದ ಸ್ಥಳದಲ್ಲಿನ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇದ್ದರೆ, ಆ ಮಾಹಿತಿ ಅನುಸಾರ ಹೆಸರು ಸೇರ್ಪಡೆ ಮಾಡಬಹುದು. ಮ್ಯಾಪಿಂಗ್ ಆಗದೆ ಇರುವ ವರು ಎನ್ಯೂಮರೇಟರ್ ಫಾರಂ ಜೊತೆ ಚುನಾವಣಾ ಆಯೋಗ ನಿಗದಿಪಡಿಸಿರುವ ದಾಖಲಾತಿ ಸಲ್ಲಿಸಿದರೆ ಮತಪಟ್ಟಿಗೆ ಅವರ ಹೆಸರು ಸೇರಿಸಲು ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಉಪಸ್ಥಿತರಿದ್ದರು.

ಸಮನ್ವಯದಿಂದ ಕಾರ್ಯ ನಿರ್ವಹಿಸಲು ಮನವಿ...

> ಮನೆ ಮನೆಗೆ ಭೇಟಿ ನೀಡುವ ಬಿಎಲ್‌ಒಗಳೊಂದಿಗೆ ಆಯಾ ರಾಜಕೀಯ ಪಕ್ಷಗಳ ಬಿಎಲ್‌ಎ(ಬೂತ್ ಏಜೆಂಟ್)ಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಎಲ್ಲಾ ಮನೆಗಳಿಗೂ ಎನ್ಯೂಮರೇಷನ್ ಫಾರಂಗಳನ್ನು ತಲುಪಿಸಿ, ಭರ್ತಿ ಮಾಡಿ ಕೊಡುವ ಬಗ್ಗೆ ಸಾರ್ವಜನಿಕರಿಗೆ ತಿಳಿಹೇಳಬೇಕು. ಕನಿಷ್ಠ ಮೂರು ಬಾರಿ ಬಿಎಲ್‌ಒಗಳು ಮನೆಗಳಿಗೆ ಭೇಟಿ ನೀಡಲಿದ್ದು, ಮತದಾರರ ಹೆಸರು ಮತದಾರರ ಪಟ್ಟಿಯಿಂದ ಕೈಬಿಡದಂತೆ ಎಚ್ಚರವಹಿಸಬೇಕು. - ಜಿ.ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾಧಿಕಾರಿ





ವಿಚಾರಣೆ ನೋಟಿಸ್

ಶ್ರೀ ಮಹಾದೇವ್ , ಸಿಬ್ಬಂದಿ ಸಂಖ್ಯೆ 130
ಸ್ಟೀರ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್

ನೀವು ದಿನಾಂಕ **13.10.2025** ರಿಂದ ಸಂಸ್ಥೆಗೆ ಸತತವಾಗಿ ಗೈರುಹಾಜರಾರುತ್ತೀರಿ. ನಿಮ್ಮ ಗೈರು ಹಾಜರಾತಿಗೆ ಆಡಳಿತ ವರ್ಗವು ದಿನಾಂಕ 27.03.2026 ರಂದು ಆರೋಪ ಮತ್ತು **ಕಾರಣ ಕೇಳಿ ತಿಳುವಳಿಕೆ ಪತ್ರ** ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಿಮ್ಮಿಂದ ಯಾವುದೇ ಸಮಾಜಾಯಿಸಿ ಬಂದಿರುವುದಲ್ಲ ಆಡಳಿತ ವರ್ಗವು ನಿಮ್ಮ ಮೇಲೆ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಶ್ರೀ ಎಂ ಡಿ ರಂಗಸ್ವಾಮಿ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿರುತ್ತಾರೆ. ಮುಂದಿನ ವಿಚಾರಣೆಯನ್ನು **ದಿನಾಂಕ 20.06.2026ರಂದು ಬೆಳಿಗ್ಗೆ 10.30 ಕ್ಕೆ ಸಂಸ್ಥೆಯ ಆವರಣದಲ್ಲಿ ನಿಗದಿಪಡಿಸಿರುತ್ತಾರೆ.** ಆ ದಿನದಂದು ನೀವು ವಿಚಾರಣೆಗೆ ಹಾಜರಾಗತಕ್ಕದ್ದು ಇಲ್ಲದಿದ್ದಲ್ಲಿ ವಿಚಾರಣೆಯನ್ನು ಏಕ ಪಕ್ಷೀಯವಾಗಿ ನಡೆಸಿ ಕಾನೂನಾತ್ಮಕವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ದಿನಾಂಕ: 04.06.2026
ಸ್ಥಳ: ಬೆಂಗಳೂರು

ಆಡಳಿತ ವರ್ಗ
ಸ್ಟೀರ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಪ್ರಕಟಣೆಯ ಅನುಸೂಚನೆಯಲ್ಲಿ ವಿವರಿಸಲಾದ ಸ್ಥಿರ ಆಸ್ತಿಯನ್ನು ಅದರ ಸಂಪೂರ್ಣ ಹಾಗೂ ನಿರ್ವಿವಾದ ಮಾಲೀಕರಾದಶ್ರೀ ಅಭಿಷೇಕ್ ಮೋಹನ್ ಗೌಡ, ದಿ. ಶ್ರೀ ಎಂ.ಹೆಚ್. ಅಮರನಾಥ್ ಅಲಿಯಾಸ್ ಅಂಬರೀಷ್ ಹಾಗೂ ಶ್ರೀಮತಿ ಸುಮಲತಾ ಅಮರನಾಥ್ ಅವರ ಪುತ್ರರು, ಪ್ರಸ್ತುತ ನಂ.172/ಎ. 21ನೇ ಮುಖ್ಯ ರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು 560078 ರಲ್ಲಿ ವಾಸವಾಗಿರುವವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ **(MUDA)** ವತಿಯಿಂದ ಅನುಸೂಚಿತ ಆಸ್ತಿಯನ್ನು ದಿ. ಶ್ರೀ ಎಂ.ಹೆಚ್. ಅಮರನಾಥ್ ಅಲಿಯಾಸ್ ಅಂಬರೀಷ್ (ಕನ್ನಡ ಚಲನಚಿತ್ರರಂಗದಲ್ಲಿ "ರೆಬೆಲ್ ಸ್ಟಾರ್ ಅಂಬರೀಷ್" ಎಂದು ಪ್ರಸಿದ್ಧರು) ಅವರಿಗೆ 12.08.2008 ರಂದು ನೋಂದಾಯಿತ ಮಾರಾಟ ಪತ್ರದ ಮೂಲಕ ಹಂಚಿಕೆ ಮಾಡಿ ಮಾರಾಟ ಮಾಡಲಾಗಿತ್ತು. ದಿ. ಶ್ರೀ ಎಂ.ಹೆಚ್. ಅಮರನಾಥ್ ಅವರು 24.11.2018 ರಂದು ನಿಧನ ಹೊಂದಿದ ನಂತರ, ಅವರ ಪತ್ನಿ ಶ್ರೀಮತಿ ಸುಮಲತಾ ಅಮರನಾಥ್ ಹಾಗೂ ಪುತ್ರ ಶ್ರೀ ಅಭಿಷೇಕ್ ಮೋಹನ್ ಗೌಡ ಅವರು ಅವರ ಏಕೈಕ ಕಾನೂನುಬದ್ಧ ಉತ್ತರಾಧಿಕಾರಿಗಳಾಗಿ ಸದರಿ ಆಸ್ತಿಯನ್ನು ಅನುವಂಶಿಕವಾಗಿ ಪಡೆದಿರುತ್ತಾರೆ. ನಂತರ, ಶ್ರೀಮತಿ ಸುಮಲತಾ ಅಮರನಾಥ್ ಅವರು ತಮ್ಮ ಪಾಲಿನ ಎಲ್ಲಾ ಹಕ್ಕು, ಹಿತಾಸಕ್ತಿ ಹಾಗೂ ಸ್ವಾಮ್ಯವನ್ನು ತಮ್ಮ ಪುತ್ರ ಶ್ರೀ ಅಭಿಷೇಕ್ ಮೋಹನ್ ಗೌಡ ಅವರ ಪರವಾಗಿ 26.05.2026 ರಂದು ನೋಂದಾಯಿತ ಬಿಡುಗಡೆ ಪತ್ರ **(Release Deed)** ಮೂಲಕ ಬಿಡುಗಡೆ ಮಾಡಿರುತ್ತಾರೆ. ಅದರಂತೆ ಪ್ರಸ್ತುತ ಶ್ರೀ ಅಭಿಷೇಕ್ ಮೋಹನ್ ಗೌಡ ಅವರು ಸದರಿ ಆಸ್ತಿಯ ಏಕೈಕ ಮತ್ತು ಸಂಪೂರ್ಣ ಮಾಲೀಕರಾಗಿರುತ್ತಾರೆ. ಆದುದರಿಂದ, ಸದರಿ ಅನುಸೂಚಿತ ಆಸ್ತಿ ಅಥವಾ ಅದರ ಯಾವುದೇ ಭಾಗದ ಮೇಲೆ ಯಾವುದೇ ಹಕ್ಕು. ಮಾಲೀಕತ್ವ, ಬಡ್ಡಿ. ಪಾಲು. ಅಡಮಾನ, ಬಾಡಿಗೆ, ಗುತ್ತಿಗೆ, ಸುಲಭಾಧಿಕಾರ **(Easement)**, ವಾರಸುದಾರಿಕೆ ಹಕ್ಕು. ಸ್ವಾಧೀನ ಹಕ್ಕು, ಲಗತ್ತು, ನ್ಯಾಯಾಲಯದ ತಡೆಯಾಜ್ಞೆ, ಭಾರ **(Encumbrance)**ಅಥವಾ ಇತರೆ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಹೊಂದಿರುವ ಯಾವುದೇ ವ್ಯಕ್ತಿ, ಸಂಸ್ಥೆ, ಬ್ಯಾಂಕ್, ಹಣಕಾಸು ಸಂಸ್ಥೆ, ಸರ್ಕಾರಿ ಪ್ರಾಧಿಕಾರ ಅಥವಾ ಇತರೆ ಯಾರೇ ಆಗಿದ್ದರೂ. ಈ ಪ್ರಕಟಣೆಯ ದಿನಾಂಕದಿಂದ15 (ಹದಿನೈದು) ದಿನಗಳೊಳಗಾಗಿ ತಮ್ಮ ಹಕ್ಕುಗಳನ್ನು ಸಮರ್ಥಿಸುವ ಮೂಲ ದಾಖಲೆಗಳು ಅಥವಾ ದೃಢೀಕೃತ ಪ್ರತಿಗಳೊಂದಿಗೆ ಕೆಳಸಹಿ ಮಾಡಿದ ವಕೀಲರಿಗೆ ಲಿಖಿತವಾಗಿ ತಿಳಿಸಬೇಕು.ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಅಥವಾ ಹಕ್ಕು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಆಸ್ತಿಯ ಕುರಿತು ಯಾರಿಗೂ ಯಾವುದೇ ಹಕ್ಕು ಅಥವಾ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ನನ್ನ ಕಕ್ಷಿದಾರರು ಮಾರಾಟ ವ್ಯವಹಾರವನ್ನು ಮುಂದುವರಿಸಲಿದ್ದಾರೆ. ನಂತರ ಸ್ವೀಕರಿಸಲಾಗುವ ಯಾವುದೇ ಹಕ್ಕು, ಆಕ್ಷೇಪಣೆ ಅಥವಾ ಬೇಡಿಕೆಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅದನ್ನು ತ್ಯಜಿಸಿದಂತೆಯೇ **(Waived)** ಪರಿಗಣಿಸಲಾಗುವುದು. ಯಾವುದೇ ಸುಳ್ಳು, ಆಧಾರರಹಿತ ಅಥವಾ ಮೋಸದ ಉದ್ದೇಶದ ಹಕ್ಕುಗಳನ್ನು ಪ್ರತಿಪಾದಿಸುವವರ ವಿರುದ್ಧ ಅನ್ವಯಿಸುವ ಕಾನೂನುಗಳ ಅಡಿಯಲ್ಲಿ ಸೂಕ್ತ ನಾಗರಿಕ ಹಾಗೂ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳಲಾಗುವುದು.

ಅನುಸೂಚನೆ

ಮೈಸೂರು ನಗರ, ಚಾಮರಾಜ ಮೊಹಲ್ಲಾ, ಜೆ.ಸಿ.ಎಸ್.ಟಿ. (ಕುವೆಂಪುನಗರ) ಜಿ&ಹೆಚ್ ಬ್ಲಾಕ್, 1ನೇ ಹಂತ, ಗಗನಚುಂಬಿ ಡಬಲ್ ರಸ್ತೆಯಲ್ಲಿರುವ, ಸೈಟ್ ನಂ.1260 ಹೊಂದಿರುವ ವಸತಿ ಆಸ್ತಿ; ಪೂರ್ವ–ಪಶ್ಚಿಮ 24 ಮೀಟರ್ ಹಾಗೂ ಉತ್ತರ–ದಕ್ಷಿಣ 15 ಮೀಟರ್ ಅಳತೆ ಹೊಂದಿದ್ದು, ಒಟ್ಟು 360 ಚದರ ಮೀಟರ್ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ. ಇ–ಖಾತಾ ಆಸ್ತಿ ಸಂಖ್ಯೆ: 3567308755. ಗಡಿಗಳು:ಪೂರ್ವಕ್ಕೆ : ರಸ್ತೆ (ಗಗನಚುಂಬಿ ರಸ್ತೆ)ಪಶ್ಚಿಮಕ್ಕೆ : ಸೈಟ್ ನಂ.1243, ಉತ್ತರಕ್ಕೆ: ಸೈಟ್ ನಂ.1261, ದಕ್ಷಿಣಕ್ಕೆ: ಸೈಟ್ ನಂ.1259

ಸಹಿ/– ಎಸ್. ಉಮೇಶ್
ವಕೀಲರು, #369, "ಮಾಧವ ಭವನ"
ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಮೈಸೂರು–570005
ದೂರವಾಣಿ: 9448342677

ಸ್ಥಳ: ಮೈಸೂರು
ದಿನಾಂಕ: 05.06.2026

ನಕ್ಕರೆ ಅದೇ ಸ್ವರ್ಗ

ರಾತ್ರಿ ಬೆಡ್ ರೂಮ್‌ನಲ್ಲಿ 2–3 ಸೊಳ್ಳೆಗಳು ಹಾರಾಡುವುದನ್ನು ಕಂಡು ಗಂಡ ಗುಡ್ ನೈಟ್ ಆನ್ ಮಾಡಲು ಮುಂದಾದ. ಅಷ್ಟರಲ್ಲಿ ಸೊಳ್ಳೆಯೊಂದು : ಸಾಹೇಬ್ರೆ ನಿಮ್ಮ ಮೇಲೆ ಆಣೆ. ನಾವು ಕಚ್ಚೋದಿಲ್ಲ. ಸ್ವಲ್ಪ ಹೊತ್ತು ಎಸಿಯಲ್ಲಿ ಇರಲು ಬಿಡಿ. ನಮಗೂ ಸಿಕ್ಕಾಪಟ್ಟೆ ಬೆವರು ಬರ್ತಿದೆ.

ಮೈಸೂರು ಮಿತ್ರ

ಶುಕ್ರವಾರ, ಜೂನ್ 5, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬದುಕು ನಮ್ಮನ್ನು ಕಷ್ಟಗಳ ಆಳದ ನೀರಿಗೆ ಆಗಾಗ ಕರೆದೊಯ್ಯುವುದು ನಮ್ಮನ್ನು ಮುಳುಗಿಸುವುದಕ್ಕಲ್ಲ ಚೆನ್ನಾಗಿ ತೊಳೆದು ಶುದ್ಧವಾಗಿಸಲು ಅಷ್ಟೇ. ಇದು ನಮಗೆ ನೆನಪಿದ್ದರೆ ಬದುಕು ಸುಂದರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ರಾವಣನ ಮಾತಿಗೆ ಮನಸೋತವ, ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

ಆಷಾಢಮಾಸದಲ್ಲಿ ಇದು ನಿಲ್ಲಲಿ...

ಮಾನ್ಯರೆ,

ಇನ್ನೇನು ಆಷಾಢ ಮಾಸ ಶುರುವಾಗಲಿದ್ದು, ಮೈಸೂರಿನ ಜಗದ್ವಿಖ್ಯಾತ ಚಾಮುಂಡಿಬೆಟ್ಟದಲ್ಲಿ ದೇವಿಗೆ ವಿಶೇಷ ಪೂಜೆಗಳು ಪ್ರಾರಂಭವಾಗುವುದು. ಇದು ಎಲ್ಲರಿಗೂ ತಿಳಿದ ವಿಷಯ.

ಈ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ಮೆಟ್ಟಿಲುಗಳಿಗೆ ಲಕ್ಷಾಂತರ ಭಕ್ತರು ಟನ್‌ಗಟ್ಟಲೆ ಅರಿಶಿಣ.ಕುಂಕುಮ ಹಚ್ಚುವ ಪ್ರತೀತಿ ಬೆಳೆದಿದ್ದು ಇದರಿಂದ ಪರಿಸರಕ್ಕೆ ನೇರಹಾನಿ ಉಂಟಾಗುವುದಲ್ಲದೇ ಆ ತಿಂಗಳಿನಲ್ಲಿ ಜಿಡಿ ಮಳೆ ಇರುವುದರಿಂದ ಭಕ್ತಾದಿಗಳು ಜಾರಿಬಿದ್ದು ಹೆಚ್ಚಿನ ಅನಾಹುತವಾಗುವ ಸಾಧ್ಯತೆಗಳಿವೆ. ದಯಮಾಡಿ ಈ ಕುಂಕುಮ ಹಚ್ಚುವ ಮೂಢ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿ ಕನ್ನಡ ನೆಲದ, ಕನ್ನಡ ನಾಡಿನ ರಾಜ್ಯ ಧ್ವಜವನ್ನು ಪ್ರತಿನಿಧಿಸುವ ಅರಿಶಿಣ ಕುಂಕುಮದ ಪಾವಿತ್ರ್ಯತೆಯನ್ನು ಕಾಪಾಡುವಂತೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಆಷಾಢ ಮಾಸದ ವಿಶೇಷ ಪೂಜೆಗೆ ಮೆಟ್ಟಿಲು ಹತ್ತಿ ಹೋಗುವ ಭಕ್ತಾಧಿಗಳಿಗೆ ಅನಾನುಕೂಲವಾಗುವಂತೆ ಸುಮಾರು ಆರುನೂರು ಮೀ.ದೂರದಿಂದಲೇ ವಿಭಜಕಗಳನ್ನು ಅಳವಡಿಸುವ ಕೆಲಸ ಕಳೆದ ವರ್ಷದಿಂದ ಮಾಡುತ್ತಿದ್ದು ಇದರಿಂದ ನೂಕುನುಗ್ಗಲು ಉಂಟಾಗಿ ಮಹಿಳೆಯರು, ಮಕ್ಕಳಿಗೆ ಅತೀವ ತೊಂದರೆಯಾಗುವ ಕಾರಣ ಈ ವಿಭಜಕಗಳನ್ನು ಅಳವಡಿಸದೇ ಅನಾಯಾಸವಾಗಿ ಭಕ್ತರು ದೇವಿಯ ದರ್ಶನ ಮಾಡಲು ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

– ದುರ್ಗಾಸುತ, ಮೈಸೂರು

ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಅಗತ್ಯ

ಮಾನ್ಯರೆ

ಇತ್ತೀಚೆಗೆ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಪ್ರಕಟವಾದ, ರಮ್ಮನಹಳ್ಳಿ ಪಟ್ಟಣ ಪಂಚಾಯತಿಯಲ್ಲಿ ಅಮಾನತುಗೊಂಡ ರೆವೆನ್ಯೂ ಇನ್ಸ್‌ಪೆಕ್ಟರ್ ಎನ್. ಮಂಜುನಾಥ್, ಸರ್ಕಾರಿ ಭೂಮಿಯನ್ನು ಖಾಸಗಿಯವರಿಗೆ ಖಾತೆ ಮಾಡಿಕೊಟ್ಟ ಬಗ್ಗೆ ಹಾಗೂ ಅವರನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಮಾನತು ಗೊಳಿಸಿರುವ ಕ್ರಮವನ್ನು ಸ್ವಾಗತಿಸುತ್ತೇನೆ.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದ್ದು ಈಗಾಗಲೇ ಸಾರ್ವಜನಿಕರು ಹಲವಾರು ದೂರುಗಳನ್ನು ಕೊಟ್ಟಿದ್ದರೂ ಪ್ರಯೋಜನ ವಿರಲಿಲ್ಲ. ಸರ್ಕಾರ ಸಾರ್ವಜನಿಕರ ಒಳಿತಿಗೆ ಇ ಖಾತಾ ಸೌಲಭ್ಯವನ್ನು ಜಾರಿಗೆ ತಂದರೂ, ಇಂತಹ ಭ್ರಷ್ಟ ಅಧಿಕಾರಿಗಳು ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎಂಬಂತೆ ಸಾರ್ವಜನಿಕರನ್ನು ಲಂಚಕ್ಕೆ ಪೀಡಿಸುತ್ತಿದ್ದು, ಕಡೆಗೂ ಸಿಕ್ಕಿಬಿದ್ದು ಅಮಾನತ್ತಾಗಿರುವುದು ಸಾರ್ವಜನಿಕರಿಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ. ಈ ದಿಟ್ಟ ಕ್ರಮವನ್ನು ಕೈಗೊಂಡ ಅಧಿಕಾರಿಗಳಿಗೆ ಅಭಿನಂದನೆಗಳು. ಸುಲಭ ರೀತಿಯಲ್ಲಿ ಈ ಖಾತಾ /ತಿದ್ದುಪಡಿ ಮಾಡಿಸುವ ಪ್ರಕ್ರಿಯೆಯನ್ನು ಸರ್ಕಾರ ಜಾರಿಗೆ ತಂದರೂ ಸರ್ವರ್ ಸಮಸ್ಯೆ, ಲಾಗಿನ್ ಸಮಸ್ಯೆ ಎಂದು ಸಾರ್ವಜನಿಕರಿಗೆ ತಿಳಿಸಿ ಭ್ರಷ್ಟಾಚಾರ ನಡೆಸುತ್ತಿರುವುದು ಹಲವಾರು ಪಂಚಾಯ್ತಿಯಲ್ಲಿ ಈಗಾಗಲೇ ಕಂಡು ಬಂದಿದೆ. ಇವರ ಮೇಲೆ ಕೇವಲ ಅಮಾನತು ಅಥವಾ ವರ್ಗಾವಣೆ ಮಾಡದೆ ಇಂಥವರನ್ನು ಸೇವೆಯಿಂದ ವಜಾಗೊಳಿಸಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದರೆ ಭ್ರಷ್ಟಾಚಾರ ಒಂದು ಮಟ್ಟಿಗೆ ಸರಿದಾರಿಗೆ ಬರುತ್ತದೆ. ಇನ್ನು ಮುಂದಾದರೂ ಇಲ್ಲಿನ ಅಧಿಕಾರಿಗಳು ಇದನ್ನು ಪಾಠವೆಂಬಂತೆ ಸ್ವೀಕರಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುತ್ತಾರೆಂದು ನಂಬೋಣ.

–ನೊಂದ ಸಾರ್ವಜನಿಕರು

ಪ್ರಮಾಣ ವಚನದಲ್ಲಿ ಕಂಡು ಬಂದ ವಿಶೇಷ

ಮಾನ್ಯರೇ,

ಬುಧವಾರ ತಂಪಾದ ಸಂಜೆಯಲ್ಲಿ ಅದ್ಧೂರಿಯಾಗಿ ನಡೆದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಕರ್ನಾಟಕದ ಜನತೆಗೆ ಹೆಚ್ಚು ಮುದವನ್ನು ನೀಡಿದ ವಿಷಯವೆಂದರೆ ಡಿ.ಕೆ.ಶಿವಕುಮಾರ್ ಅವರು ವಂದೇ ಮಾತರಂಗೆ ತುಟಿಯಾಡಿಸುದುದು ಹಾಗೂ ಯು.ಟಿ.ಖಾದರ್ ಅವರು ಕಸ್ತೂರಿ ಕನ್ನಡದಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದುದು ಎಂದರೆ ಬಹುಶ: ಉತ್ಪ್ರೇಕ್ಷೆಯ ಮಾತಾಗದು. ಚಿರಕಾಲ ಬಾಳಲಿ ನಮ್ಮ ಹೆಮ್ಮೆಯ ಕನ್ನಡ.

–ಹೆಚ್.ಕೆ.ಶಶಿಕುಮಾರ್, ರಾಮಕೃಷ್ಣನಗರ

ರೈಲ್ವೆ ಇಲಾಖೆಯ ಗಮನಕ್ಕೆ


ಮಾನ್ಯರೆ,

ನಾನು ದಿ. 2.6.2026 ರಂದು ಬೆಂಗಳೂರಿನಿಂದ ಮೈಸೂರಿಗೆ ಬೇಗ ತಲುಪುವ ಉದ್ದೇಶದಿಂದ 12614 ಒಡೆಯರ್ ಸೂಪರ್ ಫಾಸ್ಟ್ ರೈಲಿನಲ್ಲಿ ಪ್ರಯಾಣ ಮಾಡಿದೆ. ಮೊದಲನೆಯದಾಗಿ, ರೈಲು ನಿಗದಿತ ಸಮಯಕ್ಕಿಂತ ಸುಮಾರು 50 ನಿಮಿಷ ತಡವಾಗಿ ಹೊರಟಿತು.

ಈ ಮಧ್ಯೆ ಚಾಮರಾಜನಗರಕ್ಕೆ ತೆರಳುವ ಪ್ಯಾಸೆಂಜರ್ ರೈಲು 56282 ತನ್ನ ನಿಗದಿತ ಸಮಯ ಮಧ್ಯಾಹ್ನ 3:45 ಕ್ಕೆ ಸರಿಯಾಗಿ ಬೆಂಗಳೂರಿನಿಂದ ಮೈಸೂರಿನ ಕಡೆಗೆ ಹೊರಟಿತು. ಸುಮಾರು 4:10ಕ್ಕೆ ನಿಲ್ದಾಣದಿಂದ ಹೊರಟ ಒಡೆಯರ್ ರೈಲು, ಪ್ಯಾಸೆಂಜರ್ ರೈಲಿನ ಹಿಂಬಾಲಕನಂತೆ ಚಲಿಸಿ, ಎಲ್ಲ ನಿಲ್ದಾಣಗಳಲ್ಲೂ ನಿಂತು ಅಕ್ಷರಶಃ ಪ್ಯಾಸೆಂಜರ್ ರೈಲಿನಂತೆಯೇ ತೆರಳಿತು. ಅನೇಕ ಸಂದರ್ಭಗಳಲ್ಲಿ ಮುಂದೆ ಪ್ಯಾಸೆಂಜರ್ ರೈಲು ಹೊರಟಾಗ ಅದನ್ನು ಮುಂದಿನ ನಿಲ್ದಾಣದಲ್ಲಿ ನಿಲ್ಲಿಸಿ ಸೂಪರ್ ಫಾಸ್ಟ್ ರೈಲಿಗೆ ಮುಂದೆ ಸಾಗಲು ಅನುವು ಮಾಡಿ ಕೊಡುವುದುಂಟು.

ಇದಕ್ಕೆ ಅಪವಾದವೆಂಬಂತೆ ಒಡೆಯರ್ ರೈಲು ಮಾರ್ಗದುದ್ದಕ್ಕೂ ಪ್ಯಾಸೆಂಜರ್ ರೈಲಿನ ಬಾಲಂಗೋಚಿಯಂತೆಯೇ ಸಾಗಿ ಕಡೆಗೆ ಸಂಜೆ ಸುಮಾರು 7 :20ಕ್ಕೆ ಮೈಸೂರನ್ನು ತಲುಪಿತು. ರೈಲಿನಲ್ಲಿದ್ದ ಎಲ್ಲ ಪ್ರಯಾಣಿಕರಲ್ಲೂ ಅಸಹನೆ ಎದ್ದು ಕಾಣುತ್ತಿತ್ತು. ಬೇಗ ತಲುಪುವ ಉದ್ದೇಶದಿಂದ ನಾವು ಹೆಚ್ಚಿಗೆ ಹಣವನ್ನು ತೆತ್ತು ಸೂಪರ್ ಫಾಸ್ಟ್ ರೈಲಿನಲ್ಲಿ ಪ್ರಯಾಣಿಸುತ್ತಿರುತ್ತೇವೆ. ಆದರೆ ಅದು ಪ್ಯಾಸೆಂಜರ್ ರೈಲಿನಂತೆಯೇ ಸಾಗಿದರೆ ರೈಲ್ವೆ ಇಲಾಖೆ ನಾವು ಸೂಪರ್ ಫಾಸ್ಟ್ ಪ್ರಯಾಣಕ್ಕೆ ಕೊಟ್ಟ ಹೆಚ್ಚುವರಿ ಹಣವನ್ನು ಹಿಂತಿರುಗಿಸಬೇಕಲ್ಲವೇ? ಒಂದು ವೇಳೆ ನಾವು ಪ್ಯಾಸೆಂಜರ್ ರೈಲಿನ ಟಿಕೆಟ್ ಖರೀದಿಸಿ ಸೂಪರ್ ಫಾಸ್ಟ್ ರೈಲಿನಲ್ಲಿ ಪ್ರಯಾಣಿಸಿದರೆ ನಮ್ಮಿಂದ ದಂಡವನ್ನು ವಸೂಲಿ ಮಾಡುವ ಇಲಾಖೆ, ನಾವು ನೀಡಿದ ಹಣಕ್ಕೆ ಬದ್ಧತೆ ತೋರಬೇಕು. ಇಲ್ಲವೆಂದಾದರೆ ಹೆಚ್ಚುವರಿ ಹಣವನ್ನಾದರೂ ಹಿಂತಿರುಗಿಸಬೇಕು. ಇದರ ಬಗ್ಗೆ ನಮ್ಮ ಕರ್ನಾಟಕದವರೇ ಆದ ಮಾನ್ಯ ರೈಲ್ವೆ ಸಚಿವರಾದ ಸೋಮಣ್ಣನವರು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಲಿ ಎಂಬುದು ನನ್ನ ಮನವಿ.

–ರಾಕೇಶ್ ಎಲ್., ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಆಧ್ಯಾತ್ಮಿಕತೆ: ಒಂದು ವೇಳಾಪಟ್ಟಿಗೆ ಒಳಗೊಂಡಿಲ್ಲ


ಕೆಲವರು ಆಧ್ಯಾತ್ಮಿಕತೆಯನ್ನು ಜೀವನದಿಂದ ಪ್ರತ್ಯೇಕಿಸಿರುವಂತೆ ಏಕೆ ಕಾಣುತ್ತದೆ ಎಂದರೆ, ಅವರ ಆಧ್ಯಾತ್ಮಿಕತೆ ಸೀಮಿತವಾಗಿರುತ್ತದೆ. ನಿಮ್ಮ ಆಧ್ಯಾತ್ಮಿಕತೆ ಸೀಮಿತ ಸಮಯದ್ದಾದರೆ, ಬೆಳಿಗ್ಗೆ ಐದು ಗಂಟೆಯಿಂದ ಏಳು ಗಂಟೆಯವರೆಗೆ ಅಥವಾ ಮತ್ಯಾವುದಾದರೂ ಸಮಯದ್ದಾದರೆ, ನೀವು ಆಧ್ಯಾತ್ಮಿಕರಾಗಲು ಪ್ರಯತ್ನಿಸುತ್ತಿರುವಿರಿ ಅಷ್ಟೇ; ನಿಮ್ಮಲ್ಲಿ ಆಧ್ಯಾತ್ಮಿಕತೆ ಎಂಬುದೇನೂ ಇಲ್ಲ.

ಆಧ್ಯಾತ್ಮಿಕರಾಗಿರುವುದು ಎಂದರೆ ನೀವು ಏನು ನಿರ್ಣಯಗಳನ್ನು ಮಾಡಿಕೊಂಡಿದ್ದೀರಿ? ಆಧ್ಯಾತ್ಮಿಕತೆ ಎಂದರೆ ಎಲ್ಲರೊಂದಿಗೆ ಕರುಣೆಯಿಂದ ಮಾತನಾಡುವುದು ಎಂದುಕೊಂಡಿದ್ದರೆ, ನೀವು ತಪ್ಪು ತಿಳಿದುಕೊಂಡಿದ್ದೀರಿ. ಯಾರಾದರೂ ಒಬ್ಬರು ಜೀವನದ ವಿಭಿನ್ನ ಅಂಶಗಳನ್ನು ವಿಭಿನ್ನ ರೀತಿಗಳಲ್ಲಿ, ತಮ್ಮದೇ ಅರ್ಥೈಸುವಿಕೆಯಿಂದ, ತಮ್ಮದೇ ಸಂವೇದನಾಶೀಲತೆಯಿಂದ, ತಮ್ಮದೇ ಅನುಭವದಿಂದ ಸಂವಹಿಸಿದಾಗ? ಅಂತಹವರಿಗೆ ಒಂದು ಮಗುವಿನ ಜೊತೆ ಹೇಗೆ ವರ್ತಿಸಬೇಕು, ಒಂದು ಎಮ್ಮೆಯ ಜೊತೆ ಹೇಗೆ ವರ್ತಿಸಬೇಕು, ಒಂದು ಬೆಟ್ಟದ ಹತ್ತಿರ ಹೇಗಿರಬೇಕು, ಒಬ್ಬ ಬಸ್ ಚಾಲಕನ ಜೊತೆ ಹೇಗೆ ಮಾತನಾಡಬೇಕು ಎನ್ನುವುದು ತಿಳಿದಿರುತ್ತದೆ? ಅದನ್ನು ಅವರು ಈ ಅರಿವಿನಿಂದ ತಿಳಿದಿದ್ದರೆ ಅದು ಅದ್ಭುತ ಮತ್ತು ಚೆನ್ನಾಗಿರುತ್ತದೆ. ಜೀವನವಿರಬೇಕಾದದ್ದು ಹಾಗೆಯೇ.

ಯಾರಾದರೂ ತಮ್ಮ ತಥಾಕಥಿತ ಆಧ್ಯಾತ್ಮಿಕತೆಯಿಂದ, ತಾವು ನಂಬಿಕೊಂಡ ಕರುಣೆ ಅಥವಾ ಒಳ್ಳೆಯತನದಿಂದ ಜೀವನದ ಪ್ರತಿಯೊಂದು ಅಂಶದೊಂದಿಗೆ ವರ್ತಿಸಲು ಪ್ರಯತ್ನಿಸಿದರೆ, ಅವರು ಕೇವಲ ನೈತಿಕರು ಮತ್ತು ಮೂರ್ಖರು ಅಷ್ಟೆ. ಅವರು ಒಳ್ಳೆಯ ಜನರಿರಬಹುದು, ಆದರೆ ಅವರಿಗೆ ಜೀವನದ ಅರಿವಿರುವುದಿಲ್ಲ. ಅಲ್ಲಿ ಆಂತರಿಕ ಅನುಭವವಿಲ್ಲ; ಅದು ಅವರ ಒಳ್ಳೆಯತನ ಮತ್ತು ನೈತಿಕತೆಯ ಪರಿಣಾಮವಷ್ಟೆ. ಅವರು ಒಳ್ಳೆಯ ನಾಗರಿಕರಾಗಬಹುದು. ಆದರೆ ಅವರಿಗೆ ಅತೀತದ ಬಗ್ಗೆ ಏನೂ ಗೊತ್ತಿರುವುದಿಲ್ಲ.

ಒಬ್ಬರು ತಮ್ಮ ಅಜ್ಞಾನ ಅಥವಾ ಪೂರ್ವಗ್ರಹಿಕೆಗಳ ಮೂಲಕ ಜೀವನದ ವಿವಿಧ ಅಂಶಗಳೊಂದಿಗೆ ವಿವಿಧ ರೀತಿಗಳಲ್ಲಿ ಸಂವಹಿಸಿದರೆ, ಅದು ಸಂಪೂರ್ಣವಾಗಿ ಬೇರೆ ವಿಷಯ. ಒಬ್ಬ ಬಸ್ ಚಾಲಕನೊಂದಿಗೆ ಒಬ್ಬ ವ್ಯಕ್ತಿ ಹೇಗೆ ಮಾತನಾಡುತ್ತಾನೆ ಎಂಬುದು ಆ ವ್ಯಕ್ತಿ ಎಲ್ಲಿದ್ದಾನೆ ಎನ್ನುವುದನ್ನು ತಿಳಿದಕೊಳ್ಳುವ ವಿಧಾನವಾಗಿರಬಹುದು ಅಥವಾ ಅಲ್ಲದಿರಬಹುದು.

ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಸಮಯದಲ್ಲಿ ಇನ್ನೊಬ್ಬರೊಂದಿಗೆ ಮಾತನಾಡುವ ರೀತಿಯಿಂದ ಆ ವ್ಯಕ್ತಿಯ ಕುರಿತು ನಿರ್ಣಯವನ್ನು ಕೈಗೊಳ್ಳದಿರುವುದು ಒಳ್ಳೆಯದು. ಜೀವನದ ಒಂದು ಅಂಶವನ್ನು ಕರುಣೆಯಿಂದ ಕಂಡು ಇನ್ನೊಂದರೊಂದಿಗೆ ಒರಟಾಗಿ ವರ್ತಿಸುವ ರೂಢಿಯಿದ್ದರೆ, ಅದು ಅಜ್ಞಾನದಿಂದ ಉಂಟಾಗುತ್ತಿದೆ ಎಂಬುದನ್ನು ನೀವು ತಿಳಿಯಬೇಕು.



> ಆಧ್ಯಾತ್ಮಿಕತೆಯೆಂದರೆ ಅದೊಂದು ನೈತಿಕ ಕಟ್ಟಳೆಯಲ್ಲ ಎಂಬದನ್ನು ಅರ್ಥಮಾಡಿಕೊಳ್ಳಬೇಕು. ಆಧ್ಯಾತ್ಮಿಕತೆಯೆಂದರೆ ನೀವು ದೈಹಿಕತೆಯನ್ನು ಮೀರಿದ್ದನ್ನು ಅನುಭವಿಸಲು ಪ್ರಾರಂಭಿಸಿದ್ದೀರಿ ಎಂದರ್ಥ. ನೀವು ನಿಮ್ಮ ಸುತ್ತಲಿನ ಪ್ರಪಂಚದೊಂದಿಗೆ ಹೇಗೆ ಸಂವಹಿಸುತ್ತೀರಿ ಮತ್ತು ಹೇಗೆ ನಿಭಾಯಿಸುತ್ತೀರಿ ಎಂಬುದರೊಂದಿಗೆ ಅದು ಸಂಬಂಧಿಸಿಲ್ಲ. ಅದು ನಿಮ್ಮ ಸಾಮರ್ಥ್ಯ, ಬುದ್ಧಿಶಕ್ತಿ, ಲೋಕಸಂಸ್ಕಾರ, ಒಲವು ಮತ್ತು ನೀವು ನಿಮ್ಮ ಜೀವನದಲ್ಲಿ ಯಾವ ರೀತಿಯ ಧ್ಯೇಯೋದ್ಧೇಶಗಳನ್ನು ಹೊಂದಿದ್ದೀರಿ ಎಂಬುದನ್ನು ಆಧರಿಸಿರುತ್ತದೆ.

ಆಧ್ಯಾತ್ಮಿಕತೆ–ಒಂದು ನೈತಿಕ ಕಟ್ಟಳೆಯಲ್ಲ

ಮೊದಲನೆಯದಾಗಿ, ಆಧ್ಯಾತ್ಮಿಕತೆಯೆಂದರೆ ಅದೊಂದು ನೈತಿಕ ಕಟ್ಟಳೆಯಲ್ಲ ಎಂಬದನ್ನು ಅರ್ಥಮಾಡಿಕೊಳ್ಳಬೇಕು. ಆಧ್ಯಾತ್ಮಿಕತೆಯೆಂದರೆ ನೀವು ದೈಹಿಕತೆಯನ್ನು ಮೀರಿದ್ದನ್ನು ಅನುಭವಿಸಲು ಪ್ರಾರಂಭಿಸಿದ್ದೀರಿ ಎಂದರ್ಥ. ನೀವು ನಿಮ್ಮ ಸುತ್ತಲಿನ ಪ್ರಪಂಚದೊಂದಿಗೆ ಹೇಗೆ ಸಂವಹಿಸುತ್ತೀರಿ ಮತ್ತು ಹೇಗೆ ನಿಭಾಯಿಸುತ್ತೀರಿ ಎಂಬುದರೊಂದಿಗೆ ಅದು ಸಂಬಂಧಿಸಿಲ್ಲ. ಅದು ನಿಮ್ಮ ಸಾಮರ್ಥ್ಯ, ಬುದ್ಧಿಶಕ್ತಿ, ಲೋಕಸಂಸ್ಕಾರ, ಒಲವು ಮತ್ತು ನೀವು ನಿಮ್ಮ ಜೀವನದಲ್ಲಿ ಯಾವ ರೀತಿಯ ಧ್ಯೇಯೋದ್ಧೇಶಗಳನ್ನು ಹೊಂದಿದ್ದೀರಿ ಎಂಬುದನ್ನು ಆಧರಿಸಿರುತ್ತದೆ.

ಹಲವಾರು ದಶಕಗಳ ಹಿಂದೆ ಒಬ್ಬ ಯೋಗಿಯಿದ್ದರು. ಅವರು ಕಾಡಿನಲ್ಲಿ ಸುಮ್ಮನೆ ಆನಂದದಿಂದ ಕುಳಿತಿರುತ್ತಿದ್ದರು, ಆದರೆ ಯಾರಾದರೂ ಅವರ ಹತ್ತಿರ ಹೋದರೆ, ಅವರತ್ತ ಕಲ್ಲು ತೂರುತ್ತಿದ್ದರು. ಅವರು ಯಾರಿಗೂ ಹೊಡೆಯುತ್ತಿರಲಿಲ್ಲ, ಆದರೆ ಅವರು ಹುಚ್ಚರಂತೆ ಜನರ ಮೇಲೆ ಕಲ್ಲು ತೂರುತ್ತಿದ್ದರು. ಜನರು ಅವರನ್ನು ಕಲ್ಲು ತೂರುವ ಹುಚ್ಚನೆಂದು ಭಾವಿಸಿದ್ದರು. ಆದರೆ ಅವರು ಯಾರಿಗೂ ಒಮ್ಮೆಯೂ ಕಲ್ಲಿನಿಂದ ಹೊಡೆಯುತ್ತಿಲ್ಲ ಎನ್ನುವುದನ್ನು ಜನರು ನಿಧಾನವಾಗಿ ಅರಿತರು.

ಅವರು ಯಾರಿಗೂ ತೊಂದರೆಯಾಗದಂತೆ ಕಲ್ಲು ತೂರುತ್ತಿದ್ದರು. ಅವರಿಗೆ ಜನರು ತಮ್ಮ ಬಳಿ ಸೇರುವುದು ಬೇಕಾಗಿರಲಿಲ್ಲ. ಅವರು ಇದ್ದಂತಹ ರೀತಿಯಲ್ಲಿ–ಅವರ ಶಕ್ತಿ ಒಂದು ನಿರ್ದಿಷ್ಟ ರೀತಿಯಲ್ಲಿತ್ತು? ಸಹಜವಾಗಿಯೇ ಪವಾಡಗಳು ಸಂಭವಿಸುತ್ತಿತ್ತು. ಜನರು ತಮ್ಮ ಬಳಿ ಬಂದರೆ ಏನಾದರೊಂದನ್ನು ಕೇಳಿಕೊಳ್ಳುತ್ತಾರೆ. ಅದರಿಂದ ಜನ ಅಲ್ಲಿ ಸೇರಿ ತಮ್ಮ ಜೀವನ ಹದಗೆಡಿಸುತ್ತಾರೆ ಎಂದು ಅವರಿಗೆ ಗೊತ್ತಿತ್ತು. ಹಾಗಾಗಿ ಜನರು ಹತ್ತಿರ ಬಂದರೆ, ಅವರು ಜನರ ಮೇಲೆ ಕಲ್ಲು ತೂರುತ್ತಿದ್ದರು.

ನೀವು ಒಬ್ಬರ ವರ್ತನೆಯನ್ನು ನೋಡಿ ಅವರನ್ನು ಅಳೆಯ ತೊಡಗಿದರೆ, ಅವರೇನು ಮಾಡುತ್ತಾರೆ ಅಥವಾ ಏನು ಹೇಳುತ್ತಾರೆ ಎಂದೆಲ್ಲಾ ಯೋಚಿಸಿದರೆ, ನೀವು ಖಂಡಿತವಾಗಿಯೂ ತಪ್ಪು ತಿಳಿಯುತ್ತೀರಿ, ತಪ್ಪಾದ ನಿರ್ಣಯಗಳನ್ನು ಕೈಗೊಳ್ಳುತ್ತೀರಿ. ಸದ್ಗುರು ಶ್ರೀಬ್ರಹ್ಮರ ಪರಿಚಯ ನಿಮಗಿದ್ದರೆ, ಯಾರಾದರೂ ಅವರ ಬಳಿ ಬಂದು ಮೂರ್ಖತನದ ಮಾತಾಡಿದರೆ, ಅಂತಹವರನ್ನು ಒದ್ದು ಬಿಡುತ್ತಿದ್ದರು? ಅಹಂಕಾರ ಅಥವಾ ದ್ವೇಷದಿಂದಲ್ಲ. ಅದು ಅವರು ಜನರೊಂದಿಗೆ ವ್ಯವಹರಿಸುತ್ತಿದ್ದ ರೀತಿಯಾಗಿತ್ತು. ನಾನು ಹಾಗೆ ಮಾಡುವುದಿಲ್ಲ. ಅದಕ್ಕೆ ಕಾರಣ ನಾನು ಹೆಚ್ಚು ತಿಳಿದಿದ್ದೇನೆ ಅಥವಾ ಕಡಿಮೆ ತಿಳಿದಿದ್ದೇನೆ ಎಂದಲ್ಲ, ನಾನು ಜಗತ್ತಿನೊಂದಿಗೆ ಸ್ವಲ್ಪ ಬುದ್ಧಿವಂತಿಕೆಯಿಂದ ವರ್ತಿಸುತ್ತಿದ್ದೇನೆ ಅಷ್ಟೆ. ನೀವು ಹೇಗೆ ಕಾರ್ಯನಿರ್ವಹಿಸುತ್ತೀರಿ ಎನ್ನುವುದು ನಿಮ್ಮ ಒಲವು, ಬುದ್ಧಿಶಕ್ತಿ ಮತ್ತು ಲೋಕಸಂಸ್ಕಾರವನ್ನು ಆಧರಿಸಿದೆ. ಅದಕ್ಕೂ ಆಧ್ಯಾತ್ಮಿಕತೆಗೂ ಸಂಬಂಧವಿಲ್ಲ.

ಇನ್ನು ಅನುದಿನ ಪರಿಸರ ದಿನ...



ಡಾ|| ಸುಧಾ .ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

ಇಂದು ಪರಿಸರ ದಿನಾಚರಣೆ

ಪ್ರಕೃತಿಯಿಂದ ಸ್ಫೂರ್ತಿ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ``Inspired by nature for climate, for our future".

ನಮಗೆಲ್ಲ ತಿಳಿದಿರುವಂತೆ 1972ರಿಂದ ವಿಶ್ವ ಸಂಸ್ಥೆಯ "ಯುನೈಟೆಡ್ ನೇಷನ್ಸ್ ಎನ್‌ವೈರನ್‌ಮೆಂಟ್ ಪ್ರೋಗ್ರಾಂ" (UNEP) ಅಂಗ ಸಂಸ್ಥೆಯ ಆಶ್ರಯದಲ್ಲಿ ಪ್ರತಿ ವರ್ಷ ಜೂನ್ 5ರಂದು 'ವಿಶ್ವ ಪರಿಸರ ದಿನ' ಆಚರಿಸಲಾಗುತ್ತಿದೆ.

ನಾವೆಲ್ಲರೂ ವಾಸಿಸುತ್ತಿರುವ ಈ ಗ್ರಹವು, ನನಗಿನ್ನು ಸಾಧ್ಯವಾಗುತ್ತಿಲ್ಲ, ಇನ್ನಾದರೂ ನೀವು ಮಾನವರು ಬುದ್ಧಿ ಕಲಿಯಿರಿ ಎಂದು ನಾನಾ ರೂಪಗಳಲ್ಲಿ ಸಂಕೇತಗಳನ್ನು ಕಳಿಸುತ್ತಲೇ ಇದೆ! ಸಮುದ್ರದಲ್ಲಿಯ ಏರಿಳಿತಗಳು, ಕೆರಳಿ ನರಳಿಸುವ ಕಾಡ್ಗಿಚ್ಚುಗಳು, ಶಾಖದ ಅಲೆಗಳು (heat waves) ಕರಗುತ್ತಿರುವ ಹಿಮನದಿಗಳು, ಒಂದೇ ಎರಡೇ ಆಧುನಿಕ ಮನುಷ್ಯನ ಅಸ್ವಾಭಾವಿಕ ಚಟುವಟಿಕೆಗಳಿಂದ ಈ ಪರಿಸರಕ್ಕೆ ವಾತಾವರಣಕ್ಕೆ ಅಸ್ವಾಭಾವಿಕವಾಗಿ ಸೋರಿಹೋದ ವಿಷಯುಕ್ತ ರಾಸಾಯನಿಕಗಳಾದ ಗಂಧಕದ ಆಕ್ಸೈಡ್‌ಗಳು, ಇಂಗಾಲದ ಮೋನಾಕ್ಸೈಡ್ಸ್, ಇಂಗಾಲದ ಡೈ ಆಕ್ಸೈಡ್, ವೋಲಟೈಲ್ ಆರ್ಗಾನಿಕ್ ಕಾಂಪೌಂಡ್, ಧೂಳಿನ ಕಣಗಳು, ಅಣು ವಿಕಿರಣಗಳು, ಸೀಸ, ಕ್ಯಾಡ್ಮಿಯಂ, ತಾಮ್ರ ಮುಂತಾದ ಕ್ಯಾನ್ಸರ್‌ಕಾರಕ ಲೋಹಗಳು ನಮ್ಮ ದಿನನಿತ್ಯದ ಮಲಮೂತ್ರದ ತ್ಯಾಜ್ಯಗಳಿಂದ ತುಂಬಿರುವ ಚರಂಡಿ ಬಚ್ಚಲುಗಳಿಂದ ಹೊಮ್ಮುತ್ತಿರುವ ಕೆಟ್ಟವಾಸನೆಯ ವಿಷಗಾಳಿಗಳು, ನಾವು ಓಡಾಡುವ ವಾಹನಗಳಿಂದ ಬರುವ ಹೊಗೆ ಇಂಗಾಲದ ಮೊನಾಕ್ಸೈಡ್, ಕಾರ್ಖಾನೆಗಳು ಉಗುಳುತ್ತಿರುವ ಇಂಗಾಲದ ಅಂಶಗಳು, ಅಯ್ಯೋ ಒಂದೇ ಎರಡೇ ಎಲ್ಲವೂ ಮಾನವ ನಿರ್ಮಿತವೇ ಅಲ್ಲವೇ?

ಇಂಗಾಲದ ಡೈ ಆಕ್ಸೈಡ್, ನೈಟ್ರಸ್ ಆಕ್ಸೈಡ್, ನೀರಿನ ಆವಿ, ಮೀಥೇನ್ ಇತ್ಯಾದಿ 'ಹಸಿರುಮನೆ' ವಾಯುಗಳು (ಗ್ರೀನ್ ಹೌಸ್ ಗ್ಯಾಸಸ್) ಭೂಮಿಯ ಶಾಖವನ್ನು ಹಿಡಿದಿಟ್ಟುಕೊಂಡು ಕಾಪಾಡುತ್ತಿರುತ್ತವೆ. ಈ ಉಪಯುಕ್ತ ಗಾಳಿಗಳು ಪರಿಸರ ಮಾಲಿನ್ಯದಿಂದ ಏರುಪೇರಾಗುತ್ತಿದ್ದು, ಭೂ ತಾಪವೂ ಹೆಚ್ಚಾಗುತ್ತಿದ್ದು, ಹವಾಮಾನ ಬದಲಾವಣೆಗಳಾಗುತ್ತಿವೆ ಎಂದು ವಿಜ್ಞಾನಿಗಳು ಹೇಳುತ್ತಲೇ ಇದ್ದಾರೆ! ಇದಕ್ಕೆಲ್ಲ ಕಾರಣವಾದ ಮಾನವ ನಿರ್ಮಿತ ವಿಕೃತಿಗಳೂ ನಿಲ್ಲಬೇಕೆಂಬ ಸಾಮಾನ್ಯ ಪರಿಜ್ಞಾನದ ಬಗ್ಗೆಯೂ ಅರಿವು ಮೂಡಿಸುತ್ತಿರುವಷ್ಟೂ ಮತ್ತಷ್ಟು ಹದಗೆಡುತ್ತಿರುವುದು ಅಪಾಯಕಾರಿ!

ಹಾಗಾದಲ್ಲಿ ನಾವಿಂದು ಈ ಆಧುನೀ ಕರಣದ ಯುಗದಲ್ಲಿ ಈ ಆಧುನೀಕರಣಕ್ಕೆ ಕಾರಣವಾದ ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಎಲ್ಲ ಹಲವಾರು ಕೈಗಾರಿಕೆಗಳು, ಕಾರ್ಖಾನೆಗಳು, ಕೃಷಿ ಪದ್ಧತಿಗಳು, ಉದ್ಯಮಗಳು, ರಸ್ತೆ, ವಾಯುಮಾರ್ಗ, ಆಕಾಶಮಾರ್ಗ ಮತ್ತು ಜಲಮಾರ್ಗದ ಸಾರಿಗೆ ಸಂಪರ್ಕಗಳು ಯಾವುದನ್ನು ನಿಲ್ಲಿಸಲು ಸಾಧ್ಯವಿಲ್ಲ! ಇದೇ ದುರಾದೃಷ್ಟ! ಏಕೆಂದರೆ ನಾವೆಲ್ಲರೂ ಈ ವಿಷ ವರ್ತುಲದ ಪಾಲುದಾರರು, ಚಂದಾದಾರರು ಮತ್ತು ಭಾಗಿದಾರರು! ಇದನ್ನೆಲ್ಲ ನಿಲ್ಲಿಸಿ ಜೀವನ ನಡೆಸುವ ಸ್ಥಿತಿಯಲ್ಲಿಯೂ ಪ್ರಪಂಚದ ಯಾವುದೇ ಮಾನವ ಜೀವಿಯೂ ಇಲ್ಲವಲ್ಲ? ಈ ಆಧುನಿಕ ನಾಗರೀಕತೆಯ ವೈಪರೀತ್ಯವೇ ಹೀಗಾಗಿದೆಯಲ್ಲ?


ಅದಕ್ಕೆ ಈ ಬಾರಿಯ ಘೋಷಣೆ 'ಪ್ರಕೃತಿಯಿಂದ ಸ್ಫೂರ್ತಿ, ಹವಾಮಾನಕ್ಕಾಗಿ, ಮುಂದಿನ ನಮ್ಮ ಭವಿಷ್ಯಕ್ಕಾಗಿ" ಎಂಬ ಘೋಷಣಾ ವಾಕ್ಯದಂತೆ ಹವಾಮಾನವನ್ನು ಉಳಿಸಲು ಅಳಿದುಳಿದ ಈ ಪ್ರಕೃತಿಯನ್ನು ಕಾಪಾಡುವಂತಹ ಉಳಿಸುವಂತಹ ಸುಸ್ಥಿರ (sustainable) ಜೀವನ, ಪದ್ಧತಿ, ಕಾರ್ಖಾನೆಗಳು, ಉದ್ಯಮಗಳು, ಪರ್ಯಾಯ ಇಂಧನ ವ್ಯವಸ್ಥೆಗಳು ಮುಂತಾದವುಗಳ ಬಗ್ಗೆ ವಿಜ್ಞಾನಿಗಳು, ಜನಸಾಮಾನ್ಯರು, ಯುವ ಜನಾಂಗದವರು, ಮಕ್ಕಳು ಹೀಗೆ ಪ್ರಪಂಚದ ಎಲ್ಲ ದೇಶಗಳ ಎಲ್ಲ ಸ್ತರದ ಜನರಿಗೂ ಅರಿವು ಮೂಡಿಸ ಬೇಕಾಗಿದೆ. ಹಾಗೆಯೇ ವಿಶ್ವ ಸ್ತರದಲ್ಲಿ ಕಟ್ಟುನಿಟ್ಟಿನ ಒಪ್ಪಂದಗಳು, ರೀತಿ–ನೀತಿಗಳು, ದೇಶ ದೇಶಗಳ ನಡುವೆ ಒಮ್ಮತದ ನಿರ್ಧಾರಗಳನ್ನು ಮಾಡಿಸುವಲ್ಲಿ ಶ್ರಮಿಸ ಬೇಕಾಗಿದೆ! ಇಲ್ಲಿ ದೇಶದೇಶಗಳ ನಡುವೆ ನಡೆಯುತ್ತಿರುವ ವಿಪರೀತವಾದ ರಾಜಕೀಯ ವಿದ್ಯಮಾನಗಳು ಈ ಜಿಯೋ ಪೊಲಿಟಿಕಲ್ ಕಾರಣಗಳು ಈ ರೀತಿಯ ನಿರ್ಧಾರಗಳನ್ನು ಯೋಜನೆಗಳನ್ನು ತೆಗೆದು ಕೊಳ್ಳುವಾಗ ನಡೆಸುವ ಸಂಚಿನಿಂದ ಪರಿಸರ ಸಂರಕ್ಷಣೆಯ ಕಾನೂನು ಕಾಯಿದೆಗಳು ಜಾಗತಿಕ ಮಟ್ಟದಲ್ಲಿಯೇ ಮೂಲೆ ಗುಂಪಾಗುತ್ತಿರುವುದು ಎಲ್ಲರಿಗೂ ತಿಳಿಯದ ವಿಷಯವೇನಲ್ಲ! ಅಲ್ಲವೇ? ಈ ಎಲ್ಲ ಜಾಗತಿಕ ಮಟ್ಟದ ರಾಜಕೀಯ ವಿಷ ವರ್ತುಲದಲ್ಲಿ ನಾನೇನು ಮಾಡುತ್ತಿದ್ದೇವೆಂಬ ಕನಿಷ್ಠ ಪರಿಜ್ಞಾನವೂ ಇಲ್ಲದ ಮನುಷ್ಯನ ನಡುವೆ ನಲುಗಿ ನಾಶವಾಗುತ್ತಿರುವುದು ಈ ಪ್ರಕೃತಿ ಪರಿಸರ! ಹಾಗೆಯೇ ಇದರಲ್ಲಿ ಯಾವುದೇ ತಪ್ಪಿಲ್ಲದೇ ತೊಂದರೆ ಅನುಭವಿಸುತ್ತಿರುವ ಪ್ರಾಣಿ, ಪಕ್ಷಿ ಸಂಕುಲಗಳು, ಕ್ರಿಮಿ ಕೀಟಗಳೂ, ಸರೀಸೃಪ ಗಳೂ ಅಸಂಖ್ಯಾತ ಜಲಚರ ಜೀವಿಗಳು, ನಾವೆಂದೂ ಈ ನಿಟ್ಟಿನಲ್ಲಿ ಆಲೋಚಿಸುತ್ತಲೇ ಇಲ್ಲ ಅಲ್ಲವೇ? ಮೇಲೆ ಹೇಳಿದ ಎಲ್ಲ ಘಟಕಗಳನ್ನು ಒಗ್ಗೂಡಿಸಿ ಕೊಂಡು ಸಹ ಬಾಳ್ವೆ, ಸಾಮರಸ್ಯದಿಂದ ಅನಾದಿ ಕಾಲದಿಂದಲೂ ಬಂದ ಪ್ರಕೃತಿಯಿಂದ ನಾವೆಲ್ಲರೂ ಕಲಿಯ ಬೇಕಾದದ್ದು ಬಹಳಷ್ಟಿದೆ! ನಮ್ಮ ಭವಿಷ್ಯಕ್ಕಾಗಿ ಪ್ರಕೃತಿಯಲ್ಲಿ ಸಾಮರಸ್ಯದಿಂದ, ಸಮತೋಲನದಿಂದ ಇರಲೇಬೇಕಾಗಿದೆ. ಮತ್ತೊಮ್ಮೆ ಆಧುನಿಕ ಮನುಷ್ಯ, ಆಧುನಿಕ ರೀತಿಯಲ್ಲಿ ಚಿಂತಿಸಿ, ಮಂಥಿಸಿ, ಅಳವಡಿಸಿಕೊಳ್ಳಬೇಕಾಗಿದೆ!



> ಸಹಬಾಳ್ವೆ, ಸಾಮರಸ್ಯದಿಂದ ಅನಾದಿ ಕಾಲದಿಂದಲೂ ಬಂದ ಪ್ರಕೃತಿಯಿಂದ ನಾವೆಲ್ಲರೂ ಕಲಿಯಬೇಕಾದದ್ದು ಬಹಳಷ್ಟಿದೆ! ನಮ್ಮ ಭವಿಷ್ಯಕ್ಕಾಗಿ ಪ್ರಕೃತಿಯಲ್ಲಿ ಸಾಮರಸ್ಯದಿಂದ, ಸಮತೋಲನದಿಂದ ಇರಲೇ ಬೇಕಾಗಿದೆ. ಮತ್ತೊಮ್ಮೆ ಆಧುನಿಕ ಮನುಷ್ಯ, ಆಧುನಿಕ ರೀತಿ ಚಿಂತಿಸಿ, ಮಂಥಿಸಿ, ಅಳವಡಿಸಿಕೊಳ್ಳಬೇಕಾಗಿದೆ!

ಹಿರಿಯ ವೈದ್ಯ ನಾಗರಾಜ್‌ರ 'ಡೀಪ್ ಡೈವ್' ಕೃತಿ ಬಿಡುಗಡೆ

ಚಾಟ್ ಜಿಪಿಟಿಯೊಂದಿಗಿನ ಸಂವಾದ ಬೆರಗು ಮೂಡಿಸುತ್ತದೆ: ಡಾ.ಎಸ್.ಪಿ.ಯೋಗಣ್ಣ ಅಭಿಮತ



ಹಿರಿಯ ವೈದ್ಯ ನಾಗರಾಜ್ ಅವರ 'ಡೀಪ್ ಡೈವ್' ಪುಸ್ತಕವನ್ನು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಬಿಡುಗಡೆ ಮಾಡಿದರು.

ಮೈಸೂರು, ಜೂ. 4– ಹಿರಿಯ ವೈದ್ಯ ಡಾ.ನಾಗರಾಜ್ ಅವರು ಬರೆದಿರುವ 'ಡೀಪ್ ಡೈವ್' ಪುಸ್ತಕ ಭಗವದ್ಗೀತೆಯ ಮಾದರಿಯಲ್ಲಿದೆ ಎಂದು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಿಸಿದರು.

ಸುಯೋಗ್ ಆಸ್ಪತ್ರೆ ಸಾಂಸ್ಕೃತಿಕ ಬಳಗ, ಭದ್ರಶೆಟ್ಟಿ ಬಳಗ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಸುಯೋಗ ಆಸ್ಪತ್ರೆ ಸಭಾಂಗಣದಲ್ಲಿ ನಡೆದ ಡಾ.ಬಿ. ನಾಗರಾಜ್ ಅವರ 'ಡೀಪ್ ಡೈವ್' ಇಂಗ್ಲಿಷ್ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು. ಈ ಕೃತಿಯು ಡಾ.ನಾಗರಾಜ ಅವರು ಚಾಟ್ ಜಿಪಿಟಿಗೆ ನಾನ್ಯಾರು, ಈ ಸೃಷ್ಟಿಯ ಬಗ್ಗೆ, ಭೂಮಂಡಲದ ಬಗ್ಗೆ, ದೇವರ ಬಗ್ಗೆ ಹೀಗೆ ಹಲವಾರು ವಿಸ್ಮಯಕಾರಿ ಪ್ರಶ್ನೆಗಳನ್ನು ಕೇಳಿ ಅದರಿಂದ ಉತ್ತರ ಪಡೆದು, ಈ ಸಂಭಾಷಣೆಯನ್ನು ಈ ಪುಸ್ತಕದ ರೂಪದಲ್ಲಿ ತಂದಿದ್ದಾರೆ. ಡಾ.ನಾಗರಾಜ್ ಅರ್ಜುನನಂತೆ ಕೇಳಿದ ಪ್ರಶ್ನೆಗಳಿಗೆ ಚಾಟ್‌ಜಿಪಿಟಿ ಕೃಷ್ಣನಂತೆ ಉತ್ತರ ನೀಡಿದೆ. ಹಾಗಾಗಿ ಈ ಪುಸ್ತಕ ಭಗವದ್ಗೀತೆ ಮಾದರಿಯಲ್ಲಿದೆ ಎಂದರು.

ನಾಗರಾಜ್‌ರವರು ಅದ್ಭುತವಾದ ಹಾಗೂ ತುಂಬ ಕಠಿಣ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡಿದ್ದಾರೆ. ಮನುಷ್ಯ ಎಲ್ಲಿಂದ ಬಂದ, ಅವನಿಗೂ ಸೃಷ್ಟಿಗೂ ಇರುವ ಸಂಬಂಧ, ಭೂಮಿಯ ಆಯಸ್ಸು, ಭೂಮಿ ಮೇಲೆ ಜೀವಿ ಎಲ್ಲಿಯ ತನಕ ಬದುಕುತ್ತದೆ. ಹೀಗೆ ಸುಮಾರು 120 ಪ್ರಶ್ನೆಗಳಿಗೆ ಜಿಪಿಟಿ ಉತ್ತರ ನೀಡಿದೆ. ಮನುಷ್ಯ ದೇಹ, ಮನಸ್ಸು ಮತ್ತು ಆತ್ಮಗಳಿಂದಾದ ಆಧ್ಯಾತ್ಮಿಕ ಜೀವಿಯಾಗಿದ್ದು ಅತೀತ ಶಕ್ತಿಯಿಂದ ನಿಯಂತ್ರಿತನಾಗುತ್ತಾನೆ. ಇಂತಹ ಪ್ರಶ್ನೆಗಳಿಗೂ ಜಿಪಿಟಿ ಉತ್ತರ ನೀಡಿದೆ ಎಂದರು.

ಚಾಟ್ ಜಿಪಿಟಿಗೆ ಮನುಷ್ಯ ಎಲ್ಲ ವಿಷಯಗಳನ್ನು ಪೂರ್ವಭಾವಿಯಾಗಿ ಸಂಗ್ರಹಿಸಿಟ್ಟಿದ್ದು, ಪ್ರಶ್ನೆ ಕೇಳುತ್ತಿದ್ದಂತೆ ತನ್ನಲ್ಲಿ ವಿವಿಧೆಡೆಯಿಂದ ಸಂಗ್ರಹವಾಗಿರುವ ಮಾಹಿತಿಯನ್ನೆಲ್ಲಾ ಒಟ್ಟುಗೂಡಿಸಿಕೊಂಡು ಪರಿಷ್ಕರಿಸಿ ಉತ್ತರ ನೀಡುತ್ತದೆ. ಅದಕ್ಕೆ ಮನಸ್ಸಿಲ್ಲ, ಭಾವನೆಗಳಿಲ್ಲ, ಸ್ವತಂತ್ರವಾಗಿ ಯೋಚಿಸುವುದಿಲ್ಲ ಎಂಬುದು ವೈಜ್ಞಾನಿಕ ವಿಷಯ. ಆದರೆ ಕೆಲವೊಮ್ಮೆ ಅದು ಉತ್ತರಿಸುವ ರೀತಿ ಗಮನಿಸಿದರೆ ಅದೂ ಯೋಚಿಸುತ್ತದೆ ಎಂದರು.

ಆಯುರ್ವೇದ ವೈದ್ಯ ಡಾ.ಗುರುಬಸವರಾಜ್, ಪ್ರಾಧ್ಯಾಪಕಿ ನಿವೇದಿತ ಹಾಗೂ ಕೃತಿಯ ಕರ್ತೃ ಡಾ.ನಾಗರಾಜ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜರ್ಷಿ ಪ್ರತಿಮೆಗೆ ಮಾಲಾರ್ಪಣೆ...



ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಬಿಜೆಪಿ ನಾಯಕ, ಚಲನಚಿತ್ರ ನಾಯಕ ನಟ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ (ಜೆಪಿ) ಮಾಲಾರ್ಪಣೆ ಮಾಡಿದರು. ಈ ವೇಳೆ ಬಿಜೆಪಿಯ ಹನುಮಂತೇಗೌಡ ಅರಸ್, ಮಹೇಶ್‌ಗೌಡ, ಸೋಮು, ಬಾಲು, ಅರಸು ಮಂಡಳಿ ಪದಾಧಿಕಾರಿಗಳು ಇದ್ದರು.

ಮೈಸೂರು ಮಗನ ಆಡಳಿತ ಮುಗೀತು... ಈಗ ಮೈಸೂರು ಅಳಿಯನ ಆಳ್ವಿಕೆ ಆರಂಭ...

●ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವಿಡಂಬನೆ ಮೂಲಕ ಬಣ್ಣನೆ ●ಸಿಎಂ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಒಳ್ಳೆ ಜೋಡಿ ●'ಮೈಸೂರು ಅಜೇಂಡಾ ಟಾಸ್ಕ್‌ಫೋರ್ಸ್' ಅದೇ ಮಾದರಿ ಮೈಸೂರು ಅಭಿವೃದ್ಧಿ ಯೋಜನೆಗೆ ಆಗ್ರಹ

ಮೈಸೂರು, ಜೂ.4(ಎಂಟಿವೈ)– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಡಿ.ಕೆ.ಶಿವಕುಮಾರ್ ಈ ಹಿಂದಿನ ಸರ್ಕಾರದ ಆಡಳಿತದಲ್ಲಾಗಿರುವ ಹಲವು ಗ್ಯಾಪ್ ಸರಿಪಡಿಸಿ ಉತ್ತಮ ಆಡಳಿತ ನೀಡುವ ಮೂಲಕ ತಾನೊಬ್ಬ ಉತ್ತಮ ಸಂಘಟನಾಕಾರ ಮಾತ್ರವಲ್ಲದೆ, ಆಡಳಿತಗಾರನೂ ಹೌದು ಎಂದು ಸಾಬೀತು ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಇದುವರೆಗೂ ಮೈಸೂರು ಮಗನ(ಸಿದ್ದರಾಮಯ್ಯ) ಆಡಳಿತ ಇತ್ತು. ಈಗ ಮೈಸೂರು ಅಳಿಯನ ಆಡಳಿತ ಆರಂಭವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಸೇವೆ ಆರಂಭಿಸಿದ ಡಿ.ಕೆ.ಶಿವಕುಮಾರ್ ಸಿಎಂ ಆಗಿ ಬೆಳೆದಿರುವುದು ಸಂತೋಷ ತಂದಿದೆ. ಈ ಹಿಂದೆ ಯೂತ್ ಕಾಂಗ್ರೆಸ್, ಕೆಪಿಸಿಸಿ ಅಧ್ಯಕ್ಷನಾಗಿ ಪಕ್ಷದ ಕಾರ್ಯಕರ್ತರ ದುಃಖ ದುಮ್ಮಾನಕ್ಕೆ ಸ್ಪಂದಿಸಿದ್ದಾರೆ. ಮುಂದಿನ ಎರಡು ವರ್ಷ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡುತ್ತಾರೆ ಎಂಬ ನಿರೀಕ್ಷೆ ನಮ್ಮೆಲ್ಲರದ್ದಾಗಿದೆ ಎಂದರು.

ಒಳ್ಳೆ ಜೋಡಿ: ರಾಜ್ಯದಲ್ಲಿ ಒಂದೆಡೆ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಆಗಿ ಅಧಿಕಾರ ವಹಿಸಿಕೊಂಡಿದ್ದರೆ, ಮತ್ತೊಂದೆಡೆ ಕೆಪಿಸಿಸಿಗೆ ನೂತನ ಸಾರಥಿಯಾಗಿ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ನೇಮಕಗೊಂಡಿದ್ದಾರೆ. ಈ ಇಬ್ಬರದ್ದು ಒಳ್ಳೆಯ ಜೋಡಿ. ಪಕ್ಷ ಸಂಘಟನೆ ಮತ್ತು ಉತ್ತಮ ಆಡಳಿತಕ್ಕೆ ಈ ಜೋಡಿ ಶ್ರಮಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕರ್ತರನ್ನು ಸ್ಮರಿಸಬೇಕು: ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲು ಕಾರ್ಯಕರ್ತರೇ ಕಾರಣ. ಕಾರ್ಯಕರ್ತರು ಪಕ್ಷ ಕಟ್ಟಿದರೆ, ಮುಖಂಡರು ಹಾಳು ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಪಕ್ಷ ಕಟ್ಟುವ ಕಾರ್ಯಕರ್ತರಿಗೆ ಮನ್ನಣೆ ನೀಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಅಜೇಂಡಾ ಟಾಸ್ಕ್ ಫೋರ್ಸ್ ರಚಿಸಿ: ಮೈಸೂರು ಅಳಿಯನಾಗಿರುವ ಡಿಕೆಶಿ ಮೇಲೆ ಮೈಸೂರಿನ ಜನತೆ ಕೆಲ ನಿರೀಕ್ಷೆ ಮಾಡುತ್ತಿದ್ದಾರೆ. ಮಾಜಿ ಸಿಎಂ ಎಸ್.ಎಂ.ಕೃಷ್ಣರ ಕಾಲದಲ್ಲಿ 'ಮೈಸೂರು ಅಜೇಂಡಾ ಟಾಸ್ಕ್ ಫೋರ್ಸ್' ಇತ್ತು. ಅದೇ ಮಾದರಿಯಲ್ಲಿ ಡಿ.ಕೆ.ಶಿವಕುಮಾರ್ ಅವರು 2050ರ ಗುರಿಯೊಂದಿಗೆ ಯೋಜನೆ ಸಿದ್ಧಪಡಿಸಿ, ರಾಜ್ಯಮಟ್ಟದಲ್ಲಿ ಅಜೇಂಡಾ ಟಾಸ್ಕ್ ಫೋರ್ಸ್ ರಚಿಸಬೇಕು. ಅದಕ್ಕಾಗಿ ಅನುಭವಿ ತಂಡವೊಂದನ್ನು ರಚಿಸಿಕೊಂಡು, ಅವರಿಂದ ಅಭಿವೃದ್ಧಿ ಬಗ್ಗೆ ಸಲಹೆ ಪಡೆಯಬೇಕು ಎಂದು ಸಲಹೆ ನೀಡಿದರು.

ಮೈಸೂರು ಲ್ಯಾಂಡ್ ಮಾಫಿಯಾ ಆಗಿದೆ: ಸಾಂಸ್ಕೃತಿಕ ನಗರಿ ಹೆಗ್ಗಳಿಕೆಗೆ ಪಾತ್ರವಾಗಿರುವ ಮೈಸೂರು ನಗರದಲ್ಲಿ ಲ್ಯಾಂಡ್ ಮಾಫಿಯಾ ಹೆಚ್ಚಾಗಿದೆ. ಪೊಲೀಸ್, ಕಂದಾಯ ಹಾಗೂ ನಗರಸಭಾ ಅಧಿಕಾರಿಗಳು ಮಾಫಿಯಾಗೆ ಬೆಂಬಲ ಕೊಡುತ್ತಿದ್ದಾರೆ. ಮೈಸೂರು ರೇಷ್ಮೆ, ಮೈಸೂರು ವೀಳ್ಯೆದೆಲೆ, ಮೈಸೂರು ಮಲ್ಲಿಗೆ ಸೇರಿದಂತೆ ವಿವಿಧ ಬ್ರಾಂಡ್‌ಗಳಿಂದಾಗಿ ವಿಶ್ವವೇ ಮೈಸೂರಿನತ್ತ ದೃಷ್ಟಿ ಹರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಲ್ಯಾಂಡ್ ಮಾಫಿಯಾ ಎಗ್ಗಿಲ್ಲದೆ, ಹೋತ–ಪ್ರೋತವಾಗಿ ಬೆಳೆಯುತ್ತಿದೆ ಎಂದು ಆರೋಪಿಸಿದರು.

ಪಟಾಲಂನಿಂದಾಗಿ ದಾರಿ ತಪ್ಪಿದ ಮೈಸೂರು ಮಗ: ಈ ಹಿಂದೆ ಆಡಳಿತ ನಡೆಸುತ್ತಿದ್ದ ಮೈಸೂರು ಮಗ ತನ್ನ ಮಗ ಹಾಗೂ ಪಟಾಲಂ ಜೊತೆ ಸೇರಿ ದಾರಿ ತಪ್ಪಿದ ಮಗನಂತಾಗಿದ್ದರು. ಅದೆಲ್ಲಾ ಈಗ ಸರಿ ಮಾಡಬೇಕು ಎಂದು ಹೇಳಿದರು.

ಡಿಕೆಶಿ ನಡೆ ಪ್ರಶಂಸನೀಯ: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಮುನ್ನ ಡಿ.ಕೆ.ಶಿವಕುಮಾರ್ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿವಿಧ ಮಠಾಧೀಶರನ್ನು ಭೇಟಿ ಮಾಡಿದ್ದಾರೆ. ಈ ನಡೆ ಪ್ರಶಂಸನೀಯ. ಈ ವರ್ತನೆ ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ಬಿಜೆಪಿಗೆ ಹಿನ್ನಡೆ: ಹಿಂದುತ್ವದ ವಿಚಾರದಲ್ಲಿ ಬಿಜೆಪಿ ಸದಾ ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಲೇ ಬಂದಿದೆ. ಆದರೆ, ಡಿಕೆಶಿ ಅವರು ವಿವಿಧ ದೇವಾಲಯಗಳಿಗೆ ಭೇಟಿ ನೀಡಿದ್ದು, ಮಠಾಧೀಶರ ಆಶೀರ್ವಾದ ಪಡೆದಿದ್ದು ಬಿಜೆಪಿಗೆ ಹಿನ್ನಡೆಯಾದಂತಾಗಿದೆ. ಕಾಂಗ್ರೆಸ್ ಪಕ್ಷವನ್ನು ಹಿಂದು ವಿರೋಧಿ ಎಂಬ ಭಾವನೆ ಡಿಕೆಶಿ ವರ್ತನೆ ಹೋಗಲಾಡಿಸಿದೆ. ಈ ಹಿಂದೆ ಸಿದ್ದರಾಮಯ್ಯ ಅವರ ನಡವಳಿಕೆಯಿಂದ ಕಾಂಗ್ರೆಸ್ ಹಿಂದು ವಿರೋಧಿ ಎಂದು ಬಿಜೆಪಿ ಟೀಕಿಸುತ್ತಿತ್ತು ಎಂದು ವಿಷಾದಿಸಿದರು.

ಮೈಸೂರಲ್ಲಿ ಸನ್ಮಾನ: ನೂತನ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಮೈಸೂರಿಗೆ ಕರೆ ತಂದು ಇಲ್ಲಿನ ಜನರ ಪರವಾಗಿ ಗೌರವಿಸಬೇಕು ಎಂದು ಇರಾದೆ. ಆ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ತಿಳಿಸಿದರು.

ರೈತರ ಎದುರು ಹಾಕಿಕೊಳ್ಳಬೇಡಿ



"ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರನ್ನು ಎದುರು ಹಾಕಿಕೊಳ್ಳಬಾರದು. ಗುಂಡೂರಾವ್ ಕಾಲದಿಂದಲೂ ರೈತರನ್ನು ಎದುರು ಹಾಕಿಕೊಂಡ ಸರ್ಕಾರಗಳು ಉಳಿದಿಲ್ಲ. ಬಿಡದಿ ಟೌನ್ ಶಿಪ್‌ಗಾಗಿ ರೈತರನ್ನು ಎದುರು ಹಾಕಿಕೊಳ್ಳಬೇಡಿ. ಟೌನ್‌ಶಿಪ್ ಅಗತ್ಯವಿದೆ. ಆದರೆ, ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಟೌನ್‌ಶಿಪ್ ಮಾಡಲು ಮುಂದಾಗಬೇಕು. ಮೈಸೂರನ್ನು ನಿವೃತ್ತರ ಪ್ಯಾರಡೈಸ್ ಎನ್ನುತ್ತಾರೆ. ಆದರೆ, ಅದನ್ನು ಯಂಗ್‌ಸ್ಟರ್ಸ್ ಪ್ಯಾರಡೈಸ್ ಆಗಿ ಮಾಡಬೇಕು. ಅಕ್ಷರ ಮತ್ತು ಆರೋಗ್ಯ ಮುಖ್ಯ. ಹಿಂದಿನ ಸರ್ಕಾರ ಶಾಲಾ ಶಿಕ್ಷಣ ಹಾಳು ಮಾಡಿತ್ತು. ಅದರ ಬಗ್ಗೆ ವಿಶೇಷ ಗಮನ ಹರಿಸಬೇಕು.

–ಅಡಗೂರು ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ಅಶೋಕ ವೃತ್ತದಲ್ಲಿ ಯದುವೀರ್ ಒಡೆಯರ್‌ರಿಂದ ಅನ್ನಸಂತರ್ಪಣೆ



ಮೈಸೂರಿನ ಅಶೋಕ ವೃತ್ತದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ಅನ್ನ ಸಂತರ್ಪಣೆಗೆ ಸಂಸದ ಯದುವೀರ್ ಚಾಲನೆ ನೀಡಿದರು.

ಮೈಸೂರು, ಜೂ. 4– ಮೈಸೂರಿನ ಅಶೋಕ ವೃತ್ತ(ಬಲ್ಲಾಳ್ ಸರ್ಕಲ್)ದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಭಕ್ತಿಪೂರ್ವಕ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮಾಜಿ ಉಪಮೇಯರ್ ವಿ.ಶೈಲೇಂದ್ರ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಒಡೆಯರ್ ಅವರು ಪಾಲ್ಗೊಂಡು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಮಾತನಾಡಿದ ಗಣ್ಯರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ, ನೀರಾವರಿ, ಕೈಗಾರಿಕೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೀಡಿದ ಕೊಡುಗೆಗಳು ಇಂದಿಗೂ ಮಾರ್ಗದರ್ಶಿಯಾಗಿವೆ. ಅವರ ದೂರದೃಷ್ಟಿಯ ಆಡಳಿತ ಮತ್ತು ಜನಪರ ಚಿಂತನೆಗಳು ಸದಾ ಪ್ರೇರಣಾದಾಯಕವಾಗಿವೆ ಎಂದು ಸ್ಮರಿಸಿದರು.

ಬಳಿಕ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೂ ಸಂಸದ ಯದುವೀರ್ ಚಾಲನೆ ನೀಡಿ, ಸಾರ್ವಜನಿಕರಿಗೆ ಬಡಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಜಗದೀಶ್, ಬಿಜೆಪಿ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಡಿ.ಮುರಳೀಧರ್, ಸುಶೀಲ, ಮಹದೇವು, ಮಹೇಶ್, ವಿಷ್ಣು, ಚಾಮುಂಡೇಶ್ವರಿ ಕ್ಷೇತ್ರದ ವೈ.ಟಿ.ರವಿ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ರುದ್ರಮೂರ್ತಿ, ನಿಖಿಲೇಶ್, ಬಿಜೆಪಿ ಮುಖಂಡರು, ಕಾರ್ಯಕರ್ತರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ದಟ್ಟಗಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಜೂ.6 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ದಟ್ಟಗಳ್ಳಿ 'ಐ'ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಆಂದೋಲನ ವೃತ್ತ, ಸಬ್ ರಿಜಿಸ್ಟ್ರಾರ್ ಆಫೀಸ್, ಕನಕದಾಸನಗರ, ಆದಿತ್ಯ ಸರ್ಕಲ್, ಸೋಮನಾಥನಗರ, ಮಹಾಲಕ್ಷ್ಮೀ ಬಡಾವಣೆ ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್.ಟಿ.ನಗರ, ಲಿಂಗಾಂಬುದಿ ಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆಬ್ಲಾಕ್ ಆರ್.ಕೆ.ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಬಲ್ಲಳ್ಳಿ, ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿಹುಂಡಿ ಐ.ಪಿ.ಲಿಮಿಟ್ಸ್ ಚಾವಿಸನಿನಿ ಮುಖ್ಯ ಇಂಜಿನಿಯರ್ ಕಚೇರಿ, ಹೆಲ್ತ್ ಸಿಟಿ, ಕಾರ್ತಿಕ ಬಡಾವಣೆ ಐ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಮೈಸೂರಿನ ಅಶೋಕಪುರಂ 1ನೇ ಕ್ರಾಸ್‌ನ ಶ್ರೀ ಶಂಭು ಲಿಂಗೇಶ್ವರ ದೇವಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು. ಈ ವೇಳೆ ಚಂದ್ರಶೇಖರ್, ಪತ್ರಿಕಾ ವಿತರಕ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಜಿ ಅಧ್ಯಕ್ಷ ಪಿ.ಮಹದೇವ್, ನಟರಾಜ್, ಮುರಳಿ, ಮನು, ಅವಿನಾಶ್, ಚಂದ್ರಶೇಖರ್ ಮತ್ತಿತರರಿದ್ದರು.

ನೂತನ ಸಿಎಂ ಡಿ.ಕೆ.ಶಿವಕುಮಾರ್‌ಗೆ ಅಭಿನಂದನೆ...





ಬುಧವಾರ ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನ ಸದಾಶಿವನಗರದ ಅವರ ನಿವಾಸದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ, ಕುಂಬಾರಕೊಪ್ಪಲು ಬಡಾವಣೆ ನಿವಾಸಿ ಹಾಗೂ ಉದ್ಯಮಿ ಚೇತನ್ ವಿಷಕಂಠೇಗೌಡ ಅವರು ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ನಾಳೆ ಸ್ನಾತಕೋತ್ತರ ಪದವಿ ಪ್ರದಾನ

ಮೈಸೂರು, ಜೂ.4(ಎಂಕೆ)– ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಜೂ.6 ರಂದು ಬೆಳಗ್ಗೆ 10 ಗಂಟೆಗೆ ಸ್ನಾತಕೋತ್ತರ ಪದವಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕಾಲೇಜು ಪ್ರಾಂಶುಪಾಲ ಡಾ.ರವಿ ಜೆ.ಡಿ. ಸಲ್ಡಾನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಲೇಜು ಸಭಾಂಗಣದಲ್ಲಿ ಸಮಾರಂಭ ನಡೆಯಲಿದ್ದು, ಕ್ರೈಸ್ತ ಧರ್ಮ ಗುರುಗಳಾದ ಎಂ.ಅಂತಪ್ಪ, ಬೆಂಗಳೂರು ವಿವಿಯ ಡಾ.ಮನಮೋಹನ್‌ಸಿಂಗ್, ಪ್ರೊ.ಬಿ.ರಮೇಶ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ ಎಂದರು.

ಕಾಲೇಜು ಆಡಳಿತ ವಿಭಾಗದ ಮುಖ್ಯಸ್ಥ ಲೂರ್ದು ಪ್ರಸಾದ್ ಜೋಸೆಫ್ ಮಾತನಾಡಿ, ಸಮಾರಂಭದಲ್ಲಿ ವಿವಿಧ ವಿಭಾಗಗಳ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಸ್ವೀಕರಿಸಲಿದ್ದು, ಅತ್ಯುತ್ತಮ ಸಾಧನೆ ಮಾಡಿದವರಿಗೆ 1 ಚಿನ್ನದ ಪದಕ ಬಹುಮಾನವಾಗಿ ನೀಡಲಾಗುವುದು. ಇದಲ್ಲದೆ, ಪ್ರತಿಷ್ಠಿತ ಸರ್.ಟಿ. ತಂಬುಚೆಟ್ಟಿ ವಿದ್ಯಾರ್ಥಿ ವೇತನ ಸಹಾ ನೀಡಲಾಗುವುದು ಎಂದರು. ಫಾ.ಎಸ್.ರೋಷನ್, ಡಾ.ಯಮುನಾ, ಡಾ.ನೂರ್ ಮುಬಾಷಿರ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಬೆಂಗಳೂರು: ವಾರ್ತಾ– ಸಾರ್ವಜನಿಕ ಸಂಪರ್ಕ ಇಲಾಖೆ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು, ಮಾಧ್ಯಮ ಸಂಸ್ಥೆಗಳಲ್ಲಿ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ, ಅರೆಕಾಲಿಕ ವರದಿಗಾರರು ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರು, ಸ್ಥಾನಿಕ ಸಂಪಾದಕರ, ಮುಖ್ಯಸ್ಥರ ಶಿಫಾರಸ್ಸು ಪತ್ರ, ಸೇವಾ ಪ್ರಮಾಣ ಪತ್ರವನ್ನು https:// sevasin dhu.karnataka.gov.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಪಿಹೆಚ್.ಡಿ ಪದವಿ



ಮೈಸೂರು: ಕಾವ್ಯ ಕೆ.ಎಂ ಅವರು ಡಾ.ಕೃಷ್ಣವೇಣಿ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಅಭಿನಂದನೆ...



ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬೀರಿಹುಂಡಿ ಬಸವಣ್ಣ, ಎಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮೊಳೆಯೂರು ಆನಂದ್ ಮತ್ತು ಇನ್ನಿತರರು ಉಪಸ್ಥಿತರಿದ್ದರು..

ಧಾರ್ಮಿಕ ಸಾಮರಸ್ಯ ವರ್ತಮಾನಕ್ಕೆ ದೊಡ್ಡ ಮೌಲ್ಯ

●ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ ●ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ; ಕೃತಿ ಬಿಡುಗಡೆ



ಲೇಖಕ ಪ್ರೊ.ಎಸ್.ಚಂದ್ರಶೇಖರ್ ರಚಿತ 'ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಆಧುನಿಕ ಮೈಸೂರು, ಕೃತಿಯನ್ನು ಮೈಸೂರು ವಿವಿ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಈ ವೇಳೆ ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ, ಬೆಂಗಳೂರು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಸಂಗಮೇಶ್ ಉಪಾಸೆ, ಕಸಾಪ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ, ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಉಪಸ್ಥಿತರಿದ್ದರು.

ಮೈಸೂರು, ಜೂ.4(ಎಂಕೆ)– ಸಾಮಾಜಿಕ ಕಾಯಿಲೆಗಳೊಂದಿಗೆ ಕಾಳಗ ಮಾಡುವ ಈ ವ್ಯವಸ್ಥೆಯಲ್ಲಿ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಧನೆ ಅನೇಕ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಕಸಾಪ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಲೇಖಕ ಪ್ರೊ.ಎಸ್.ಚಂದ್ರಶೇಖರ್ ರಚಿತ 'ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಆಧುನಿಕ ಮೈಸೂರು' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಚುನಾವಣೆ ಒಂದು ತಾಂತ್ರಿಕ ಅಂಶವಷ್ಟೇ. ಸೌಹಾರ್ದ, ಸಾಮರಸ್ಯ ಕಾಪಾಡುವ ತಾತ್ವಿಕತೆಯೇ ಪ್ರಮುಖ ಸತ್ವ ಎಂಬುದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಸಾಕ್ಷಿಯಾಗಿದೆ. ಅವರು ತೋರಿದ ಧಾರ್ಮಿಕ ಸಾಮರಸ್ಯ ವರ್ತಮಾನಕ್ಕೆ ದೊಡ್ಡಮೌಲ್ಯ. ಸಾಂಸ್ಕೃತಿಕ ಪ್ರಜಾಪ್ರಭುತ್ವದ ಸಂಕೇತವಾಗಿ ಇಡುಗಂಟು ನೀಡಿ, ಕನ್ನಡ ಸಾಹಿತ್ಯ ಪರಿಷತ್ ಸ್ವಾಯತ್ತ ಸಂಸ್ಥೆ ಸ್ಥಾಪಿಸಿರುವುದು ಒಂದು ಉದಾಹರಣೆ ಎಂದು ಸ್ಮರಿಸಿದರು.

ಇತಿಹಾಸ, ನೈತಿಕತೆಯೇ ಮುಖ್ಯ: ಇಂದು ಚರಿತ್ರೆ ಬಿಕ್ಕಟ್ಟಿನಲ್ಲಿದೆ. ಅದರ ಚಾರಿತ್ರ್ಯ ಕಳೆದು ಹೋಗುತ್ತಿದೆ. ಜಾತಿ, ಮತ, ಧರ್ಮ, ರಾಜಕೀಯ ಪಕ್ಷದ ಸಂಕುಚಿತ ನೆಲೆಯಲ್ಲಿ ಇತಿಹಾಸವನ್ನು ನೋಡುವುದೇ ಸಮಸ್ಯೆಗೆ ಕಾರಣ. ವಾಗ್ವಾದ ಮತ್ತು ಸಂವಾದಗಳಿಗಿಂದು ಬೆಲೆಯೇ ಇಲ್ಲ. ಇತಿಹಾಸ ಕಟ್ಟಲು ನೈತಿಕತೆ ಬಹಳ ಮುಖ್ಯ. ಇಲ್ಲಿ ನೈತಿಕತೆ ಎಂದರೆ ಪಕ್ಷಪಾತವಿಲ್ಲದ ಆಲೋಚನೆ, ತಾವಿರುವ ವ್ಯವಸ್ಥೆಯನ್ನು ಮೀರುವ ಮನೋಧರ್ಮ ಮತ್ತು ವಿದ್ವತ್ತು ಎಂದು ವಿವರಿಸಿದರು.

ಉತ್ತಮ ಚರಿತ್ರೆ ಬರೆಯುತ್ತಾರೆ: ಕೃತಿ ಕುರಿತು ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ ಮಾತನಾಡಿ, ಇತಿಹಾಸ ರಚಿಸುವವರಿಗೆ ವರ್ತಮಾನವನ್ನು ವಿಮರ್ಶಿಸುವ, ಬದಲಾಯಿಸುವ ಅಥವಾ ಅರ್ಥಮಾಡಿಕೊಳ್ಳುವ ಆಸೆ ಇರುತ್ತದೆ. ಇದರಲ್ಲಿ ಅರ್ಥಮಾಡಿಕೊಳ್ಳುವ ಆಸೆಯುಳ್ಳವರು ಉತ್ತಮ ಚರಿತ್ರೆ ಬರೆಯುತ್ತಾರೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಬೆಂಗಳೂರು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಸಂಗಮೇಶ್ ಉಪಾಸೆ, ಕಸಾಪ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ, ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಗೈಡ್‌ಗಳು ಋಣ ಸಂದಾಯಕ್ಕೆ ಕಾಯುತ್ತಾರೆ...!

"ನಮ್ಮ ವಿಶ್ವವಿದ್ಯಾಲಯಗಳಿಂದು ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಪಿಹೆಚ್‌ಡಿಗೆ ಗೌರವವಿಲ್ಲ. ಗೈಡ್‌ಗಳು ಋಣ ಸಂದಾಯಕ್ಕೆ ಕಾಯುತ್ತಾರೆ. ಕಲಿತು, ತಿಳಿದು ಏನಾಗಬೇಕು ಎಂಬ ಉಡಾಫೆಯನ್ನು ಯುವಜನರೂ ಹೊಂದಿದ್ದು, ಪ್ರಜಾಪ್ರಭುತ್ವ ಸಂಸ್ಥೆಗಳು ಕುಸಿದು ಬೀಳುತ್ತಿರುವ ಹೊತ್ತಿನಲ್ಲಿ 'ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಆಧುನಿಕ ಮೈಸೂರು' ಕೃತಿಯೂ ವರ್ತಮಾನಕ್ಕೆ ಹಿಡಿದ ಕೈಕನ್ನಡಿಯಾಗಿದೆ. –ಓ.ಎಲ್.ನಾಗಭೂಷಣಸ್ವಾಮಿ, ವಿಮರ್ಶಕ

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಹಿನ್ನೆಲೆಯಲ್ಲಿ ಮೈಸೂರು ವಿವಿ ಕಾರ್ಯಸೌಧ ಮುಂಭಾಗದ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಮೈಸೂರು, ಜೂ. 4–ಮೈಸೂರು ವಿಶ್ವವಿದ್ಯಾನಿಲಯ ಕಾರ್ಯಸೌಧದ ಮುಂಭಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು, ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ.ಎಂ.ಪಿ.ಸದಾಶಿವ ಅವರು ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು.

ಈ ವೇಳೆ ಮೈಸೂರು ವಿವಿ ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ.ಎಂ.ಪಿ.ಸದಾಶಿವ ಮಾತನಾಡಿ, 1902ರಿಂದ 1940ವರೆಗೆ 38 ವರ್ಷಗಳ ಕಾಲ ಮೈಸೂರು ಸಂಸ್ಥಾನದ ಮಾದರಿ ಅರಸರಾಗಿ ಆಳ್ವಿಕೆ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಭಿವೃದ್ಧಿ ಮತ್ತು ಪ್ರಜಾಕಲ್ಯಾಣಕ್ಕಾಗಿ ಶ್ರಮಿಸಿದರು. ಶಿಕ್ಷಣವೇ ಸಂಪತ್ತಿನ ಮೂಲವೆಂದು ಭಾವಿಸಿದ್ದ ಅವರು ಪಾಶ್ಚಾತ್ಯ ಮಾದರಿ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟು, ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ಮೂಲಕ ದೇಶಕ್ಕೆ ಮಾದರಿಯಾದರು ಎಂದರು.

ಗಾಂಧೀಜಿ ಅವರಿಂದ ರಾಜಋಷಿ ಎನಿಸಿಕೊಂಡು, ಮೈಸೂರು ಸಂಸ್ಥಾನವನ್ನು 'ಸಾಂಸ್ಕೃತಿಕ ರಾಮರಾಜ್ಯ'ವಾಗಿ ನಿರ್ಮಿಸಿದರು. ಕೃಷಿ, ಕೈಗಾರಿಕೆ, ಆರೋಗ್ಯ, ವಿದ್ಯುತ್, ಶಿಕ್ಷಣ, ಕಲೆ, ಸಾಹಿತ್ಯ, ಸಂಸ್ಕೃತಿ, ಧರ್ಮ ಸಮನ್ವಯತೆ, ಸಾಮಾಜಿಕ ನ್ಯಾಯದ ಪ್ರತೀಕವಾಗಿ ತಳ ಸಮುದಾಯಗಳಿಗೆ ಮೀಸಲಾತಿ, ಮಹಿಳಾ ಸಬಲೀಕರಣ, ರಾಜಕೀಯ ಪ್ರಾತಿನಿಧ್ಯ ನೀಡಿ ಸರ್ವರ ಬಾಳಿನ ಬೆಳಕಾದವರು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಪ್ರೊ.ಸಪ್ನಾ, ಪ್ರೊ.ಜ್ಯೋತಿ, ಪ್ರೊ.ಜೆ.ಸೋಮಶೇಖರ್, ಪ್ರೊ.ಅನಿಲ್ ಕುಮಾರ್, ಪ್ರೊ.ಮಾರುತಿ, ಪ್ರೊ.ವಾಸುಕಿ, ಪ್ರೊ.ರಾಜಕುಮಾರ್, ಪ್ರೊ.ನಮಿತಾ ತಿಮ್ಮಯ್ಯ, ಪ್ರೊ.ಸಿ.ಡಿ.ಪರಶುರಾಮ, ಪ್ರೊ.ಶ್ರೀನಿವಾಸ್, ಪ್ರೊ.ರೇವಣ್ಣಸಿದ್ದಪ್ಪ, ಪ್ರೊ.ಮಂಟೇಲಿಂಗು, ಪ್ರೊ.ಚಂದ್ರಶೇಖರ್, ಪ್ರೊ.ಗೀತಾ, ಪ್ರೊ.ಕೃಷ್ಣವೇಣಿ, ಪ್ರೊ.ಸಣ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ...



ಮೈಸೂರಿನ ಗಾಂಧಿ ವೃತ್ತದಲ್ಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ವತಿಯಿಂದ ಬ್ಯಾಂಕಿನ ಸಂಸ್ಥಾಪಕರಾದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜನ್ಮ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ಎನ್.ಯೋಗಾನಂದ, ಜಿ.ನಿರಂಜನ್, ಹೆಚ್.ಹರೀಶ್‌ಕುಮಾರ್, ಆರ್.ರವಿಕುಮಾರ್, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ, ಪಿ.ರಾಜೇಶ್ವರಿ, ಪ್ರಮೀಳಾ ಲೋಕೇಶ್, ಕಾರ್ಯದರ್ಶಿ ಹರ್ಷಿತ್‌ಗೌಡ. ಕೆ, ವೃತ್ತಿಪರ ನಿರ್ದೇಶಕ ಸಿ.ಎಸ್.ರಾಮಕೃಷ್ಣಯ್ಯ ಹಾಗೂ ಬ್ಯಾಂಕಿನ ಸದಸ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಸಮಸ್ಯೆ ಇಲ್ಲ

ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಅಭಿಪ್ರಾಯ

ಕೆಆರ್‌ಎಸ್, ಜೂ.4– ಬೆಂಗಳೂರು, ಮಂಡ್ಯ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯಲು ಹಾಗೂ ಬೆಳೆ ಬೆಳೆಯಲು ಯಾವುದೇ ನೀರಿನ ಸಮಸ್ಯೆ ಇಲ್ಲ ಎಂದು ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.

ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಿ ನೀರಿನ ಮಟ್ಟ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಗಾರು ವಿಳಂಬವಾಗಿದ್ದರೂ ಡ್ಯಾಂ ನಲ್ಲಿ 72 ಅಡಿ ನೀರಿದೆ. ಕುಡಿಯಲು ಯಾವುದೇ ಸಮಸ್ಯೆ ಇಲ್ಲ. ಅಲ್ಲಲ್ಲಿ ಮಳೆ ಬೀಳುತ್ತಿರುವುದರಿಂದ ಬೆಂಗಳೂರಿಗೂ ಸಹ ನೀರಿನ ಸಮಸ್ಯೆ ಇಲ್ಲ. ಪ್ರಸಕ್ತ ಸಾಲಿನಲ್ಲಿ 400 ರಿಂದ 450 ಕ್ಯೂಸೆಕ್ ನೀರನ್ನು ನದಿಗೆ ಹರಿಯ ಬಿಟ್ಟಿದ್ದು, ಮತ್ತೆ ನೀರಿನ ಅವಶ್ಯಕತೆ ಇದ್ದರೆ ಬಿಡುವುದಾಗಿ ಸ್ಪಷ್ಟಪಡಿಸಿದರು.

ನೀರಿನ ಒಳ ಅರಿವು ಉತ್ತಮವಾಗಿದ್ದು, ಈ ಬಾರಿಯೂ ಸಹ ನೀರಿನ ಕೊರತೆಯಾಗುವುದಿಲ್ಲ ಎಂಬ ವಿಶ್ವಾಸವಿದೆ. ಮೈಸೂರಿನ 4ನೇ ಹಂತಕ್ಕೆ 160 ಕ್ಯೂಸೆಕ್ ನೀರು ಬಳಕೆಯಾಗುತ್ತಿದ್ದು, ಮಂಡ್ಯ ಜಿಲ್ಲೆಗೆ ಕುಡಿಯಲು ಹಾಗೂ ಬೆಳೆಗಳಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಇದನ್ನು ಅಂದಾಜಿಸಿಯೇ ನೀರು ಬಿಡುಗಡೆ ಮಾಡಿದ್ದು, ಉತ್ತಮ ಮಳೆ ಯಾಗುತ್ತಿದ್ದು, ನಾವು ಮತ್ತಷ್ಟು ನೀರಿನ ಶೇಖರಣೆ ಮಾಡಲು ಒತ್ತು ಕೊಡಬೇಕಿದೆ ಎಂದರು.

ಇದೇ ವೇಳೆ ಕೃಷ್ಣರಾಜಸಾಗರ ಅಣೆಕಟ್ಟೆ ಮುಂಭಾಗ ಕಾವೇರಿ ನೀರಾವರಿ ನಿಗಮ ಮತ್ತು ತಾಲೂಕು ಆಡಳಿತದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು. ಅಣೆಕಟ್ಟೆಯ ದಕ್ಷಿಣ ಬೃಂದಾವನದ ಮುಖ್ಯದ್ವಾರದ ಮುಂಭಾಗದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ವಿಶೇಷವಾಗಿ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು.

ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ವೆಂಕಟರಮಣಪ್ಪ, ತಹಸೀಲ್ದಾರ್ ಚೇತನಾ ಯಾದವ್, ತಾಪಂ ಇಓ ಚಂದ್ರು, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಫಾರೂಕ್ ಅಭು, ಲೋಹಿತ್, ರಶ್ಮಿ, ಲೋಹಿತ್, ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಉಸ್ತುವಾರಿ ಅಧಿಕಾರಿ ಗೋವರ್ಧನ್, ನಿಗಮದ ಲೆಕ್ಕ ಅಧೀಕ್ಷಕ ಕೆ.ಆರ್.ಶ್ರೀನಿವಾಸ್, ಕೆ.ಆರ್.ಸಾಗರ ಗ್ರಾಪಂ ಮಾಜಿ ಸದಸ್ಯರಾದ ಜಗದೀಪ್ ಸಿಂಗ್, ದೇವರಾಜು, ಕಾ.ನೀ.ನಿಗಮದ ಅಭಿಯಂತರರರಾದ ಅಭಿ ಲಾಷ್, ಶಿವಕುಮಾರ್, ಅಕಿಬ್ ಜಾವಿದ್, ಸಹನಾ, ರಾಜಸ್ವ ನಿರೀಕ್ಷಕ ಪ್ರಸನ್ನ, ಪುರಸಭಾ ಮಾಜಿ ಅಧ್ಯಕ್ಷ ದಿನೇಶ್, ಪುರಸಭೆ ಕಾರ್ಯ ನಿರ್ವಹಣಾ ಧಿಕಾರಿ ರಾಜಣ್ಣ ಸೇರಿದಂತೆ ಇತರರಿದ್ದರು.



ಕೆಆರ್‌ಎಸ್‌ನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು.

> 2ನೇ ಹಂತದ ಸಚಿವ ಸಂಪುಟ ಪುನರ್ ರಚನೆ ವೇಳೆ ನನಗೆ ಸಚಿವ ಸ್ಥಾನ ಸಿಗುತ್ತದೆ ಎಂಬ ವಿಶ್ವಾಸದಲ್ಲಿದ್ದೇನೆ. ಪಕ್ಷದ ನಾಯಕರು ಮತ್ತು ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುತ್ತದೆಯೋ ಅದಕ್ಕೆ ಬದ್ಧನಿದ್ದೇನೆ. ನನಗೆ ಸಚಿವ ಸ್ಥಾನ ದೊರೆತರೆ ಕೇವಲ ಮಂಡ್ಯ ಜಿಲ್ಲೆ ಮಾತ್ರವಲ್ಲ. ರಾಜ್ಯದ ಅಭಿವೃದ್ಧಿಗೆ ನನ್ನ ಕಲ್ಪನೆಯಲ್ಲಿ ಕೆಲಸ ಮಾಡುವೆ.
> – ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಶಾಸಕ.

ಪಿಡಿಓ ನಿವಾಸಗಳ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ

ಗ್ರಾಪಂ, ತಾಪಂಗೂ ಲಗ್ಗೆ: ದಾಖಲೆಗಳ ಸಮಗ್ರ ಪರಿಶೀಲನೆ

ಮಂಡ್ಯ, ಜೂ.4– ಉಪ ಲೋಕಾಯುಕ್ತ ಬಿ.ವೀರಪ್ಪ ಅವರ ಆದೇಶದ ಮೇರೆಗೆ ಮಂಡ್ಯ ಲೋಕಾಯುಕ್ತ ಪೊಲೀಸರು ಬುಧವಾರ ಬೆಳಗ್ಗೆಯಿಂದಲೇ ತಾಲೂಕಿನ ಬೇಲೂರು, ಬೇವಿನಹಳ್ಳಿ ಪಿಡಿಓಗಳ ನಿವಾಸ, ಗ್ರಾಪಂ ಕಚೇರಿ, ಮಂಡ್ಯ ತಾಪಂ ಇಓ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಿದರು.

15 ದಿನಗಳ ಹಿಂದೆ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ಬೇಲೂರು, ಬೇವಿನಹಳ್ಳಿ ಗ್ರಾಪಂಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ್ದ ವೇಳೆ ಪಂಚಾಯಿತಿ ಇ–ಸ್ವತ್ತು, ತೆರಿಗೆ ಸಂಗ್ರಹ, ಲೇಔಟ್ ಶುಲ್ಕ, ಕೃಷಿ ಭೂಮಿ ಅನ್ಯ ಕ್ರಾಂತ ಸೇರಿದಂತೆ ಹಲವು ದಾಖಲೆಗಳನ್ನು ಪಿಡಿಓಗಳು ಸಮರ್ಪಕವಾಗಿ ಒದಗಿಸದೆ ಮುಚ್ಚಿಡುವ ಪ್ರಯತ್ನ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತರು ಬೇಲೂರು ಹಾಗೂ ಬೇವಿನಹಳ್ಳಿ ಗ್ರಾಪಂಗಳು, ಪಿಡಿಓ ನಿವಾಸಗಳಲ್ಲಿ ಸಮಗ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಮಂಡ್ಯ ಲೋಕಾಯುಕ್ತ ಅಧೀಕ್ಷಕ ಸುರೇಶ್‌ಬಾಬು ಅವರಿಗೆ ಆದೇಶಿಸಿದ್ದರು. ಅದರಂತೆ ಬುಧವಾರ ಲೋಕಾಯುಕ್ತ ಡಿವೈಎಸ್ಪಿ ಸುನೀಲ್ ಕುಮಾರ್, ಲೋಕಾಯುಕ್ತ ನಿರೀಕ್ಷಕ ಬ್ಯಾಟರಾಯಗೌಡ ಸೇರಿದಂತೆ ಇನ್ನಿತರ ಅಧಿಕಾರಿಗಳ ನೇತೃತ್ವದ ತಂಡ ಬೇಲೂರು ಗ್ರಾಪಂ ಪಿಡಿಓ ಸಿದ್ದರಾಜು, ಬೇವಿನಹಳ್ಳಿ ಗ್ರಾಪಂ ಪಿಡಿಓ ಚಾಮರಾಜು ನಿವಾಸ ಮತ್ತು ತಾಪಂ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಿದರು.

ಬೇವಿನಹಳ್ಳಿ ಗ್ರಾಪಂ ಪಿಡಿಓ ಮನೆಯಲ್ಲಿ ದಾಖಲೆ ಪರಿಶೀಲನೆ ವೇಳೆ ಚಾಮರಾಜು ಅವರು ಹಿಂದೆ ಪಿಡಿಓ ಆಗಿ ಕಾರ್ಯ ನಿರ್ವಹಿಸಿದ್ದ ನಾಗಮಂಗಲ ತಾಲೂಕಿನ ಕರಡಹಳ್ಳಿ, ಮಂಡ್ಯ ತಾಲೂಕಿನ ದೊಡ್ಡ ಗರುಡನಹಳ್ಳಿ ಗ್ರಾಪಂ ಸೀಲ್‌ಗಳು ಹಾಗೂ ಅಧ್ಯಕ್ಷರ ಸೀಲ್‌ಗಳು ಕಂಡು ಬಂದವು. ವರ್ಗಾವಣೆಯಾದ ನಂತರವೂ ಸೀಲ್‌ಗಳನ್ನು ಇಟ್ಟುಕೊಂಡಿರುವುದನ್ನು ನೋಡಿದರೆ ಅವುಗಳ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಲೋಕಾಯುಕ್ತ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಹಿಂದಿನ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುವ ವೇಳೆ ಬ್ಯಾಂಕ್‌ಗೆ ಹಣ ಕಟ್ಟಿದ ಚಲನ್‌ಗಳನ್ನು ಜೊತೆಯಲ್ಲೇ ಇಟ್ಟುಕೊಂಡಿದ್ದು, ಅವೆಲ್ಲವುಗಳನ್ನು ವಶಕ್ಕೆ ಪಡೆದಿದ್ದಾರೆ.

ಬೇವಿನಹಳ್ಳಿ ಗ್ರಾಪಂನಲ್ಲಿ 2 ಸಾವಿರ ಇ–ಸ್ವತ್ತುಗಳಿವೆ. ಪ್ರತಿಯೊಂದು ಇ–ಸ್ವತ್ತುಗಳನ್ನು ಪರಿಶೀಲಿಸುತ್ತಿರುವ ಲೋಕಾಯುಕ್ತ ಪೊಲೀಸರು ಆನ್‌ಲೈನ್‌ಗೆ ಅಪ್‌ಲೋಡ್ ಮಾಡಿರುವ ದಾಖಲೆಗಳೆಲ್ಲವೂ ಕಡತಗಳಲ್ಲಿವೆಯೇ, ಇಲ್ಲವೇ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುತ್ತಿದ್ದಾರೆ. ಲೋಕಾಯುಕ್ತ ನಿರೀಕ್ಷಕ ಬ್ಯಾಟರಾಯಗೌಡ ಅವರು ಹಿಂದಿನ 5 ವರ್ಷಗಳಲ್ಲಿ ನಡೆದಿರುವ ಇ–ಸ್ವತ್ತುಗಳನ್ನು ಪರಿಶೀಲನೆಗೊಳಪಡಿಸಿದ್ದಾರೆ.

ತಾಪಂ ಕಚೇರಿಯಲ್ಲಿ ಪರಿಶೀಲನೆ: ಮಂಡ್ಯ ತಾಪಂಗೆ ತೆರಳಿದ ಡಿವೈಎಸ್ಪಿ ಸುನೀಲ್‌ಕುಮಾರ್ ನೇತೃತ್ವದ ತಂಡ ಕಂದಾಯ ನಕ್ಷೆ ಪರಿಶೀಲಿಸಿದರು. ನಕ್ಷೆಯಲ್ಲಿ ಒಂದು ಊರಿನ ವಿಸ್ತೀರ್ಣ, ಗಡಿ, ಎಷ್ಟು ಸರ್ವೆ ನಂಬರ್‌ಗಳು ಗ್ರಾಮದ ವ್ಯಾಪ್ತಿಗೆ ಬರಲಿವೆ. ಆ ಸರ್ವೆ ನಂಬರ್‌ಗಳಲ್ಲಿರುವ ಸರ್ಕಾರಿ ಜಮೀನು, ಗೋಮಾಳ, ಒತ್ತುವರಿಯಾಗಿದೆಯೇ ಇಲ್ಲವೇ, ಅಕ್ರಮವಾಗಿ ಲೇಔಟ್‌ಗಳನ್ನು ನಿರ್ಮಿಸಲಾಗಿದೆಯೇ ಎಂಬ ಬಗ್ಗೆ ತಾಪಂ ಇಓ ಲೋಕೇಶ್‌ಮೂರ್ತಿ ಅವರನ್ನು ಮುಂದಿಟ್ಟು ಕೊಂಡು ಪರಿಶೀಲಿಸಿ ಹೆಚ್ಚುವರಿ ಮಾಹಿತಿ ಪಡೆದರು.



ಮಂಡ್ಯದ ತಾಪಂ ಕಚೇರಿಯಲ್ಲಿ ದಾಖಲೆಗಳ ಪರಿಶೀಲನೆ ನಡೆಯಿತು.

ಮಂಡ್ಯದ ಕರ್ನಾಟಕ ಮಲ್ಲಾಡಿ ಬಯೋಟಿಕ್ಸ್ ಲಿಮಿಟೆಡ್‌ನ 84 ಕಾರ್ಮಿಕರ ವಜಾ ಕಾನೂನುಬಾಹಿರ

ತಲಾ 3 ಲಕ್ಷ ಪರಿಹಾರಕ್ಕೆ ಹೈಕೋರ್ಟ್ ಆದೇಶ

ಬೆಂಗಳೂರು, ಜೂ.4– ಮಂಡ್ಯದ ಕರ್ನಾಟಕ ಮಲ್ಲಾಡಿ ಬಯೋಟಿಕ್ಸ್ ಲಿಮಿಟೆಡ್ (ಪ್ರಸ್ತುತ ಎಂಬಿಯೋ ಲಿಮಿಟೆಡ್) ಸಂಸ್ಥೆಯು ಸರ್ಕಾರದಿಂದ ಯಾವುದೇ ಅನುಮತಿ ಪಡೆಯದೇ 84 ಮಂದಿ ಕಾರ್ಮಿಕರನ್ನು ಸೇವೆಯಿಂದ ತಾತ್ಕಾಲಿಕವಾಗಿ ಅಮಾನತು ಮಾಡಿ, ಬಳಿಕ ಕೆಲಸದಿಂದ ವಜಾಗೊಳಿಸಿರುವುದು ಕಾನೂನುಬಾಹಿರ ಎಂದು ಹೈಕೋರ್ಟ್ ತಿಳಿಸಿದೆ.

ಅಲ್ಲದೆ, ಮುಂದಿನ 8 ವಾರಗಳ ಒಳಗಾಗಿ ಪ್ರತಿಯೊಬ್ಬ ಸಂತ್ರಸ್ತ ಕಾರ್ಮಿಕನಿಗೂ ತಲಾ 3 ಲಕ್ಷ ರೂ.ಗಳ ಒಟ್ಟೂ ಮೊತ್ತದ ಪರಿಹಾರ ಪಾವತಿಸುವಂತೆ ಸಂಸ್ಥೆಯ ಆಡಳಿತ ಮಂಡಳಿಗೆ ನಿರ್ದೇಶನ ನೀಡಿದೆ.

ಕಾರ್ಮಿಕರನ್ನು ಸೇವೆಯಿಂದ ವಜಾಗೊಳಿಸಿದ್ದ ಕಂಪನಿಯ ಕ್ರಮ ಎತ್ತಿ ಹಿಡಿದ್ದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಕಾರ್ಮಿಕ ನ್ಯಾಯಮಂಡಳಿ ಹಾಗೂ ಏಕಸದಸ್ಯ ಪೀಠದ ಆದೇಶಗಳನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಕೈಗಾರಿಕಾ ವಿವಾದಗಳ ಕಾಯ್ದೆಯ ಸೆಕ್ಷನ್ 2(ಎಸ್) ಅಡಿಯಲ್ಲಿ ಕಾರ್ಮಿಕ ಎಂಬ ಪದಕ್ಕೆ ವಿಶಾಲವಾದ ಅರ್ಥವಿದೆ. ಕೆಲಸವು ಖಾಯಂ, ದಿನಗೂಲಿ ಅಥವಾ ಗುತ್ತಿಗೆ ಆಧಾರಿತವೇ ಎಂಬುದು ಮುಖ್ಯವಲ್ಲ. ಸಂಸ್ಥೆಯ ನೇರ ಉಸ್ತುವಾರಿಯಲ್ಲಿ ಸಂಬಳ ಪಡೆದು ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರು ಮತ್ತು ಭದ್ರತಾ ಸಿಬ್ಬಂದಿಯನ್ನೂ ಒಟ್ಟು ಕಾರ್ಮಿಕರ ಸಂಖ್ಯೆಯಲ್ಲೇ ಪರಿಗಣಿಸಬೇಕು ಎಂದು ಪೀಠ ತಿಳಿಸಿತು.

ಕಾರ್ಮಿಕರ ಹಾಜರಾತಿ ಪುಸ್ತಕ, ಗುತ್ತಿಗೆ ಸಿಬ್ಬಂದಿಯ ವೇತನ ದಾಖಲೆಗಳನ್ನು ಹಾಜರುಪಡಿಸುವಂತೆ ನ್ಯಾಯಮಂಡಳಿಯು ಆದೇಶಿಸಿದ್ದರೂ ಆಡಳಿತ ಮಂಡಳಿ ಅದನ್ನು ಕೋರ್ಟ್‌ಗೆ ನೀಡಿರಲಿಲ್ಲ. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಪೀಠ, ಸಾಕ್ಷ್ಯ ಕಾಯ್ದೆಯ ಸೆಕ್ಷನ್ 114(ಜಿ) ಪ್ರಕಾರ ದಾಖಲೆಗಳನ್ನು ಹೊಂದಿದ್ದು ಅದನ್ನು ಬಚ್ಚಿಡುವ ಆಡಳಿತ ಮಂಡಳಿಯ ವಿರುದ್ಧ ನಕಾರಾತ್ಮಕ ತೀರ್ಮಾನವನ್ನೇ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿತು.

ಸಂಸ್ಥೆಯಲ್ಲಿದ್ದ 92 ಖಾಯಂ ಕಾರ್ಮಿಕರ ಜೊತೆಗೆ 17 ಭದ್ರತಾ ಸಿಬ್ಬಂದಿ ಹಾಗೂ 28 ಗುತ್ತಿಗೆ ಕಾರ್ಮಿಕರು ನೇರವಾಗಿ ಕೆಲಸ ಮಾಡುತ್ತಿದ್ದರು. ಈ ಮೂಲಕ ಒಟ್ಟು ಕಾರ್ಮಿಕರ ಸಂಖ್ಯೆ 100ರ ಗಡಿ ದಾಟಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಸರ್ಕಾರದ ಅನುಮತಿ ಇಲ್ಲದೇ ಮಾಡಲಾದ ತಾತ್ಕಾಲಿಕ ವಜಾ ಮತ್ತು ವಜಾ ಪ್ರಕ್ರಿಯೆ ಸಂಪೂರ್ಣ ಕಾನೂನುಬಾಹಿರ ಎಂದು ಪೀಠ ತಿಳಿಸಿದೆ.

ಅಲ್ಲದೆ, ಕಾರ್ಖಾನೆಯು ಮುಚ್ಚಿ ಸುಮಾರು 18 ವರ್ಷಗಳ ಸುದೀರ್ಘ ಅವಧಿ ಕಳೆದಿರುವುದರಿಂದ ಮತ್ತು ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ಕಾರ್ಮಿಕರ ಹಿತದೃಷ್ಟಿಯಿಂದ ಮುಂದಿನ 8 ವಾರಗಳಲ್ಲಿ ಪ್ರತಿಯೊಬ್ಬ ವಜಾಗೊಂಡ ಕಾರ್ಮಿಕನಿಗೂ ತಲಾ 3 ಲಕ್ಷ ರೂಪಾಯಿಗಳ ಒಟ್ಟು ಮೊತ್ತದ ಪರಿಹಾರ ನೀಡಬೇಕು ಎಂದು ಪೀಠ ಆದೇಶಿಸಿದೆ.

ಸಿದ್ದು ಅಣತಿಯಂತೆ ಡಿಕೆಶಿ ಕ್ಯಾಬಿನೆಟ್ ರಚನೆ

ಕೆ.ಆರ್.ಪೇಟೆ, ಜೂ.4– ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿದ್ದರೂ, ಮಾಜಿ ಸಿಎಂ ಸಿದ್ದರಾಮಯ್ಯ ಅಣತಿಯಂತೆ ಕ್ಯಾಬಿನೆಟ್ ರಚನೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಆಸೆಯನ್ನು ಪೂರೈಸಿಕೊಂಡಿದ್ದಾರೆ. ಆದರೆ ಸರ್ಕಾರದ ಮೇಲೆ ಸಿದ್ದರಾಮಯ್ಯ ಹಿಡಿತ ಸಾಧಿಸಲು ಮುಂದಾಗಿದ್ದು, ಅದಕ್ಕೆ ಅವರ ಸಾಕಷ್ಟು ಬೆಂಬಲಿಗರು ಈಗಾಗಲೇ ಕ್ಯಾಬಿನೆಟ್ ಸೇರಿರುವುದೇ ಸಾಕ್ಷಿ. ಈಗಾಗಲೇ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ವರದಿ ಸ್ವೀಕಾರ ಮಾಡಿದ್ದು, ಡಿಕೆಶಿ ಅದನ್ನು ಹೇಗೆ ಅನುಷ್ಠಾನ ಮಾಡುತ್ತಾರೆ ಅನ್ನುವುದೇ ಸವಾಲಿನ ಪ್ರಶ್ನೆ ಎಂದರು.

ಮುಂದಿನ 2 ವರ್ಷಗಳ ಕಾಲ ಡಿಕೆಶಿ ಎಲ್ಲರನ್ನು ಸಂಬಾಳಿಸಿಕೊಂಡು ಹೋಗುವುದೇ ದೊಡ್ಡ ಸವಾಲಾಗುತ್ತದೆ. ಕಳೆದ 3 ವರ್ಷಗಳ ಕಾಲ ರಾಜ್ಯ ಸರ್ಕಾರ ಗ್ಯಾರಂಟಿಯಿಂದ ಯಾವುದೇ ಅಭಿವೃದ್ಧಿ ಕೆಲಸ ಮಾಡೋಕೆ ಆಗಿಲ್ಲ. ಬರೀ ಅಲ್ಪಸಂಖ್ಯಾತ ಓಲೈಕೆ ಮಾಡಿಕೊಂಡು ಸರ್ಕಾರ ನಡೆಸಿದ ಸಿದ್ದರಾಮಯ್ಯ ಅವರ ಹಾದಿಯನ್ನೇ ಡಿಕೆಶಿ ಸಹ ಹಿಡಿಯಲಿದ್ದಾರೆ ಎಂದು ಟೀಕಿಸಿದರು.

ಡಿ.ಕೆ.ಶಿವಕುಮಾರ್ ಮುಂದೆ ದೊಡ್ಡ ಸವಾಲಿದ್ದು, ರಾಜ್ಯದ ಅಭಿವೃದ್ಧಿ ಮಾಡಬೇಕಾದ ಅನಿವಾರ್ಯತೆ ಇದೆ. ಜೊತೆಗೆ ಮಂತ್ರಿಮಂಡಲವನ್ನು ಸರಿದೂಗಿಸಿ ಕೊಂಡು ಹೋಗುವ ಸವಾಲು ಕೂಡ ಇದೆ. ಇದೆಲ್ಲಾವನ್ನು ಡಿಕೆಶಿ ಹೇಗೆ ಸರಿಪಡಿಸಿಕೊಂಡು ಹೋಗುತ್ತಾರೆ ಅನ್ನುವುದನ್ನು ನಾವು ನೋಡಬೇಕು. ನಾವು ವಿರೋಧ ಪಕ್ಷವಾಗಿ ಯಾರು ಎಷ್ಟೇ ಪ್ರಬಲರಾಗಿದ್ದರೂ, ಆಡಳಿತ ಪಕ್ಷದ ವೈಫಲ್ಯವನ್ನು ಜನರ ಮುಂದೆ ಬಿಚ್ಚಿಡುವ ಕೆಲಸ ಮಾಡುತ್ತೇವೆ ಎಂದರು.

ಸಿದ್ದರಾಮಯ್ಯ ಸರ್ಕಾರ ಇದ್ದಾಗ 40% ಕಮಿಷನ್ ಸರ್ಕಾರ ಇತ್ತು. ಇದೀಗ ಡಿಕೆಶಿ ಸರ್ಕಾರದಲ್ಲೂ ಸಹ ಕಮಿಷನ್ ದಂಧೆ ನಿಲ್ಲುವುದಿಲ್ಲ. ಅವರು ಏನು ಅಂತ ಕಳೆದ 3 ವರ್ಷದಲ್ಲಿ ಜನ ನೋಡಿದ್ದು, ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ ಎಂದರು.

ತಮ್ಮ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಟೀಕೆ ಬಗ್ಗೆ ಪ್ರತಿಕ್ರಿಯಿಸಿ, ಕೆಲವರಿಗೆ ನನ್ನ ಹೆಸರೇಳಿಕೊಂಡು ಪ್ರಚಾರ ಪಡೆಯುವ ಹುಚ್ಚು. ಅಂತಹವರ ಬಗ್ಗೆ ನಾನು ಮಾತನಾಡಲು ಹೋಗಲ್ಲ ಎಂದು ತಿರುಗೇಟು ನೀಡಿದರು.

ಈ ವೇಳೆ ಮಾಜಿ ಶಾಸಕ ಪ್ರೀತಮ್ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಅಶೋಕ್ ಜಯರಾಂ, ತಮ್ಮಯ್ಯ ಇನ್ನಿತರರಿದ್ದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು.

ಒಂದನೇ ಪುಟದಿಂದ

ಸಿಎಂ ವಾರ್ನ್...

ಅಕ್ರಮ ಚಟುವಟಿಕೆಗಳನ್ನು ಪೊಲೀಸ್ ಇಲಾಖೆ ಹತ್ತಿಕ್ಕಬೇಕು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ದುರ್ಬಳಕೆ ಆಗುತ್ತಿರುವುದು ಗಮನಕ್ಕೆ ಬಂದಿದ್ದು, ಇದು ತಕ್ಷಣವೇ ನಿಲ್ಲಬೇಕು, ಸಿಎಸ್‌ಆರ್ ಫಂಡ್ ದುರ್ಬಳಕೆ ಆಗಬಾರದು, ಆಡಳಿತದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು.

ಆತ್ಮಸಾಕ್ಷಿಯಂತೆ ಕಾರ್ಯ ನಿರ್ವಹಿಸಿ: ಪ್ರತಿಯೊಬ್ಬ ಅಧಿಕಾರಿ ತಮ್ಮ ಆತ್ಮಸಾಕ್ಷಿಗೆ ಒಪ್ಪುವಂತೆ ಪ್ರಾಮಾಣಿಕ ಕೆಲಸ ಮಾಡಬೇಕು, ಸಾರ್ವಜನಿಕರ ಸಂಕಷ್ಟಗಳಿಗೆ ತಕ್ಷಣ ಸ್ಪಂದಿಸಿ, ಸರ್ಕಾರದ ಯೋಜನೆಗಳನ್ನು ಸಮರ್ಥವಾಗಿ ಜನರಿಗೆ ತಲುಪಿಸಿ.

ಅಭಿವೃದ್ಧಿಯ ಹಾದಿಗೆ ಮೆಟ್ಟಿಲಾಗಿ ಜನ ಮೆಚ್ಚುವಂತೆ ಅಧಿಕಾರಿಗಳು ಕೆಲಸ ನಿರ್ವಹಿಸುವ ಮೂಲಕ ಸರ್ಕಾರಕ್ಕೂ ಒಳ್ಳೆಯ ಹೆಸರು ತರುವುದಲ್ಲದೆ, ನೀವೂ ಉತ್ತಮ ಹೆಸರು ಗಳಿಸಿ ಎಂದರು.

ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಯಾವುದೇ ರಾಜಕೀಯ ಅಥವಾ ಬಾಹ್ಯ ಒತ್ತಡಗಳಿಗೆ ಮಣಿಯದೆ ಮುಕ್ತವಾಗಿ ಕೆಲಸ ನಿರ್ವಹಿಸಲು ನಿಮ್ಮಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಲಾಗಿದೆ ಎಂದರು. ಹಣಕಾಸಿನ ಕೊರತೆ ನೆಪ ಮಾಡಿ ಗ್ಯಾರಂಟಿ ಹಾಗೂ ಅಭಿವೃದ್ಧಿ ಯೋಜನೆಗಳು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪದಿದ್ದರೆ, ಜವಾಬ್ದಾರಿ ಹೊತ್ತ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸಲಾಗುವುದು.

24 ಗಂಟೆ ಅಧಿಕಾರಿಗಳು ಲಭ್ಯವಿರಬೇಕು: ದಿನದ 24 ಗಂಟೆ ಜನರ ಸೇವೆಗೆ ಅಧಿಕಾರಿಗಳು ಲಭ್ಯ ಇರಬೇಕು, ಕಾನೂನು ಹಾಗೂ ನಿಯಮಾವಳಿಗಳ ನೆಪ ಹೇಳಿ ಅನಗತ್ಯ ವಿಳಂಬ ಧೋರಣೆ ಅನುಸರಿಸಿದರೆ ಸಹಿಸುವುದಿಲ್ಲ. ಹೆಚ್ಚು ಜನ ಸಂಪರ್ಕ ಹೊಂದಿರುವ ಕಂದಾಯ, ಗ್ರಾಮೀಣಾಭಿವೃದ್ಧಿ, ಸಾರಿಗೆ, ಆರೋಗ್ಯ, ಶಿಕ್ಷಣ ಮತ್ತು ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾಲಮಿತಿ ಹಾಗೂ ಕಡತಗಳಿಗೆ ಜೋತು ಬೀಳದೇ ಜನಪರ ಆಡಳಿತ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಬೇಕು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ದುರುಪಯೋಗ ಕಂಡು ಬಂದಿದೆ. ಸುಮಾರು 100 ಕೋಟಿ ರೂ.ಗಳಿಗೂ ಹೆಚ್ಚಿನ ಹಣ ಅನರ್ಹರ ಪಾಲಾಗಿದೆ. ಅಧಿಕಾರಿಗಳು ಜವಾಬ್ದಾರಿಯುತವಾಗಿ ವರ್ತಿಸಬೇಕು.

ಸರ್ಕಾರದ ಯೋಜನೆಗಳಿಗೆ ಹಣಕಾಸಿನ ಕೊರತೆ ಇಲ್ಲ. ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡದೆ ಹಣಕಾಸಿನ ಸಮಸ್ಯೆ ಇದೆ ಎಬುದಾಗಿ ಬಿಂಬಿಸಿದರೆ, ಕಠಿಣ ಕ್ರಮ ಕೈಗೊಳ್ಳಲಾಗುವುದು. ಉದ್ಯಮ, ಕೃಷಿ, ಶಿಕ್ಷಣ, ವ್ಯಾಪಾರ ಕ್ಷೇತ್ರಗಳಲ್ಲಿ ಅನುಕೂಲಕರ ವಾತಾವರಣ ಸೃಷ್ಟಿಸಬೇಕು, ಉದ್ಯೋಗ ಸೃಷ್ಟಿಯತ್ತ ಹೆಚ್ಚಿನ ಆಸಕ್ತಿ ವಹಿಸಬೇಕು.

ಆಡಳಿತದಲ್ಲಿ ಜಢತ್ವ ಸಹಿಸಲ್ಲ: ಇದುವರೆಗಿನದು ಒಂದು ಲೆಕ್ಕ. ಇನ್ನು ಮುಂದೆ ಬೇರೆಯದೇ ಲೆಕ್ಕ, ಆಡಳಿತದಲ್ಲಿ ಜಢತ್ವ ಯಾವ ಕಾರಣಕ್ಕೂ ಸಹಿಸುವುದಿಲ್ಲ, ಹಾಗೆಯೇ ಭ್ರಷ್ಟಾಚಾರಕ್ಕೂ ಆಸ್ಪದ ನೀಡುವುದಿಲ್ಲ ಎಂದರು. ಮಳೆಗಾಲ ಆರಂಭವಾಗುತ್ತಿದ್ದು, ಕೃಷಿ ಚಟುವಟಿಕೆಗಳಿಗೆ ಅಗತ್ಯ ರಸಗೊಬ್ಬರ, ಬಿತ್ತನೆ ಬೀಜ ಕೊರತೆ ಆಗದಂತೆ ಎಚ್ಚರಿಕೆ ವಹಿಸಬೇಕು. ರಾಜ್ಯದಲ್ಲಿ ಚುನಾವಣಾ ಆಯೋಗ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ, ಈ ಬಗ್ಗೆ ಅಧಿಕಾರಿಗಳು ವಿಶೇಷ ಗಮನಹರಿಸಬೇಕು, ಯಾವುದೇ ಪ್ರಜೆ ತನ್ನ ಅಮೂಲ್ಯ ಮತದಾನದ ಹಕ್ಕು ಕಳೆದುಕೊಳ್ಳಬಾರದು, ಪ್ರಕ್ರಿಯೆ ವೇಳೆ ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯದೆ ಅತ್ಯಂತ ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದರು. ಎಸ್‌ಐಆರ್ ಬಗ್ಗೆ ಎಲ್ಲಾ ಮತದಾರರಲ್ಲಿ ವ್ಯಾಪಕ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು, ಸಾರ್ವಜನಿಕರಿಗೆ ನೆರವಾಗಲು ಅಗತ್ಯ ಕಡೆಗಳಲ್ಲಿ ತತ್‌ಕ್ಷಣ 'ಹೆಲ್ಪ್ ಡೆಸ್ಕ್' ಸ್ಥಾಪಿಸಬೇಕು. ಎಸ್‌ಐಆರ್ ನಡೆದ ಕೆಲವು ರಾಜ್ಯಗಳಲ್ಲಿ ಲಕ್ಷಾಂತರ ಜನ ಮತದಾನದ ಹಕ್ಕು ಕಳೆದುಕೊಂಡಿದ್ದಾರೆ, ಕೇರಳಂ ರಾಜ್ಯದಲ್ಲಿ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿದ್ದು, ನಮ್ಮ ರಾಜ್ಯದಲ್ಲೂ ಯಾರೊಬ್ಬರ ಹೆಸರು ಕೈಬಿಡಲ್ಲ ಎಂದರು.

ಸಾರ್ವಜನಿಕ ಕುಂದು–ಕೊರತೆ ವಿಭಾಗ: ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಾರ್ವಜನಿಕರ ಕುಂದುಕೊರತೆ ಪರಿಶೀಲಿಸಲು ಪ್ರತ್ಯೇಕ ವಿಭಾಗ ಆರಂಭಿಸಲಾಗುವುದು, ಉನ್ನತ ಅಧಿಕಾರಿಯೊಬ್ಬರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಗುವುದು ಮತ್ತು ಸಚಿವರಿಗೆ ಜವಾಬ್ದಾರಿಯನ್ನೂ ನೀಡಲಾಗುವುದು ಎಂದರು.

ಪ್ರತ್ಯೇಕ ಸಚಿವಾಲಯವನ್ನು ರಚಿಸಲು ಯಾವೆಲ್ಲಾ ಅಕ್ರಮಗಳನ್ನು ಕೈಗೊಳ್ಳಬೇಕು ಎಂಬ ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ, ವರದಿ ನೀಡಿದ ತಕ್ಷಣ ಪ್ರತ್ಯೇಕ ವಿಭಾಗ ಆರಂಭಿಸುತ್ತೇನೆ. ವಿವಿಧ ಅಭಿವೃದ್ಧಿ ಯೋಜನೆ ಮತ್ತು ಇಲಾಖಾ ಪ್ರಗತಿ ಬಗ್ಗೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು 15 ದಿನಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ.

ಉದ್ಯೋಗ ವಿನಿಮಯ ಕೇಂದ್ರ: ಖಾಸಗಿ ಉದ್ಯೋಗದಾತರು ಮತ್ತು ಇತರರಿಗೆ ಅನುಕೂಲವಾಗುವಂತೆ ಉದ್ಯೋಗ ವಿನಿಮಯ ಕೇಂದ್ರ ರಚಿಸಲಾಗುವುದು. ಚುನಾವಣೆ ದೃಷ್ಟಿಯಿಂದ ನೋಡುತ್ತಿಲ್ಲ, ಜನರ ಜೀವನ ಗುಣಮಟ್ಟ ಮುಖ್ಯ, ಗ್ಯಾರಂಟಿಗಳ ಮೂಲಕ ಕನಿಷ್ಠ ಸುರಕ್ಷಿತ ಜೀವನ ನೀಡಲು ಬಯಸುತ್ತೇವೆ ಎಂದರು.

ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿ

ರಾಜ್ಯವಾಗಿದ್ದು ಎಲ್ಲರ ಚಿತ್ತ ಆಡಳಿತದ ಮೇಲೆ ಇರುತ್ತದೆ, ಭರವಸೆಗಳನ್ನು ಯಾವ ರೀತಿ ಸಾಕಾರಗೊಳಿಸಬೇಕು ಎಂಬುದೇ ಸಭೆಯ ಮೂಲ ಉದ್ದೇಶವಾಗಿದೆ. ಹಲವು ಕ್ಷೇತ್ರಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ, ಎಲ್ಲ ಮಾನದಂಡಗಳಲ್ಲೂ ನಮ್ಮ ರಾಜ್ಯ ಅಗ್ರಸ್ಥಾನದಲ್ಲಿ ಇರಬೇಕು. ತಹಶೀಲ್ದಾರರ ಕಚೇರಿಯ ಕಾರ್ಯದಿಂದ ಸಾಮಾನ್ಯ ರೈತನೂ ಸಂತೋಷಗೊಳ್ಳಬೇಕಿದೆ. ಪೊಲೀಸ್ ಠಾಣೆಗೆ ಬಂದು ದೂರು ಕೊಡುವ ವ್ಯಕ್ತಿ, ತನಗೆ ನ್ಯಾಯ ಸಿಗುತ್ತದೆ ಎಂಬ ನಂಬಿಕೆ ಹುಟ್ಟುವಂತೆ ಕಾರ್ಯ ನಿರ್ವಹಿಸಬೇಕು.

ಆದರೆ, ಇದು ಅಗುತ್ತಿಲ್ಲ, ಈ ಕಡೆ ಪೊಲೀಸ್ ಅಧಿಕಾರಿಗಳು ಹೆಚ್ಚು ಗಮನ ಹರಿಸಬೇಕು, ಕಡತ ವಿಲೇವಾರಿಯಾದರೆ ನಮ್ಮ ಕೆಲಸ ಮುಗಿಯಿತು ಎಂಬ ಅಧಿಕಾರಿಗಳ ಮನಸ್ಥಿತಿ ಬದಲಾಗಬೇಕು. ನಾನು ಎಂಟು ವರ್ಷ ಪೊಲೀಸ್ ಇಲಾಖೆ ಜವಾಬ್ದಾರಿ ನಿಭಾಯಿಸಿದ್ದೇನೆ, ಇಲಾಖೆ ಕಾರ್ಯ ಸರ್ಕಾರದ ಮುಖವಾಣಿಯಂತೆ, ಉತ್ತಮ ಕೆಲಸ ನಿರ್ವಹಿಸಬೇಕು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವುದೇ ಕೋಮು ಸಂಘರ್ಷ, ಗಲಭೆಗಳು ನಡೆಯದಂತೆ ಕರ್ತವ್ಯ ನಿರ್ವಹಿಸಿದ್ದೀರಾ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷ ಕಾರ್ಯಪಡೆ ಸ್ಥಾಪನೆ ನಂತರ ಕಾನೂನು ಸುವ್ಯವಸ್ಥೆ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ, ಆದರೂ, ಪೊಲೀಸ್ ಇಲಾಖೆ ಇನ್ನಷ್ಟು ಮುನ್ನೆಚ್ಚರಿಕೆ ವಹಿಸಿ ಕೆಲಸ ಮಾಡಬೇಕಿದೆ. ಮಾದಕ ವಸ್ತುಗಳ ವಿರುದ್ಧ ಕಳೆದ ಮೂರು ವರ್ಷಗಳಿಂದ ಸಮರ ಸಾರಲಾಗಿದೆ, ಕೋಟ್ಯಾಂತರ ರೂ. ಮೌಲ್ಯದ ಡ್ರಗ್ಸ್ ಪತ್ತೆ ಹಚ್ಚಲಾಗಿದೆ, ಯುವಜನರ ಭವಿಷ್ಯ ಹಾಳು ಮಾಡುತ್ತಿರುವ ಈ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಬೇಕು, ಡ್ರಗ್ಸ್ ಚಟುವಟಿಕೆ ಮೇಲೆ ಹೆಚ್ಚಿನ ನಿಗಾವಹಿಸಬೇಕು ಎಂದರು.

ಶೇ.50 ರಿಯಾಯಿತಿ

2026ರ ಮೇ ಮೊದಲು ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ಗಳಲ್ಲಿ ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತು ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ 50 ರಿಯಾಯಿತಿ ನೀಡಿ ಆದೇಶಿಸಲಾಗಿದೆ. ಅಸ್ತ್ರಂ ಆ್ಯಪ್, ಕೆಎಸ್‌ಪಿಎಸ್ ಆ್ಯಪ್, ಕರ್ನಾಟಕ ಒನ್ ಕೇಂದ್ರಗಳೂ ಸೇರಿದಂತೆ ಸಂಬಂಧಪಟ್ಟ ವೇದಿಕೆಗಳಲ್ಲಿ ದಂಡವನ್ನು ಮಾಲೀಕರು ಪಾವತಿ ಮಾಡಬಹುದು ಎಂದು ಮೂಲಗಳು ತಿಳಿಸಿವೆ. ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವ ಒಪ್ಪಿದ್ದ ರಾಜ್ಯ ಸರ್ಕಾರವು, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಳೆದ ವರ್ಷದ ನವೆಂಬರ್‌ನಲ್ಲೂ ದಂಡ ಪಾವತಿಸಲು ಅವಕಾಶ ಕಲ್ಪಿಸಿತ್ತು.

ಭಾರೀ ಮಳೆ ಮುನ್ಸೂಚನೆ

ಯೆಲ್ಲೋ ಅಲರ್ಟ್ ಘೋಷಿಸಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಗದಗ, ಹಾವೇರಿ, ಧಾರವಾಡ, ಬೆಳಗಾವಿ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಗುಡುಗು, ಮಿಂಚು, ಬಿರುಗಾಳಿ ಹಾಗೂ ಭಾರೀ ಮಳೆಯ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಇಲಾಖೆ ಎಚ್ಚರಿಕೆ ನೀಡಿದೆ.

ನೈರುತ್ಯ ಮುಂಗಾರು ಅರಬ್ಬಿ ಸಮುದ್ರದ ನೈರುತ್ಯ ಮತ್ತು ಆಗ್ನೇಯ ಭಾಗಗಳು, ಲಕ್ಷದ್ವೀಪ, ಕೇರಳ ಮತ್ತು ತಮಿಳುನಾಡಿನ ಕೆಲವು ಪ್ರದೇಶಗಳು ಹಾಗೂ ಬಂಗಾಳ ಕೊಲ್ಲಿಯ ಹಲವು ಭಾಗಗಳತ್ತ ಮುಂದುವರಿಯಲು ಅನುಕೂಲಕರ ವಾತಾವರಣ ನಿರ್ಮಾಣವಾಗಿದೆ ಹವಾಮಾನ ತಜ್ಞರು ಮಾಹಿತಿ ನೀಡಿದ್ದಾರೆ. ಹವಾಮಾನ ಇಲಾಖೆ ಈ ಹಿಂದೆ ಮೇ 26 ಅಥವಾ 27ರ ವೇಳೆಗೆ ಮುಂಗಾರು ಕೇರಳ ಪ್ರವೇಶಿಸಬಹುದು ಎಂದು ಅಂದಾಜಿಸಿತ್ತು. ಹವಾಮಾನದ ಕಾರಣಗಳಿಂದಾಗಿ ತಡವಾಗಿದೆ.

ಫ್ರೀ ಬಸ್ ಪಾಸ್

ಸರ್ಕಾರದ ಆದೇಶದಲ್ಲಿ ಏನಿದೆ: ರಾಜ್ಯದ 4 ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಸಾರಿಗೆ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ರಾಜ್ಯದ ಎಲ್ಲಾ ಶಾಲಾ – ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸಲು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಈ ಯೋಜನೆಯ ಅನುಷ್ಠಾನದ ಬಗ್ಗೆ ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನ ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಪುಷ್ಪ ವಿ.ಎಸ್ ಆದೇಶದಲ್ಲಿ ತಿಳಿಸಿದ್ದಾರೆ.

ಜಲ ಸಂಪನ್ಮೂಲ

ಬೈರತಿ ಸುರೇಶ್‌ಗೆ ಸಾರಿಗೆ ಖಾತೆ ನೀಡಲಾಗಿದೆ

ರಾಮಲಿಂಗಾರೆಡ್ಡಿ ಮುನಿಸು: ಕಂದಾಯ ಖಾತೆಯಲ್ಲೇ ಮುಂದುವರಿಯಲು ಬಯಸಿದ್ದ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ನಗರಾಭಿವೃದ್ಧಿ (ಜಿಬಿಎ) ಖಾತೆಯನ್ನು ನೀಡಲಾಗಿದೆ. ಈ ಖಾತೆಯನ್ನು ನಿರೀಕ್ಷಿಸಿದ್ದ ರಾಮಲಿಂಗಾರೆಡ್ಡಿ ಅವರು ಅಸಮಾಧಾನಗೊಂಡಿದ್ದರು. ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಮನವೊಲಿಸಿದ್ದು, ಮಹತ್ವದ ಜಲಸಂಪನ್ಮೂಲ ಖಾತೆ ನೀಡಲಾಗಿದೆ.

ಪ್ರಿಯಾಂಕ್ ಇನ್ನು ಹೋಂ ಮಿನಿಸ್ಟರ್: ಪ್ರಿಯಾಂಕ್ ಖರ್ಗೆ ಅವರಿಗೆ ಮಹತ್ವದ ಗೃಹ ಖಾತೆಯನ್ನು ನೀಡಲಾಗಿದೆ. ಈ ಖಾತೆ ಜತೆಗೆ ಹೆಚ್ಚುವರಿಯಾಗಿ ಐಟಿ, ಬಿಟಿ ಇಲಾಖೆಗಳನ್ನೂ ನೀಡಲಾಗಿದೆ.

ಮಧ್ಯವರ್ತಿಗಳ ಮಧ್ಯರಾತ್ರಿ ಅಭಿವೃದ್ಧಿ ಕಾರ್ಯ!



ಸರಿರಾತ್ರಿಯಲ್ಲಿ ಎಂಡಿಎ ಮುಂದೆ ನಿಂತಿದ್ದ ಅಧಿಕಾರಿಗಳ ಪದನಾಮದ ಕಾರುಗಳು. ಆದರೆ ಪದನಾಮ ಫಲಕವನ್ನು ಬಿಚ್ಚಿ ಕಾರೊಳಗೆ ಇಡಲಾಗಿತ್ತು.

ಕ್ಯಾಮರಾ ಕಂಡು ಕೆಲವು ಸಿಬ್ಬಂದಿ ಹಾಗೂ ಮಧ್ಯವರ್ತಿಗಳು ಪರಾರಿಯಾದರು. ಮತ್ತೆ ಕೆಲವರು ಅಲ್ಲೇ ಅಡಗಿಕೊಂಡರು. ಒಳ ಹೊಕ್ಕಾಗ ವಿವಿಧ ವಿಭಾಗಗಳಲ್ಲಿ ನಾಲ್ಕೈದು ಮಂದಿ ಫೈಲ್ ಹಿಡಿದು ಓಡಾ ಡುವುದು, ಏನೋ ಗಂಭೀರವಾಗಿ ಬರೆಯುತ್ತಿರುವುದು ಕಣ್ಣಿಗೆ ಬಿತ್ತು. ಇದು ಅಲ್ಲಿ ಏನೋ ನಡೆಯುತ್ತಿದೆ ಎಂಬುದನ್ನು ಸಾರಿ ಸಾರಿ ಹೇಳುವಂತಿತ್ತು.

ನಿಜ, ಗುರುವಾರ ಸರಿರಾತ್ರಿವರೆಗೂ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಪ್ರಧಾನ ಕಚೇರಿಯ ಎಲ್ಲಾ ವಿಭಾಗಗಳೂ ತೆರೆದಿದ್ದವು. ಎಲ್ಲಾ ವಿಭಾಗದ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಆಯಾ ವಿಭಾಗದ ಅಧಿಕಾರಿಗಳು, ಸಿಬ್ಬಂದಿ ಸಮರೋಪಾದಿಯಲ್ಲಿ ಕಾರ್ಯ ನಿರತರಾಗಿದ್ದರು. ಪ್ರತಿಯೊಬ್ಬರ ಕೈಯ್ಯಲ್ಲೂ ಒಂದಲ್ಲಾ ಒಂದು ಫೈಲ್ ಕಂಡುಬರುತ್ತಿತ್ತು. ಅವುಗಳನ್ನು ಪೂರ್ಣಪ್ರಮಾಣದಲ್ಲಿ ರೆಡಿ ಮಾಡಲು ಅತ್ತಿಂದಿತ್ತ ಓಡಾಡುತ್ತಾ ಸಲಹೆ ಪಡೆಯಲಾಗುತ್ತಿತ್ತು. ಜೊತೆಗೆ ಸಹಿಯನ್ನೂ ಪಡೆಯಲಾಗುತ್ತಿತ್ತು. ಇಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹಿಂದೆ ಮಧ್ಯವರ್ತಿಗಳು ಓಡಾಡುತ್ತಿದ್ದರು.

ಇನ್ನೂ ತಮಗೆ ಬೇಕಾಗಿದ್ದಂತಹ ಕೆಲವು ಫೈಲ್‌ಗಳ ಹುಡುಕಾಟ ಜೋರಾ ಗಿತ್ತು. ಅಟೆಂಡರ್‌ಗಳು ಇಲ್ಲದೇ ಇದ್ದರೂ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯೇ ಕಡತಗಳ ಹುಡುಕಾಟ, ದಾಖಲೆಗಳ ಸರಿ ಮಾಡುವುದು, ಸಂಬಂಧಪಟ್ಟಂತಹ ವಿಭಾಗದ ಮುಖ್ಯಸ್ಥರ ಅನುಮೋದನೆ ಪಡೆಯುವುದು, ಸಹಿ–ಸೀಲ್ ಹಾಕಿಸಿಕೊಳ್ಳುವುದು, ಕಂಪ್ಯೂಟರ್‌ಗಳಲ್ಲಿ ಅದರ ವಿವರಗಳ ತಲಾಶೆ, ಹೀಗೆ ಸರಿರಾತ್ರಿಯೇ ತರಾತುರಿಯ ದಾಖಲೆಗಳ ಸಿದ್ಧಪಡಿಸುವ ಕಾರ್ಯ ನಡೆಯುತ್ತಿತ್ತು.

ಅಚ್ಚರಿಯ ಸಂಗತಿಯೆಂದರೆ ನಿನ್ನೆ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಮಂತ್ರಿಮಂಡಲದ ಸದಸ್ಯರಿಗೆ ಇಂದು ರಾತ್ರಿಯಷ್ಟೇ ಖಾತೆಗಳನ್ನು ಹಂಚಿಕೆ ಮಾಡಲಾಯಿತು. ಅದರಲ್ಲಿ ಎಂಡಿಎ ಒಳಗೊಂಡ ನಗರಾಭಿವೃದ್ಧಿ ಖಾತೆಯನ್ನು ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರಿಗೆ ಕಲ್ಪಿಸಲಾಗಿದೆ.

ಹಗರಣ ನಡೆದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಆಪ್ತ ಬೈರತಿ ಸುರೇಶ್ ನಗರಾಭಿವೃದ್ಧಿ ಸಚಿವರಾಗಿದ್ದರು. ನೂತನ ಮಂತ್ರಿಮಂಡಲ ರಚನೆ ಹಾಗೂ ಖಾತೆ ಹಂಚಿಕೆ ಸಮಯದಲ್ಲೇ ಮುಡಾದಲ್ಲಿ ಈ ರೀತಿ ಸರಿರಾತ್ರಿವರೆಗೆ ದಾಖಲೆಗಳ ಪರಿಶೀಲನೆ ಮತ್ತು ಸಿದ್ಧಪಡಿಸುವ ಕಾರ್ಯ ನಡೆಯುತ್ತಿರುವುದು ಭಾರೀ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಿದೆ.

ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್, ನಗರ ಯೋಜನೆ ವಿಭಾಗದ ಅಧಿಕಾರಿಯ ಕಚೇರಿ ಕೊಠಡಿಗಳು ತೆರೆದಿದ್ದು, ಆದರೆ ಈ ಇಬ್ಬರು ಅಧಿಕಾರಿಗಳು ತಮ್ಮ ಕುರ್ಚಿಯಲ್ಲಿ ಇರಲಿಲ್ಲ. ಬಹುಶಃ ಆ್ಯಂಟಿ ಚೇಂಬರ್ ಗಳಲ್ಲಿ ಇರಬಹುದು. ಹಾಗೆಯೇ ಎಂಡಿಎ ಕಾರ್ಯದರ್ಶಿಯೂ ಕೂಡ ಅಲ್ಲೆಲ್ಲೂ ಕಾಣಲಿಲ್ಲ. ಆದರೆ, ಹೆಸರೇಳಲಿಚ್ಚಿಸದ ಸಿಬ್ಬಂದಿಯೊಬ್ಬರು ಅವರೆಲ್ಲಾ ಆಯುಕ್ತರ ವಸತಿಗೃಹದಲ್ಲಿ ಇರಬಹುದು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರಲ್ಲದೆ, ಈ ಸರಿರಾತ್ರಿಯಲ್ಲಿ ಏನು ನಡೆಯುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿ, ಅಲ್ಲಿಂದ ಕಾಲ್ಕಿತ್ತರು.

ಸಾವಿರಾರು ನಿವೇಶನಗಳ ಹಂಚಿಕೆ ಹಗರಣ ಬಯಲಾದ ನಂತರವಂತೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮಾತ್ರವಲ್ಲ ಹಾಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಚಾರದಲ್ಲಿ ಜನ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ.

ಅಲ್ಲಿನ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳ ಮಸಲತ್ತಿನಿಂದ ಮುಡಾದ ಸಾವಿರಾರು ನಿವೇಶನಗಳು ಬದಲಿ ನಿವೇಶನದ ಹೆಸರಿನಲ್ಲಿ ಕಂಡಕಂಡವರಿಗೆ ಮಂಜೂರಾಗಿವೆ. ಈ ಹಗರಣದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಜೊತೆಗೆ ಮಧ್ಯವರ್ತಿಗಳು ಭಾರೀ ಲಾಭ ಮಾಡಿಕೊಂಡಿದ್ದಾರೆ ಎಂಬುದು ಇಡಿ, ಸಿಐಡಿ, ಲೋಕಾಯುಕ್ತ, ನ್ಯಾ.ದೇಸಾಯಿ ಆಯೋಗದ ತನಿಖೆಯಿಂದ ಬಟಾಬಯಲಾಗಿದೆ. ಇಡಿ ನೂರಾರು ಕೋಟಿ ಮೌಲ್ಯದ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಆದರೆ, ಅವುಗಳ ಸ್ಥಿತಿ–ಗತಿ ಏನೆಂಬುದು ಯಾರಿಗೂ ಗೊತ್ತಿಲ್ಲ.

ಇಷ್ಟೆಲ್ಲಾ ಹಗರಣ, ಅವ್ಯವಹಾರ, ಭ್ರಷ್ಟಾಚಾರದ ಬಳಿಕ ಮಧ್ಯಪ್ರವೇಶಿಸಿದ ರಾಜ್ಯ ಸರ್ಕಾರ ಮುಡಾ ರದ್ದುಪಡಿಸಿ, ಎಂಡಿಎ ರಚಿಸಿ ಕೈತೊಳೆದುಕೊಂಡಿದೆ. ಆದರೆ, ಭ್ರಷ್ಟಾಚಾರ ಮಾತ್ರ ಸ್ವಲ್ಪವೂ ಕಡಿಮೆಯಾಗಿಲ್ಲ ಎಂದು ಈಗಾಗಲೇ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪದೇ ಪದೆ ಹೇಳುತ್ತಲೇ ಇದ್ದಾರೆ.

ಡಾ. ಯತೀಂದ್ರ ನಗರಾಭಿವೃದ್ಧಿ ಸಚಿವ!

ಕುಟುಂಬ ಮುಡಾಗೆ ವಾಪಸ್ ನೀಡಿತ್ತು. ಇದಲ್ಲದೆ ಮುಡಾದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾವಿರಾರು ಕೋಟಿ ಮೌಲ್ಯದ ನಿವೇಶನ ಹಗರಣ ಬಯಲಾಗಿತ್ತು. ಆ ಸಂಬಂಧ ಇಡಿ, ಸಿಐಡಿ, ಲೋಕಾಯುಕ್ತ, ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಆಯೋಗ ನಾನಾ ಹಂತದ ತನಿಖೆ, ವಿಚಾರಣೆಗಳೂ ಕೂಡ ನಡೆದವು. ಆದರೆ, ಅದು ಯಾವುದೂ ಕೂಡ ತಾರ್ಕಿಕ ಅಂತ್ಯ ಕಂಡಿಲ್ಲ. ಒಂದಂತೂ ನಿಜ ಹಗರಣಗಳ ಗೂಡಾಗಿದ್ದ ಮುಡಾ ಕಳೆದು ಹೋಗಿ ಈಗ ಎಂಡಿಎ ಆಗಿ ಅಸ್ತಿತ್ವದಲ್ಲಿದೆ. ಇಷ್ಟೆಲ್ಲಾ ವಿವಾದ, ಭ್ರಷ್ಟಾಚಾರದ ನಡುವೆಯೂ ಈಗ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಡಾ. ಯತೀಂದ್ರ ನಗರಾಭಿವೃದ್ಧಿ ಖಾತೆ ಹೊಣೆ ಹೊತ್ತಿದ್ದಾರೆ. ಇದು ಅಚ್ಚರಿ ಮಾತ್ರವಲ್ಲದೆ ಹತ್ತು–ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ. ಮತ ನೀಡಿದ ನಾವು 'ಮುಡಾ' ಅಕ್ರಮದ ಬಗ್ಗೆ ಪ್ರಶ್ನಿಸಿದರೆ 'ಮೂಢ'ರಾಗುತ್ತೇವೆ ಅಲ್ವಾ..!?

ಇಂದು ಮರಗಳ ಸುತ್ತಲಿನ ಕಾಂಕ್ರೀಟ್ ತೆರವು

ಮೈಸೂರು, ಜೂ.4– 'ವಿಶ್ವ ಪರಿಸರ ದಿನ'ದ ಅಂಗವಾಗಿ ಪರಿಸರಕ್ಕಾಗಿ ನಾವು ಸಂಘಟನೆ ವತಿಯಿಂದ ಶುಕ್ರವಾರ(ಜೂ.5) ಬೆಳಗ್ಗೆ 8 ಗಂಟೆಗೆ ನಗರದ ಜೆಸಿಇ ಕಾಲೇಜು ಮುಂಭಾಗದ ರಸ್ತೆಯಲ್ಲಿರುವ ಮರಗಳ ಸುತ್ತಲೂ ಕಾಂಕ್ರೀಟ್, ಟೈಲ್ಸ್ ತೆರವುಗೊಳಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಅಗ್ನಿವೀರ್ ಸೇನಾ ಉದ್ಯೋಗಾಕಾಂಕ್ಷಿಗಳು ಅತಂತ್ರ

●ಯಾವುದೇ ಮೂಲ ಸೌಲಭ್ಯಗಳಿಲ್ಲದೆ ರಸ್ತೆ ಬದಿ, ರೋಡ್ ಡಿವೈಡರ್, ಕಸದ ತೊಟ್ಟಿ, ಹೋಟೆಲ್‌ಗಳ ಮುಂದೆ ಮಲಗಬೇಕಾದ ದುಸ್ಥಿತಿ ●ಶೌಚಾಲಯಗಳಿಲ್ಲ, ಸ್ನಾನದ ವ್ಯವಸ್ಥೆಯಂತೂ ಇಲ್ಲ! ●ಸೇನಾಧಿಕಾರಿಗಳಂತೆ ಸಿಬ್ಬಂದಿ ವರ್ತನೆ

ಮೈಸೂರು, ಜೂ.4(ಜಿಎ)–ಅಗ್ನಿವೀರ್‌ರಾಗಿ ದೇಶ ಕಾಯುವ ಉದ್ದೇಶದಿಂದ ಪರೀಕ್ಷೆ ಎದುರಿಸಲು ಬಂದಿರುವ ಅಭ್ಯರ್ಥಿಗಳು ಮೂಲ ಸೌಕರ್ಯಗಳೇ ಇಲ್ಲದೇ ಅತಂತ್ರರಾಗಿದ್ದಾರೆ.

ಮೈಸೂರಿನ ಹೆಬ್ಬಾಳದಲ್ಲಿ ನಡೆಯುತ್ತಿರುವ ಅಗ್ನಿವೀರ್ ಸೇನಾ ನೇಮಕಾತಿಯ ಆನ್‌ಲೈನ್ ಪರೀಕ್ಷೆಗೆ ಹಾಜರಾಗಿರುವ ನೂರಾರು ಅಭ್ಯರ್ಥಿಗಳು ಅತಂತ್ರರಾಗಿದ್ದಾರೆ. ವಸತಿ ಸೌಲಭ್ಯಗಳು ಸೇರಿದಂತೆ ಯಾವುದೇ ಮೂಲ ಸೌಲಭ್ಯಗಳ ಕಲ್ಪಿಸದ ಕಾರಣ ರಾತ್ರಿ ವೇಳೆ ರಸ್ತೆ ಬದಿಗಳನ್ನೇ ಆಶ್ರಯಿಸಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಟಿಸಿಎಸ್ ಇಯಾನ್ ಡಿಜಿಟಲ್ ಜೋನ್‌ನಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು, ಪರೀಕ್ಷೆ ಬರೆಯಲು ಈ ಕೇಂದ್ರಕ್ಕೆ ಆಗಮಿಸಿರುವ ಅಭ್ಯರ್ಥಿಗಳು ಸೂಕ್ತ ಮೂಲ ಸೌಕರ್ಯಗಳಿಲ್ಲದೇ ರಸ್ತೆ ಬದಿ, ರಿಂಗ್ ರಸ್ತೆಯ ವಿಭಜಕ, ರಸ್ತೆಯಲ್ಲಿರುವ ದೊಡ್ಡ ದೊಡ್ಡ ಹೋಟೆಲ್‌ಗಳ ಮುಂಭಾಗ ಮತ್ತು ಕಸದ ತೊಟ್ಟಿಗಳ ಬಳಿ ಮಲಗಿ ರಾತ್ರಿ, ಬಿಸಿಲು ಮತ್ತು ಮಳೆ ಎನ್ನದೆ ಕಾಲ ಕಳೆಯಬೇಕಾಗಿದೆ.

ಈ ಕೇಂದ್ರದಲ್ಲಿ ಜೂ.1ರಿಂದ ಆರಂಭಗೊಂಡಿರುವ ಅಗ್ನಿವೀರ್ ನೇಮಕಾತಿ ಪ್ರಕ್ರಿಯೆ ಜೂ.12ರವರೆಗೆ ನಡೆಯಲಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸುಮಾರು 800ಕ್ಕೂ ಹೆಚ್ಚು ಅಭ್ಯರ್ಥಿಗಳು ಇದರಲ್ಲಿ ಭಾಗವಹಿಸುತ್ತಿದ್ದಾರೆ. ಧಾರವಾಡ, ಬಾಗಲಕೋಟೆ, ವಿಜಯಪುರ, ಬೆಳಗಾವಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಅಭ್ಯರ್ಥಿಗಳು ಪರೀಕ್ಷೆಗೆ ಆಗಮಿಸಿದ್ದಾರೆ.




ಅಗ್ನಿವೀರ್ ಪರೀಕ್ಷೆ ಬರೆಯಲು ಮೈಸೂರಿಗೆ ಬಂದಿರುವ ಅಭ್ಯರ್ಥಿಗಳು ರಾತ್ರಿ ಹೋಟೆಲ್ ಮುಂಭಾಗ ಮತ್ತು ಬೆಳಿಗ್ಗೆ ರಿಂಗ್ ರಸ್ತೆಯ ಡಿವೈಡರ್ ಮೇಲೆ ಆಶ್ರಯ ಪಡೆದುಕೊಂಡಿರುವುದನ್ನು ಕಾಣಬಹುದು.

ಹೆಬ್ಬಾಳು ಸುತ್ತಮುತ್ತ ಆಹಾರ ಸೌಲಭ್ಯಗಳು ಲಭ್ಯವಿದ್ದರೂ, ರಾತ್ರಿ ತಂಗಲು ಯಾವುದೇ ವ್ಯವಸ್ಥೆ ಇಲ್ಲದ ಕಾರಣ ಅನೇಕ ಅಭ್ಯರ್ಥಿಗಳು ಪಾದಚಾರಿ ಮಾರ್ಗಗಳು, ಅಂಗಡಿಗಳ ಮುಂಭಾಗಗಳು ಹಾಗೂ ರಸ್ತೆ ಬದಿಗಳಲ್ಲಿ ರಾತ್ರಿ ಕಳೆಯುತ್ತಿದ್ದಾರೆ. ಕೆಲವರು ಕಸದ ತೊಟ್ಟಿಗಳ ಸಮೀಪ ಹಾಗೂ ಪೊದೆಗಳ ಪಕ್ಕದಲ್ಲಿಯೂ ಆಶ್ರಯ ಪಡೆಯುತ್ತಿರುವ ದೃಶ್ಯಗಳು ಕಂಡುಬಂದಿವೆ.

ಇದರೊಂದಿಗೆ ಶೌಚಾಲಯ ಮತ್ತು ಸ್ನಾನಗೃಹಗಳಂತಹ ಮೂಲ ಸೌಲಭ್ಯಗಳ ಕೊರತೆಯಿಂದ ಅಭ್ಯರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕ ಸ್ವಚ್ಛತೆ ಹಾಗೂ ಆರೋಗ್ಯದ ಕುರಿತಂತೆ ಸ್ಥಳೀಯ ನಿವಾಸಿಗಳು, ನಾಗರಿಕ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಟಿಸಿಎಸ್ ಇಯಾನ್ ಡಿಜಿಟಲ್ ಜೋನ್‌ನಲ್ಲಿ ಪ್ರತಿದಿನ ಬೆಳಿಗ್ಗೆ 8.30, 11.30, ಮಧ್ಯಾಹ್ನ 2.30 ಹಾಗೂ ಸಂಜೆ 6.30 ಗಂಟೆಗೆ ನಾಲ್ಕು ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಇಲ್ಲಿನ ಸಿಬ್ಬಂದಿಗಳು ಅಭ್ಯರ್ಥಿಗಳೊಂದಿಗೆ ಸೌಜನ್ಯದಿಂದ ವರ್ತಿಸುವ ಬದಲು ಅವರೇ ಸೇನಾಧಿಕಾರಿಗಳಂತೆ ವರ್ತಿಸುತ್ತಿರುವುದು ವಿದ್ಯಾರ್ಥಿಗಳಿಗೆ ಬೇಸರ ತಂದಿದೆ.


ನಾಗರಿಕರು ಮತ್ತು ವಿವಿಧ ಸಂಘಟನೆಗಳು ಪರೀಕ್ಷೆ ಏರ್ಪಡಿಸಿರುವ ಸಂಸ್ಥೆಯು ಅಭ್ಯರ್ಥಿಗಳಿಗೆ ಕನಿಷ್ಠ ಡಾರ್ಮಿಟರಿ ಮಾದರಿಯ ವಸತಿ, ಶೌಚಾಲಯ ಹಾಗೂ ಸ್ನಾನಗೃಹ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿವೆ. ಅಭ್ಯರ್ಥಿಗಳು ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ನಿತ್ಯಕರ್ಮಗಳನ್ನು ನಿರ್ವಹಿಸುವಂತ ಪರಿಸ್ಥಿತಿ ಸರಿಯಲ್ಲ. ಅವರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸೇನೆಗೆ ಸೇರುವ ಕನಸಿನಿಂದ ಬಂದಿದ್ದೇವೆ. ಆದರೆ ರಸ್ತೆ ಮೇಲೆಯೇ ಮಲಗಬೇಕಾದ ಪರಿಸ್ಥಿತಿ ಬಂದಿದೆ. ಬೆಳಿಗ್ಗೆ 5 ಗಂಟೆಗೆ ಎದ್ದು ಶೌಚಾಲಯ ಹುಡುಕಬೇಕಾಗಿದೆ ಎಂದು ವಿಜಯಪುರದ ಅಭ್ಯರ್ಥಿಯೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.

ಇನ್ನೊಬ್ಬ ಬಾಗಲಕೋಟೆ ಮೂಲದ ಅಭ್ಯರ್ಥಿ ಮಾತನಾಡಿ, ಎರಡು ದಿನಗಳ ಹಿಂದೆ ಸುರಿದ ಮಳೆಯಿಂದ ಸಂಪೂರ್ಣ ಒದ್ದೆಯಾಗಿದ್ದೆ. ಆಶ್ರಯ ಪಡೆಯಲು ಸ್ಥಳವೇ ಇರಲಿಲ್ಲ. ಕೊನೆಗೆ ಅಂಗಡಿಗಳ ಮುಂದೆ ನಿಂತು ರಾತ್ರಿ ಕಳೆಯಬೇಕಾಯಿತು. ಮನೆಯಿಂದಲೇ ಹಾಸಿಗೆ ಮತ್ತು ಹೊದಿಕೆಯನ್ನು ತಂದಿದ್ದೇನೆ ಎಂದರು.

ಮೂಲಗಳ ಪ್ರಕಾರ, ಸಾಮಾನ್ಯವಾಗಿ ದೈಹಿಕ ನೇಮಕಾತಿ ಹಂತಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಆನ್‌ಲೈನ್ ಪರೀಕ್ಷಾ ಹಂತಕ್ಕೆ ಯಾವುದೇ ವಸತಿ ವ್ಯವಸ್ಥೆ ಕಲ್ಪಿಸಲಾಗಿಲ್ಲ ಎನ್ನಲಾಗಿದೆ. ಈ ಕುರಿತು ಪರೀಕ್ಷಾ ಕೇಂದ್ರದ ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯರಾಗಿಲ್ಲ.

ಡಾ.ಯತೀಂದ್ರರಿಗೆ ಅಭಿನಂದನೆ...



ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ವರುಣ ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಬೆಂಗಳೂರಿನಲ್ಲಿ ಹೂಗುಚ್ಛ ನೀಡಿ ಅಭಿನಂದಿಸಿದರು. ಈ ವೇಳೆ ಗೊದ್ದನಪುರ ಎಂ.ಮಂಜು, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಗುರು ಮಹಾದೇವ್, ಸದಸ್ಯ ಮರಳೂರು ಕೃಷ್ಣ, ಮಾರಶೆಟ್ಟಹಳ್ಳಿ ರವಿ, ಕಿರಣ, ಮೂಡಲಹುಂಡಿ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


ತನ್ವೀರ್ ಸೇಠ್‌ರಿಗೆ ಸಚಿವ ಸ್ಥಾನ ನೀಡಿ

ಮೈಸೂರು, ಜೂ.4–ತನ್ವೀರ್‌ಸೇಠ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಮೈಸೂರು ನಗರ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಚೇತನ್ ಕಾಂತರಾಜ್ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ. ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನ ಕಲ್ಪಿಸಬೇಕು. ಅವರು ಸತತ 6 ಬಾರಿ ಶಾಸಕರಾಗಿದ್ದಾರೆ. ಹಳೆ ಮೈಸೂರು ಭಾಗದಲ್ಲಿ ಅಲ್ಪಸಂಖ್ಯಾತರ ಒಗ್ಗೂಡಿಸಿ ಮುನ್ನಡೆಸಲು ಸಚಿವ ಸಾನದೊಂದಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿ ಹಾಗೂ ಕಾಂಗ್ರೆಸ್ ಪಕ್ಷ ವಹಿಸಿದ ಹುದ್ದೆಯನ್ನು ನಿಷ್ಠೆಯಿಂದ ನಿಭಾಯಿಸಿದ್ದಾರೆ. ಜೊತೆಗೆ ಎಲ್ಲಾ ಸಮುದಾಯದ ಜನರು ಅವರ ಜೊತೆಯಲ್ಲಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವುದು ಅನಿವಾರ್ಯ ಎಂದು ಒತ್ತಾಯಿಸಿದ್ದಾರೆ.



ಚೇತನ್ ಕಾಂತರಾಜ್

ಪ್ರೊ.ನಂಜಯ್ಯಗೆ ಸನ್ಮಾನ...



ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನೂತನ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಅವರನ್ನು ಯುವರಾಜ ಕಾಲೇಜು ಕನ್ನಡ ಅಧ್ಯಾಪಕರು, ಸಂಶೋಧಕರ ಬಳಗದಿಂದ ಸನ್ಮಾನಿಸಲಾಯಿತು. ಈ ವೇಳೆ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ.ಪರಶುರಾಮ, ಪ್ರಾಧ್ಯಾಪಕರಾದ ಪ್ರೊ.ಜಿ.ಶ್ರೀನಿವಾಸ್, ಪ್ರೊ.ಕೋಕಿಲ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ

ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರ್, ಮನ್ಸೂರ್ ಅಲಿ ಖಾನ್ ಕಾಂಗ್ರೆಸ್ ಅಭ್ಯರ್ಥಿಗಳು

ಬೆಂಗಳೂರು, ಜೂ.4(ಕೆಎಂಶಿ)– ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪುನಃ ಕಣಕ್ಕಿಳಿಸಲು ಪಕ್ಷ ತೀರ್ಮಾನಿಸಿದೆ.

ಇವರೊಂದಿಗೆ ಇನ್ನಿಬ್ಬರು ಕಾಂಗ್ರೆಸ್ ಅಭ್ಯರ್ಥಿಗಳಾಗಿ ಪವನ್ ಖೇರ್, ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್ ಕರ್ನಾಟಕದಿಂದ ಕಣಕ್ಕಿಳಿಯಲಿದ್ದಾರೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದಲ್ಲಿ ಪಕ್ಷ ಮೂರು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಬಹುದಾಗಿದೆ.

ಈ ಮೂರು ಸ್ಥಾನಗಳ ಪೈಕಿ ಒಂದು ಸ್ಥಾನಕ್ಕೆ ಸದ್ಯ ಸದಸ್ಯತ್ವ ಅವಧಿ ಪೂರ್ಣಗೊಳ್ಳುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮತ್ತೆ ರಾಜ್ಯಸಭೆಗೆ ಕಳುಹಿಸಲಾಗುತ್ತದೆ ಎಂಬುದನ್ನು ಮೊದಲೇ ನಿರೀಕ್ಷಿಸಲಾಗಿತ್ತು ಕಾಂಗ್ರೆಸ್‌ನ ಉಳಿದ ಎರಡು ಸ್ಥಾನಗಳಿಗೆ ಸ್ಪರ್ಧಿಸಲು ಪಕ್ಷದ ಟಿಕೆಟ್‌ಗಾಗಿ ಬಾರಿ ಪೈಪೋಟಿ ನಡೆದಿತ್ತಾದರೂ, ಅಂತಿಮವಾಗಿ ಪಕ್ಷದ ಹೈಕಮಾಂಡ್ ಸಮಾಲೋಚನೆ ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ.

ಇತ್ತೀಚೆಗೆ ನಡೆದ ಕೇರಳಂ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷದ ಉಸ್ತುವಾರಿಯಾಗಿ ತೋರಿದ ಸಂಘಟನಾ ಸಾಮರ್ಥ್ಯ ಪರಿಗಣಿಸಿ ಮನ್ಸೂರ್ ಅಲಿಖಾನ್ ಅವರನ್ನು ರಾಜ್ಯಸಭೆಗೆ ಕಳುಹಿಸಲು ಹೈಕಮಾಂಡ್ ತೀರ್ಮಾನಿಸಿದೆ. ಈ ಹಿಂದೆ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸಂಖ್ಯಾಬಲದ ಕೊರತೆಯಿಂದ ಸೋಲು ಅನುಭವಿಸಿದ್ದ ಮನ್ಸೂರ್ ಅಲಿ ಖಾನ್, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ ಅಲ್ಲಿಯೂ ಸೋಲು ಕಂಡಿದ್ದರು.

ಆದರೂ, ವಿಚಲಿತರಾಗದೆ ಪಕ್ಷ ಸಂಘಟನೆಯಲ್ಲಿ ಅವರು ತೋರಿದ ಸಾಮರ್ಥ್ಯ ಗುರುತಿಸಿ, ರಾಜ್ಯಸಭೆಗೆ ಕಳುಹಿಸಲು ಮತ್ತೆ ಅವಕಾಶ ಕಲ್ಪಿಸಲಾಗಿದೆ.

ರಾಜ್ಯಸಭೆಗೆ ಮುಸ್ಲಿಂ ನಾಯಕನ ಆಯ್ಕೆ ಮೂಲಕ ಕಾಂಗ್ರೆಸ್ ಈ ಸಮುದಾಯವನ್ನು ಕಡೆಗಣಿಸುತ್ತಿದೆ ಎಂಬ ಆರೋಪಗಳಿಗೆ ಉತ್ತರ ನೀಡಲು ಬಯಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್‌ನ ಮೂವರೂ ಅಭ್ಯರ್ಥಿಗಳು ನಾಳೆ ನಾಮಪತ್ರ ಸಲ್ಲಿಸಲಿದ್ದಾರೆ. ಖರ್ಗೆ ನಾಮಪತ್ರ ಸಲ್ಲಿಕೆ ವೇಳೆ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಉಪಸ್ಥಿತರಿರುವ ನಿರೀಕ್ಷೆ ಇದೆ.

ಹಾಗೆಯೇ ಮಧ್ಯಪ್ರದೇಶದ ಒಂದು ಪ್ರದೇಶಕ್ಕೆ ಮೀನಾಕ್ಷಿ ನಟರಾಜನ್, ರಾಜ ಸ್ಥಾನದಿಂದ ನೀರಜ್ ಧಾಂಗಿ, ತಮಿಳು ನಾಡಿನಿಂದ ಪ್ರವೀಣ್ ಚಕ್ರವರ್ತಿ, ಜಾರ್ಖಂಡ್‌ನಿಂದ ಪ್ರಣವ್‌ಜಾ ಅವರು ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದಾರೆ.

ರಾಜರ್ಷಿ ಜಯಂತಿ



ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತ್ಯುತ್ಸವವನ್ನು ಸ್ನಾತಕ ಗ್ರಂಥಾಲಯದಲ್ಲಿ ಆಚರಿಸಲಾಯಿತು. ಈವೇಳೆ ಗ್ರಂಥಪಾಲಕರಾದ ವೈ.ಎಲ್.ಸೋಮಶೇಖರ, ಸಹಾಯಕ ಗ್ರಂಥಪಾಲಕರಾದ ಕೆ.ಮಂಜುಳಾ, ಎಸ್.ಪ್ರಸಾದ್, ಸೌಮ್ಯ, ಕವಿತಾ, ಬಿ.ಮಂಜುನಾಥ, ಚಿಕ್ಕಣ್ಣ, ಎನ್.ಮಹೇಶ, ಪಿ.ಮಹೇಶ, ಸಿಬ್ಬಂದಿ ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು.ಜೂ.4– ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮಸಂಸ್ಥೆ ವತಿಯಿಂದ 2026–27ನೇ ಸಾಲಿನಲ್ಲಿ 1ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮೈಸೂರು ನಗರದ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿ ನಮೂನೆ ಪಡೆಯಲು ಮ್ಯಾನೇಜಿಂಗ್ ಟ್ರಸ್ಟಿ, ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮಸಂಸ್ಥೆ, ನಂ 4944, 8ನೇ ಮುಖ್ಯರಸ್ತೆ, 2ನೇ ಹಂತ, ವಿಜಯನಗರ ಮೈಸೂರು–570017 ಇವರಿಗೆ ಪೋಸ್ಟ್ ಕಾರ್ಡ್ ಮೂಲಕ ಮನವಿ ಸಲ್ಲಿಸಬೇಕು. ಅರ್ಜಿ ಪಡೆಯಲು ಜೂನ್ 10 ಕಡೆಯ ದಿನವಾಗಿರುತ್ತದೆ ಎಂದು ಸಂಸ್ಥೆಯ ಟ್ರಸ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾನತೆ, ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಸಾಧನ: ಜಿಟಿಡಿ

ಮೈಸೂರು, ಜೂ.4– ಶಿಕ್ಷಣವು ಸಮಾನತೆ, ಸಂಸ್ಕಾರ ಮತ್ತು ಅಭಿವೃದ್ಧಿ ಸಾಧನೆಗೆ ಪ್ರಮುಖ ಸಾಧನವಾಗಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರಿನ ರಾಜೀವ್‌ನಗರದಲ್ಲಿ ನೂತನವಾಗಿ ಪ್ರಾರಂಭವಾದ ಕಾರ್ಮೆಲ್ವೇಲ್ ಅಂತಾರಾಷ್ಟ್ರೀಯ ಶಾಲೆಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಗುಣಮಟ್ಟದ ಹಾಗೂ ಉದ್ಯೋಗಾಧಾರಿತ ಶಿಕ್ಷಣ ನೀಡುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಜೊತೆಗೆ ಶಿಸ್ತು ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವ ಕಾರ್ಯ ಮಾಡುತ್ತಿವೆ. ಭಾರತ ಸೇರಿದಂತೆ ವಿಶ್ವದಾದ್ಯಂತ ಇಂತಹ ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿವೆ ಎಂದು ಹೇಳಿದರು.

ಹಿಂದಿನ ದಿನಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಅನೇಕರು ಶಿಕ್ಷಣಕ್ಕಿಂತ ವ್ಯಾಪಾರ ಮತ್ತು ಉದ್ಯಮಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಹಿಂದೂ–ಮುಸ್ಲಿಂ ಸಮುದಾಯಗಳ ನಡುವೆ ಉತ್ತಮ ಬಾಂಧವ್ಯವಿತ್ತು. ಮೈಸೂರಿನಲ್ಲೂ ವಿವಿಧ ವ್ಯಾಪಾರ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರ ಪಾತ್ರ ಗಮನಾರ್ಹವಾಗಿತ್ತು. ಆದರೆ ಈಗ ದೊಡ್ಡ ಕಂಪನಿಗಳು ವಾರುಕಟ್ಟೆಯನ್ನು ಆವರಿಸಿಕೊಂಡಿರುವುದರಿಂದ ಉದ್ಯೋಗಾವಕಾಶ ಕಡಿಮೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಬದುಕು ಕಟ್ಟಿಕೊಳ್ಳಲು ಉತ್ತೇಜನ ನೀಡುವಂತಹ ಶಿಕ್ಷಣ ಬೇಕಿದೆ ಎಂದರು.

ಅಬ್ದುಲ್ ಕಲಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನವನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಅವರು ಕಠಿಣ ಪರಿಶ್ರಮದಿಂದ ಉನ್ನತ ಸ್ಥಾನಕ್ಕೇರಿದವರು. ಅವರ ಸಾಧನೆಗಳು ಇಂದಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲೂ ಡಿಜಿಟಲ್ ತಂತ್ರಜ್ಞಾನ ಪ್ರವೇಶಿಸಿದೆ. ಹಾಗಾಗಿ, ಮಕ್ಕಳನ್ನು ವಿದ್ಯಾವಂತರಾಗಿಸುವುದರ ಜೊತೆಗೆ ಸಂಸ್ಕಾರಯುತ ವ್ಯಕ್ತಿಗಳನ್ನಾಗಿ ರೂಪಿಸಬೇಕು. ತಂದೆ–ತಾಯಿ ಹಾಗೂ ಹಿರಿಯರನ್ನು ಗೌರವಿಸುವ ಮೌಲ್ಯಗಳನ್ನು ಮಕ್ಕಳಿಗೆ ಕಲಿಸಬೇಕು.

ಉದ್ಯೋಗಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಅಡಿಪಾಯ ಹಾಕಬೇಕು. ದೇಶದ ಸಂವಿಧಾನ ನೀಡಿರುವ ಸಮಾನತೆಯ ಆಶಯವನ್ನು ಸಾಕಾರಗೊಳಿಸಲು ಶಿಕ್ಷಣವೇ ಪರಿಣಾಮಕಾರಿ ವಾರ್ಗವಾಗಿದೆ ಎಂದು ಅಭಿಪ್ರಾಯಿಸಿದರು. ಈ ವೇಳೆ ಡಿಡಿಪಿಐ ಉದಯಕುಮಾರ್, ರೆ.ಫಾದರ್ ಜ್ಞಾನ ಪ್ರಗಾಸಂ, ಮರೀಯ ನವೀನ, ಎ.ಸಿ.ಸುದೀಪ, ಲವೀನ ಡಿಸೋಜಾ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ರಾಜೀವ್‌ನಗರದಲ್ಲಿ ಕಾರ್ಮೆಲ್ವೇಲ್ ಅಂತಾರಾಷ್ಟ್ರೀಯ ಶಾಲೆಯ ಕಟ್ಟಡ ಉದ್ಘಾಟಿಸಿದ ಬಳಿಕ ಸಭಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು.

ಜೂಜಾಟ ದಂಧೆ ನಡೆಸುತ್ತಿದ್ದ ರೌಡಿ ಗಡಿಪಾರು

ಮೈಸೂರು, ಜೂ.4(ಪಿಎಂ)– ಇಸ್ಪೀಟ್ ಜೂಜಾಟ ಆಡಿಸುವುದಲ್ಲದೆ, ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುತ್ತಿದ್ದ ರೌಡಿಯೊಬ್ಬನನ್ನು ಗಡಿಪಾರು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಆದೇಶ ಹೊರಡಿಸಿದ್ದಾರೆ.

ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಹದಿನಾರು ಮೋಳೆ ಗ್ರಾಮದ ನಿವಾಸಿ ಮಾದೇಶ ಅಲಿಯಾಸ್ ದೇವ (47) ಗಡಿಪಾರು ಆಗಿರುವ ರೌಡಿ. ಈತನು ವಿವಿಧ ಗ್ರಾಮಗಳ ಹೊರವಲಯಗಳಲ್ಲಿ ಇಸ್ಪೀಟ್ ಆಡಿಸುತ್ತಿದ್ದ. ಜೂಜಾಟ ಆಡುವವರಿಗೆ ಹಣವನ್ನು ಬಡ್ಡಿಗೆ ಸಾಲ ಕೊಡುವುದು, ಚಿನ್ನ, ವಾಹನಗಳನ್ನು ಗಿರಿವಿ ಇಟ್ಟುಕೊಳ್ಳುವಂತಹ ಅಕ್ರಮದಲ್ಲಿ ತೊಡಗಿಕೊಂಡಿದ್ದ. ಈತನ ವಿರುದ್ಧ ನಂ.ಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 7 ಜೂಜಾಟದ ಪ್ರಕರಣಗಳಲ್ಲಿ ಶಿಕ್ಷೆಯಾಗಿ ದಂಡ ಪಾವತಿಸಿದ್ದಾನೆ. ಈತನು ಒಬ್ಬ ರೌಡಿಯಾಗಿದ್ದು, ಈತನನ್ನು ಮೈಸೂರು ಜಿಲ್ಲೆಯಿಂದ ಹಾಸನ ಜಿಲ್ಲೆಯ ಸಕಲೇಶಪುರ ಪೊಲೀಸ್ ಠಾಣಾ ವ್ಯಾಪ್ತಿಗೆ 3 ತಿಂಗಳ ಅವಧಿಗೆ ಗಡಿಪಾರು ಮಾಡಿ ಆದೇಶಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಟ್ರೆಕ್ಕಿಂಗ್ ವೇಳೆ ನಾಪತ್ತೆಯಾದ ವಿದ್ಯಾರ್ಥಿನಿ ವಾರವಾದರೂ ಪತ್ತೆಯಿಲ್ಲ!

ಡೆಹ್ರಾಡೂನ್: ಉತ್ತರಾಖಂಡದ ಉತ್ತರಕಾಶಿಯ ದಯಾರ ಬುಗ್ಯಾಲ್‌ನಲ್ಲಿ ಟ್ರೆಕ್ಕಿಂಗ್ ವೇಳೆ ಎಂಬಿಎ ವಿದ್ಯಾರ್ಥಿನಿ ನಾಪತ್ತೆಯಾಗಿ ವಾರವಾದರೂ ಆಕೆಯ ಸುಳಿವು ಸಿಕ್ಕಿಲ್ಲ.



ನೈನಿತಾಲ್ ನಿವಾಸಿ ಬಬಿತಾ ಪಾಂಡೆ ಉತ್ತರಾಖಂಡದ ಉಧಮ್ ಸಿಂಗ್, ಹರ್ಮನ್‌ಪಾಲ್ ಸಿಂಗ್ ಮತ್ತು ಉತ್ತರ ಪ್ರದೇಶದ ಶಹಜಹಾನ್‌ಪುರದ ಹರ್ಮನ್‌ಪ್ರೀತ್ ಸಿಂಗ್ ಅವರೊಂದಿಗೆ ಉತ್ತರಕಾಶಿಗೆ ಟ್ರೆಕ್ಕಿಂಗ್‌ಗೆ ತೆರಳಿದ್ದಾಗ ನಾಪತ್ತೆಯಾಗಿದ್ದಾರೆ. ಈ ಸಂಬಂಧ ಕುಟುಂಬಸ್ಥರು ನೀಡಿದ ದೂರಿನ ಅನ್ವಯ ಯುವತಿಯ ಇಬ್ಬರು ಸ್ನೇಹಿತರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಮೂವರು ಮೇ 25ರಂದು ಡೆಹ್ರಾಡೂನ್‌ಗೆ ತೆರಳಿ, ಹರ್ಸಿಲ್, ಗಂಗೋತ್ರಿ ಮತ್ತು ಹತ್ತಿರದ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದರು. ಮೇ 28ರಂದು ರೈಥಾಲ್ ಗ್ರಾಮದಲ್ಲಿ ತಂಗಿದ್ದರು. ಅವರು ಓಡಾಡಿದ ದೃಶ್ಯ ರೈಥಾಲ್‌ನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ನಂತರ ರೈಥಾಲ್‌ನಿಂದ ಉತ್ತರಾಖಂಡದ ದಯಾರಾ ಬುಗ್ಯಾಲ್‌ಗೆ ನಡಿಗೆ ಪ್ರಾರಂಭಿಸಿ, ರಾತ್ರಿ ಗೋಯಿ ಬೇಸ್ ಕ್ಯಾಂಪ್‌ನಲ್ಲಿ ತಂಗಿದ್ದರು. ಮಧ್ಯರಾತ್ರಿಯ ಸುಮಾರಿಗೆ, ಪಾಂಡೆ ಶಿಬಿರದಿಂದ ಕಾಣೆಯಾಗಿದ್ದಾರೆ ಎಂದು ತಿಳಿದುಬಂದಿದೆ ಎಂದು ಉತ್ತರಕಾಶಿ ಎಸ್‌ಪಿ ಕಮಲೇಶ್ ಉಪಾಧ್ಯಾಯ ಮಾಹಿತಿ ನೀಡಿದ್ದಾರೆ.

ಜಪಾನ್‌ನ ಉಪಾಹಾರ ಮಂದಿರದಲ್ಲಿ ದಕ್ಷಿಣ ಭಾರತದ ದೋಸೆ–ಇಡ್ಲಿ ಫೇಮಸ್


ಜಪಾನ್: ಜಪಾನ್‌ನ ಟೋಕಿಯೊ ನಗರದಲ್ಲಿರುವ ಒಂದು ವಿಶಿಷ್ಟಉಪಹಾರ ಮಂದಿರವು ದಕ್ಷಿಣ ಭಾರತದ ವಿಶೇಷ ಖಾದ್ಯದ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ.



ಪ್ರವಾಸಿ ವ್ಲಾಗರ್ ಸೋನಂ ಮಿಥಾ ಅವರು ಟೋಕಿಯೊದಲ್ಲಿರುವ 'ಕೇರಳ ನೋ ಕಜೆ ನೋ ಮಾರ್ನಿಂಗ್' ಎಂಬ ಕೇರಳ ಶೈಲಿಯ ಉಪಹಾರ ಮಂದಿರಕ್ಕೆ ಭೇಟಿ ನೀಡಿ, ಅಲ್ಲಿನ ವಿಶೇಷತೆಗಳನ್ನು ಹಂಚಿಕೊಂಡಿದ್ದಾರೆ. ಈ ರೆಸ್ಟೋರೆಂಟ್ ನಡೆಸುತ್ತಿರುವ ಜಪಾನಿ ದಂಪತಿ, 4 ದಶಕಗಳ ಹಿಂದೆ ಕೇರಳದಲ್ಲಿ 2 ವರ್ಷಗಳ ಕಾಲ ವಾಸಿಸಿದ್ದರು. ಆ ಅವಧಿಯಲ್ಲಿ ಭಾರತೀಯ, ವಿಶೇಷವಾಗಿ ಕೇರಳದ ಆಹಾರದ ರುಚಿಗೆ ಅವರು ಮನಸೋತು, ನಿವೃತ್ತಿಯ ನಂತರ ತಮ್ಮ ಅನುಭವವನ್ನು ಜಪಾನ್‌ನ ಜನರೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಈ ಉಪಹಾರ ಮಂದಿರವನ್ನು ಆರಂಭಿಸಿದ್ದಾರೆ. ಈ ರೆಸ್ಟೋರೆಂಟ್‌ನಲ್ಲಿ ದೋಸೆ, ಇಡ್ಲಿ, ವಡೆ, ಉತ್ತಪ್ಪ, ಉಪ್ಪಿಟ್ಟು ಹಾಗೂ ಚಹಾ ಸೇರಿದಂತೆ ದಕ್ಷಿಣ ಭಾರತದ ಜನಪ್ರಿಯ ಉಪಹಾರಗಳನ್ನು ತಯಾರಿಸಿ ಗ್ರಾಹಕರಿಗೆ ನೀಡಲಾಗುತ್ತಿದೆ. ಕೇರಳದ ಸಾಂಪ್ರದಾಯಿಕ ರುಚಿಯನ್ನು ಸಾಧ್ಯವಾದಷ್ಟು ಉಳಿಸಿಕೊಳ್ಳಲು ದಂಪತಿ ಪ್ರಯತ್ನಿಸುತ್ತಿದ್ದಾರೆ. 4 ದಶಕಗಳ ಹಿಂದೆ ಭಾರತದಲ್ಲಿ ಬೆಳೆದ ಒಂದು ಪ್ರೀತಿ ಇಂದು ಜಪಾನ್‌ನಲ್ಲಿ ಸಾವಿರಾರು ಮಂದಿಗೆ ಭಾರತೀಯ ಆಹಾರದ ಸುವಾಸನೆಯನ್ನು ಪರಿಚಯಿಸುತ್ತಿದೆ.

ಭಾರತ ತಲುಪಿದ ರಷ್ಯಾದ ಎಸ್–400 ರಕ್ಷಣಾ ವ್ಯವಸ್ಥೆಯ 4ನೇ ಘಟಕ


ನವದೆಹಲಿ: ರಷ್ಯಾ ನಿರ್ಮಿತ ಅತ್ಯಂತ ಶಕ್ತಿಶಾಲಿ ಎಸ್–400 ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯ 4ನೇ ಘಟಕ ಜೂನ್ 3ರಂದು ಯಶಸ್ವಿಯಾಗಿ ಭಾರತಕ್ಕೆ ತಲುಪಿದೆ. ಇದರೊಂದಿಗೆ ಭಾರತದ ವಾಯು ರಕ್ಷಣಾ ಪಡೆ ಈಗ ಒಟ್ಟು ನಾಲ್ಕು ಎಸ್–400 ಅತ್ಯಾಧುನಿಕ ಕ್ಷಿಪಣಿ ವ್ಯವಸ್ಥೆಗಳನ್ನು ಹೊಂದಿದಂತಾಗಿದೆ.



ಕಳೆದ ತಿಂಗಳಷ್ಟೇ ಭಾರತೀಯ ವಾಯುಪಡೆಯ ಉನ್ನತ ಅಧಿಕಾರಿಗಳ ತಂಡ ರಷ್ಯಾಕ್ಕೆ ಭೇಟಿ ನೀಡಿ, ಈ ವ್ಯವಸ್ಥೆಯ ತಾಂತ್ರಿಕ ತಪಾಸಣೆಯನ್ನು ಪೂರ್ಣಗೊಳಿಸಿತ್ತು. ಈ 4ನೇ ಘಟಕದ ಉಳಿದ ಉಪಕರಣಗಳು ಮುಂದಿನ ಕೆಲವು ದಿನಗಳಲ್ಲಿ ವಿವಿಧ ಬಂದರುಗಳ ಮೂಲಕ ಭಾರತವನ್ನು ತಲುಪಲಿವೆ. ಜೂನ್ ತಿಂಗಳ ಅಂತ್ಯದ ವೇಳೆಗೆ ಇದನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಸೇನೆ ಸಜ್ಜಾಗಿದೆ. ನಂತರ ಎಸ್–400 ಕ್ಷಿಪಣಿ ವ್ಯವಸ್ಥೆಯನ್ನು ಪಾಕಿಸ್ತಾನದ ಗಡಿಗೆ ತೀರಾ ಹತ್ತಿರದಲ್ಲಿ ನಿಯೋಜಿಸುವ ಸಾಧ್ಯತೆಯಿದೆ. ಇದು ಶತ್ರು ರಾಷ್ಟ್ರಗಳ ಕಡೆಯಿಂದ ನುಗ್ಗಿ ಬರುವ ಯಾವುದೇ ರೀತಿಯ ಡ್ರೋನ್, ಯುದ್ಧ ವಿಮಾನ ಅಥವಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಗಡಿಯ ಆಚೆಗೇ ಪತ್ತೆ ಹಚ್ಚಿ, ಕ್ಷಣಮಾತ್ರದಲ್ಲಿ ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ. ಎಸ್–400 ಅನ್ನು ಭಾರತೀಯ ಸೇನೆಯಲ್ಲಿ ಪ್ರೀತಿಯಿಂದ 'ಸುದರ್ಶನ ಚಕ್ರ' ಎಂದು ಕರೆಯಲಾಗುತ್ತದೆ.

ಪ್ರವಾಸಿ ಮಹಿಳೆ ಅತ್ಯಾಚಾರ; ಇಬ್ಬರು ಪಾಕಿಗಳಿಗೆ ಮರಣದಂಡನೆ

ಇಸ್ಲಾಮಾಬಾದ್: ಪಾಕಿಸ್ತಾನದ ಲಾಹೋರ್ ಬಳಿಯ ಹೆದ್ದಾರಿಯಲ್ಲಿ ಫ್ರೆಂಚ್ ಪ್ರವಾಸಿ ಮಹಿಳೆಯೊಬ್ಬರ ಮೇಲೆ ಆಕೆಯ ಮೂವರು ಮಕ್ಕಳ ಮುಂದೆ ಸಾಮೂಹಿಕ ಅತ್ಯಾಚಾರ ಎಸಗಿದ ಇಬ್ಬರು ಪಾಕ್ ಪ್ರಜೆಗಳಿಗೆ ವಿಧಿಸಿದ್ದ ಮರಣ ದಂಡನೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸುವ ಲಾಹೋರ್ ನ್ಯಾಯಾಲಯ ವ್ಯಕ್ತಿಗಳ ವಿರುದ್ಧ ಆದೇಶಿಸಲಾಗಿದ್ದ ಮರಣ ದಂಡನೆಯನ್ನು ನಿರ್ಣಯ ಎತ್ತಿ ಹಿಡಿದಿದೆ. ಈ ಕುರಿತು ಹೇಳಿಕೆ ನೀಡಿದ ನ್ಯಾಯಾಲಯದ ಅಧಿಕಾರಿಯೊಬ್ಬರು 2020ರಲ್ಲಿ ಫ್ರೆಂಚ್ ಪ್ರವಾಸಿ ಮಹಿಳೆಯ ಮೇಲಿನ ಗ್ಯಾಂಗ್ ರೇಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮೂಹಿಕ ಅತ್ಯಾಚಾರ, ಅಪಹರಣ, ದರೋಡೆ ಮತ್ತು ಭಯೋತ್ಪಾದನೆಗೆ ಸಂಬಂಧಿಸಿದ ಅಪರಾಧಗಳಲ್ಲಿ ತಪ್ಪಿತಸ್ಥರೆಂದು 2021ರಲ್ಲಿ ಭಯೋತ್ಪಾದನಾ ನಿಗ್ರಹ ಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಅಬಿದ್ ಅಲಿ ಮತ್ತು ಶಫ್ಕತ್ ಅಲಿ ಸಲ್ಲಿಸಿದ್ದ ಮೇಲ್ಮನವಿಗಳನ್ನು ಲಾಹೋರ್ ಹೈಕೋರ್ಟ್ ಅಬಿದ್ ಅಲಿ ಮತ್ತು ಶಫ್ಕತ್ ಅಲಿ ಸಲ್ಲಿಸಿದ್ದ ಮೇಲ್ಮನವಿಗಳನ್ನು ವಜಾಗೊಳಿಸಿದೆ ಎಂದು ತಿಳಿಸಿದ್ದಾರೆ. 2020ರಲ್ಲಿ ಪಾಕಿಸ್ತಾನಿ ಮೂಲಗಳನ್ನು ಹೊಂದಿರುವ ಫ್ರೆಂಚ್ ಮಹಿಳೆಯೊಬ್ಬರು ತನ್ನ ಮೂವರು ಮಕ್ಕಳೊಂದಿಗೆ ಲಾಹೋರ್ ಬಳಿ ಕಾರಿನ ಕಿಟಕಿ ಹಾಗೂ ಬಾಗಿಲುಗಳನ್ನು ಲಾಕ್ ಮಾಡಿಕೊಂಡು ರಸ್ತೆ ಬದಿಯಲ್ಲಿ ನಿಂತಿದ್ದಾಗ ಇಬ್ಬರು ದುಷ್ಕರ್ಮಿಗಳು ದರೋಡೆ ಮಾಡಿ, ಮಕ್ಕಳ ಮುಂದೆ ಮಹಿಳೆ ಮೇಲೆ ಅತ್ಯಾಚಾರ ವೆಸಗಿದ್ದರು.



ತಿರುಪತಿ ಲಡ್ಡು ದಾಖಲೆ ಮಾರಾಟ

ತಿರುಪತಿ: 'ತಿರುಮಲ ತಿರುಪತಿ ಲಡ್ಡು' ಇದೀಗ ಹೊಸ ಇತಿಹಾಸ ಸೃಷ್ಟಿಸಿದ್ದು, ಶ್ರೀವಾರಿ ಲಡ್ಡು ಮಾರಾಟವು ಕಳೆದ ಮೇ ತಿಂಗಳಲ್ಲಿ ಗರಿಷ್ಠ ಮಟ್ಟ ತಲುಪಿದೆ ಎಂದು ತಿರುಮಲ ತಿರುಪತಿ ದೇವಸ್ಥಾನಂ ಘೋಷಿಸಿದೆ. ತಿರುಮಲಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚುತ್ತಿದ್ದು, ಅದಕ್ಕೆ ಪೂರಕವಾಗಿ ಲಡ್ಡು ಪ್ರಸಾದದ ಬೇಡಿಕೆಯೂ ಹೊಸ ದಾಖಲೆ ಬರೆಯುತ್ತಿದೆ. ಟಿಟಿಡಿ ಅಂಕಿ–ಅಂಶಗಳ ಪ್ರಕಾರ, 2024ರ ಮೇ ತಿಂಗಳಲ್ಲಿ 1.01 ಕೋಟಿ ಮತ್ತು 2025ರ ಮೇ ತಿಂಗಳಲ್ಲಿ 1.10 ಕೋಟಿ ಲಡ್ಡುಗಳು ಮಾರಾಟವಾಗಿದ್ದವು. ಆದರೆ ಪ್ರಸಕ್ತ ಮೇ ತಿಂಗಳೊಂದರಲ್ಲೇ ಬರೋಬ್ಬರಿ 1,21,35,528(1.21 ಕೋಟಿಗೂ ಹೆಚ್ಚು) ಲಡ್ಡುಗಳು ಮಾರಾಟವಾಗುವ ಮೂಲಕ ಹಳೆಯ ಎಲ್ಲಾ ದಾಖಲೆಗಳನ್ನು ಹಿಂದಿಕ್ಕಿದೆ. ಬೇಸಿಗೆಯ ರಜಾದಿನಗಳಲ್ಲಿ ತಿರುಮಲಕ್ಕೆ ಹರಿದುಬರುತ್ತಿರುವ ಭಕ್ತರ ಮಹಾಪೂರವನ್ನು ಸರಿದೂಗಿಸಲು ಟಿಟಿಡಿ ಪ್ರಸ್ತುತ ದಿನಕ್ಕೆ 4 ಲಕ್ಷಕ್ಕೂ ಹೆಚ್ಚು ಲಡ್ಡುಗಳನ್ನು ಸಿದ್ಧಪಡಿಸುತ್ತಿದೆ. ಕೇವಲ ಪ್ರಮಾಣ ಮಾತ್ರವಲ್ಲದೆ ಗುಣಮಟ್ಟ ಮತ್ತು ಪಾರದರ್ಶಕತೆ ಹೆಚ್ಚಿಸಲು ಅತ್ಯಾಧುನಿಕ ತಂತ್ರಜ್ಞಾನ ಬಳಸಲಾಗುತ್ತಿದೆ. ಲಡ್ಡು ತಯಾರಿಕೆಯ ಕಚ್ಚಾ ವಸ್ತುಗಳಲ್ಲಿನ ಕಲ್ಮಶಗಳನ್ನು ಗುರುತಿಸಿ, ಸಂಪೂರ್ಣವಾಗಿ ತೆಗೆದು ಹಾಕಲು ಶ್ರೀವಾರಿ ಪೋಟು (ಮುಖ್ಯ ಅಡುಗೆ ಮನೆ)ನಲ್ಲಿ ಎರಡು ಕೃತಕ ಬುದ್ಧಿಮತ್ತೆ ಆಧಾರಿತ 'ಬಣ್ಣ–ವಿಂಗಡಣೆ ಯಂತ್ರ'ಗಳನ್ನು ಸ್ಥಾಪಿಸಲಾಗಿದೆ. ಹೆಚ್ಚುವರಿ ಕೌಂಟರ್‌ಗಳು ಹಾಗೂ ಡಿಜಿಟಲ್ ಪಾವತಿ ಸೌಲಭ್ಯವಿದೆ.



ಕೊಡಗಿನಲ್ಲಿ ಮಳೆಗಾಲ ಆರಂಭಕ್ಕೆ ದಿನಗಣನೆ

ರಾಜ ಕಾಲುವೆ, ಚರಂಡಿಗಳ ಶುಚಿತ್ವಕ್ಕೆ ಆದ್ಯತೆ



ಗುರುವಾರ ನಡೆದ ಮಡಿಕೇರಿ ನಗರ ಸಭೆಯ ಸಾಮಾನ್ಯ ಸಭೆ.

ಮಡಿಕೇರಿ: ಮಳೆಗಾಲ ಪ್ರಾರಂಭಕ್ಕೆ ದಿನ ಗಣನೆ ಆರಂಭವಾಗಿದ್ದು ನಗರದ ಎಲ್ಲಾ ರಾಜ ಕಾಲುವೆ ಮತ್ತು ಕೋಲು ಚರಂಡಿಗಳ ಶುಚಿತ್ವಕ್ಕೆ ಮೊದಲ ಆದ್ಯತೆಯಾಗುವಂತೆ ಕ್ರಮ ಕೈಗೊಳ್ಳಲು ಮಡಿಕೇರಿ ನಗರ ಸಭೆಯ ಸಾಮಾನ್ಯ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ನಗರ ಸಭೆ ಅಧ್ಯಕ್ಷೆ ಕಲಾವತಿ ನೇತೃತ್ವದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಹಿರಿಯ ಸದಸ್ಯ ಕೆ.ಎಸ್.ರಮೇಶ್ ಇನ್ನೇನು ಮಳೆಗಾಲ ಪ್ರಾರಂಭವಾಗಲಿದೆ. ಅದಕ್ಕೂ ಮುನ್ನ ರಾಜ ಕಾಲುವೆಗಳು ಮತ್ತು ಎಲ್ಲಾ ವಾರ್ಡ್‌ಗಳ ಚರಂಡಿಗಳು, ರಸ್ತೆ ಬದಿಯ ಕಿರಿಚಲು ಕಾಡುಗಳನ್ನು ಕಡಿದು ಸ್ವಚ್ಛಗೊಳಿಸಬೇಕು. ಇದರಿಂದ ರಸ್ತೆಗಳು ಹಾಳಾಗುವುದನ್ನು ತಡೆಯಬಹುದು. ನಗರ ಸಭೆ ಹೆಚ್ಚುವರಿಯಾಗಿ ಜೆಸಿಬಿ ಮತ್ತು ಹಿಟಾಚಿ ಯಂತ್ರ ಸಹಿತ ಅಗತ್ಯ ಕಾರ್ಮಿಕರನ್ನು ಕೂಡ ಈ ಕಾರ್ಯಕ್ಕೆ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಇದಕ್ಕೆ ಪ್ರತಿಕ್ರಿಯಿಸಿದ ಪೌರಾಯುಕ್ತ ರಮೇಶ್, ಮಳೆಗಾಲ ಎದುರಿಸಲು ನಗರ ಸಭೆ ಸಜ್ಜಾಗಿದೆ. ಎಲ್ಲಾ ವಾರ್ಡ್‌ಗಳಿಗೂ ಓರ್ವ ಸಿಬ್ಬಂದಿಯನ್ನು ನೇಮಿಸಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆ. ರಾಜ ಕಾಲುವೆ ಮತ್ತು ಚರಂಡಿ ಶುಚಿತ್ವಕ್ಕೆ 10 ಲಕ್ಷ ರೂ. ವೆಚ್ಚದಲ್ಲಿ ಟೆಂಡರ್ ಕರೆದು ಕಾಮಗಾರಿ ನಡೆಸಲಾಗುತ್ತಿದೆ. ಇಂದಿರಾನಗರ, ಮಂಗಳದೇವಿ ನಗರದ, ಚಾಮುಂಡೇಶ್ವರಿ ನಗರ ಹಾಗೂ ಆಝಾದ್ ನಗರಗಳಲ್ಲಿ ಅಪಾಯಕಾರಿ ಪ್ರದೇಶಗಳಲ್ಲಿರುವ ಮನೆಗಳಿಗೆ ನೋಟೀಸ್ ನೀಡಲು ತಯಾರಿ ನಡೆಸಲಾಗಿದೆ. ಒಟ್ಟು 6 ಸಮುದಾಯ ಭವನಗಳಲ್ಲಿ ಕಾಳಜಿ ಕೇಂದ್ರ ತೆರೆಯಲು ಗುರುತಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಡಿಕೇರಿ ನಗರಸಭೆಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯದಿರಲು ಮುಖ್ಯವಾಗಿ ಸಿಬ್ಬಂದಿಗಳ ಕೊರತೆ ಎದ್ದು ಕಾಣುತ್ತಿದೆ. ಶೀಘ್ರದಲ್ಲೇ ಸಿಬ್ಬಂದಿಗಳನ್ನು ನೇಮಿಸಿ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂಬ ಆಗ್ರಹ ಸದಸ್ಯರಿಂದ ವ್ಯಕ್ತವಾಯಿತು. ನಗರ ಸಭೆಯ ವ್ಯಾಪ್ತಿಗೆ ಒಳಪಡುವ ಕೆಲವು ಆಸ್ತಿ ಒತ್ತುವರಿಯಾಗುತ್ತಿದೆ. ಎಸ್‌ಪಿ ಕಚೇರಿ ಪಕ್ಕದಲ್ಲೇ ಜಾಗ ಒತ್ತುವರಿ ಮಾಡಲಾಗಿದೆ. ಅಲ್ಲಿರುವ ಶೆಡ್ ಅನ್ನು ತೆರವು ಮಾಡುವಂತೆ ಸದಸ್ಯ ಅಮೀನ್ ಮೊಹಿಸಿನ್ ಆಗ್ರಹಿಸಿದರು. ಇದಕ್ಕೆ ಧ್ವನಿಗೂಡಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್ ಶೆಡ್ ಅನ್ನು ತಕ್ಷಣವೇ ತೆರವು ಮಾಡುವಂತೆ ಒತ್ತಾಯಿಸಿದರು. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪೌರಾಯುಕ್ತರು ಹೇಳಿದರು.

ನಗರ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳು ತಲೆ ಎತ್ತಿದ್ದು ಗಾಂಧಿ ಮೈದಾನ ಮುಂಭಾಗ ಅನಧಿಕೃತ ಕಟ್ಟಡ ನಿರ್ಮಾಣವಾಗುತ್ತಿದೆ. ಈ ಬಗ್ಗೆ ಕ್ರಮ ವಹಿಸುವಂತೆ ವಿಪಕ್ಷ ಸದಸ್ಯರು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಕೆ.ಎಸ್.ರಮೇಶ್, ಕಟ್ಟಡ ಪರವಾನಗಿ ಮುಕ್ತಾಯವಾಗಿದೆ. ಹೀಗಾಗಿ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ನಗರ ಸಭೆ ಅಧಿಕಾರಿಗಳೇ ಕಾನೂನು ಕ್ರಮ ಕೈಗೊಳ್ಳುತ್ತಾರೆ ಎಂಧು ಹೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿಪಕ್ಷ ಸದಸ್ಯರು ಕಟ್ಟಡ ನಿರ್ಮಾಣದಲ್ಲಿ ಸಂಪೂರ್ಣವಾಗಿ ಕಾನೂನು ಉಲ್ಲಂಘನೆಯಾಗಿದೆ. ನಗರ ಸಭೆ ಕಾನೂನು ತಜ್ಞರೇ ಈ ಕುರಿತು ವರದಿ ನೀಡಿದ್ದಾರೆ. ಹೀಗಿದ್ರೂ ಹಿಂದಿನ ಕೌನ್ಸಿಲ್ ನಿರ್ಣಯದಂತೆ ಕಾಮಗಾರಿ ಸ್ಥಗಿತಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಮೀನ್ ಮೊಹಿಸಿನ್ ಅಸಮಾಧಾನ ವ್ಯಕ್ತಪಡಿಸಿದರು. ಇದೇ ವಿಚಾರವಾಗಿ ಆಡಳಿತ ಪಕ್ಷ ಬಿಜೆಪಿ ಹಾಗೂ ವಿರೋಧ ಪಕ್ಷ ಎಸ್‌ಡಿಪಿಐ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಕೆಲವು ಸದಸ್ಯರು ಸದನದ ಬಾವಿಗೆ ಇಳಿದು ಆಕ್ರೋಶ ಹೊರ ಹಾಕಿದ ಘಟನೆಯೂ ನಡೆಯಿತು.

ಮಡಿಕೇರಿ ಜೈಲಿನಲ್ಲಿ ಖೈದಿಯ ಕೊಲೆ ಪ್ರಕರಣ : ಸಿಐಡಿ ತನಿಖೆ ಆರಂಭ

ಜೈಲು ಅಧಿಕಾರಿಗಳು, ಖೈದಿಗಳ ವಿಚಾರಣೆ



ನನ್ನ ಸಹೋದರನ ಸಾವಿಗೆ ಕಾರಣರಾದವರ ವಿರುದ್ದವೂ ಕಾನೂನು ಕ್ರಮ ಕೈಗೊಳ್ಳಬೇಕು. ರಾಜೇಶ್, ಗಣೇಶ, ಅನುಶ್ರಿ, ಅನುಪಮ ಎಂಬವರ ವಿರುದ್ದವೂ ಎಫ್‌ಐಆರ್ ದಾಖಲಿಸಬೇಕು. ನನ್ನ ಸಹೋದರನ ಸಾವಿಗೆ ನ್ಯಾಯ ಒದಗಿಸಬೇಕು. ಆಸ್ತಿ ವಿಚಾರಕ್ಕಾಗಿ ನನ್ನ ಸಹೋದರನನ್ನು ಕೊಲೆ ಮಾಡಲಾಗಿದೆ.

–ತಾನ್ಯ, ಮೃತನ ಸಹೋದರಿ.

ಮಡಿಕೇರಿ, ಜೂ.4– ಮಡಿಕೇರಿ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಸಹ ವಿಚಾರಣಾಧೀನ ಕೈದಿಯನ್ನು ಚೂರಿಯಿಂದ ಇರಿದು ಕೊಲೆ ಮಾಡಲಾಗಿದ್ದು, ನಿಯಮದಂತೆ ಸಿ.ಐ.ಡಿ ತನಿಖೆ ಆರಂಭವಾಗಿದೆ.

ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ಗ್ರಾಮ ನಿವಾಸಿ ಹೇಮಂತ್(26) ಎಂಬಾತನೇ ಕೊಲೆಯಾದ ದುರ್ದೈವಿ.

ಹೇಮಂತ್ ವಿಚಾರಣಾಧೀನ ಕೈದಿಯಾಗಿದ್ದು, ಚೂರಿ ಇರಿತದಿಂದ ತೀವ್ರವಾಗಿ ಗಾಯಗೊಂಡಿದ್ದು, ಜೂ.2ರ ರಾತ್ರಿ 7 ಗಂಟೆಯ ಸಮಯದಲ್ಲಿ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದ. ನ್ಯಾಯಾಂಗ ಬಂಧನದ ಅವಧಿಯಲ್ಲಿ ವಿಚಾರಣಾಧೀನ ಕೈದಿಯೋರ್ವ ಚೂರಿ ಇರಿತದಿಂದ ಕೊಲೆಯಾದ ಹಿನ್ನಲೆಯಲ್ಲಿ ಮೊದಲಿಗೆ ಜೈಲು ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನಿರ್ಲಕ್ಷ್ಯದ ಕುರಿತು ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ಇಬ್ಬರು ಸರಕಾರಿ ವೈದ್ಯರು ನೆರವೇರಿಸಿದ್ದಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಮತ್ತು ವೀಡಿಯೋ ಚಿತ್ರೀಕರಣದ ಪ್ರತಿಯನ್ನು ನ್ಯಾಯಾಲಯ, ಸಿಐಡಿ ಪೊಲೀಸ್ ಅಧಿಕಾರಿಗಳಿಗೆ ಇನ್ನಷ್ಟೇ ಹಸ್ತಾಂತರ ಮಾಡಬೇಕಿದೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಇನ್ನು ಘಟನೆ ನಡೆದ ಮಡಿಕೇರಿ ಕೇಂದ್ರ ಕಾರಾಗೃಹ ಪ್ರದೇಶ ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ. ಈ ಹಿನ್ನೆಲೆಯಲ್ಲಿ ಮಡಿಕೇರಿ ಗ್ರಾಮಾಂತರ ಠಾಣಾ ವೃತ್ತ ನಿರೀಕ್ಷಕ ಚಂದ್ರಶೇಖರ್ ಮತ್ತು ಪೊಲೀಸ್ ಸಿಬ್ಬಂದಿಗಳು ನ್ಯಾಯಾಧೀಶರ ಅನುಮತಿ ಸಹಿತ ಈಗಾಗಲೇ ಘಟನಾ ಸ್ಥಳದ ಮಹಜರು ಮತ್ತು ಪರಿಶೀಲನೆ ನಡೆಸಿದ್ದಾರೆ. ಸ್ಥಳದಲ್ಲಿದ್ದ ಸಿ.ಸಿ. ಕ್ಯಾಮರಾಗಳ ದೃಶ್ಯಗಳನ್ನು ತನಿಖೆಗಾಗಿ ವಶಕ್ಕೆ ಪಡೆದಿರುವುದಾಗಿ ತಿಳಿದು ಬಂದಿದೆ. ಸ್ಥಳ ಮಹಜರು, ವಶಕ್ಕೆ ಪಡೆದ ಸ್ವತ್ತುಗಳ ವಿವರವನ್ನು ಕೂಡ ಸಿಐಡಿ ಪೊಲೀಸರಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಬಾಕಿ ಇದೆ ಎಂದು ಉನ್ನತ ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ಗ್ರಾಮ ನಿವಾಸಿಗಳಾದ ಹೇಮಂತ್, ಜಗದೀಶ್, ಇಂದಿರಾ, ರವಿ ಹಾಗೂ ರಾಜೇಶ್ ಎಂಬವರು ಸಂಬಂಧಿಗಳಾಗಿದ್ದು ವಾರದ ಹಿಂದೆ ಇವರ ನಡುವೆ ಆಸ್ತಿ ಮತ್ತು ಕೌಟುಂಬಿಕ ವಿಚಾರದಲ್ಲಿ ಹೊಡೆದಾಟ ನಡೆದು 4 ಮಂದಿಯ ವಿರುದ್ಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪೈಕಿ ರಾಜೇಶ್ ಎಂಬಾತ 2022 ರಲ್ಲಿ ಕೊಲೆ ಪ್ರಕರಣದ ಆರೋಪಿಯಾಗಿ ಮಡಿಕೇರಿ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿ ಬಂಧನದಲ್ಲಿದ್ದ. ಜೂ.1ರಂದು ಕಾರಾಗೃಹದಲ್ಲಿ ರಾಜೇಶ್ ಮತ್ತು ಹೇಮಂತ್ ನಡುವೆ ಮಾತಿನ ಚಕಮಕಿ ನಡೆದಿದ್ದು, ಈ ಸಂದರ್ಭ ರಾಜೇಶ್ ಚಾಕುವಿನಿಂದ ಏಕಾಏಕಿ ಹೇಮಂತ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಈ ವೇಳೆ ಜೈಲು ಸಿಬ್ಬಂದಿ ಗಾಯಾಳು ಹೇಮಂತ್‌ನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ಹೇಮಂತ್ ಜೂ.2ರ ರಾತ್ರಿ ಮೃತಪಟ್ಟಿದ್ದ.

ಮನೆಯ ಹಿಂಭಾಗ ಕಾಡಾನೆ ಸಾವು



ಸುಂಟಿಕೊಪ್ಪ: 7ನೇ ಹೊಸಕೋಟೆ ತೊಂಡೂರು ಸಲಿ ಎಂಬವರ ಮನೆಯ ಹಿಂಭಾಗದಲ್ಲಿ ಕಾಡಾನೆಯೊಂದು ಸಾವಿಗೀಡಾಗಿದೆ. ಗುರುವಾರ ಕಾಡಾನೆ ಸಾವು ಪ್ರಕರಣ ಬೆಳಕಿಗೆ ಬಂದಿದ್ದು, ಬುಧವಾರ ರಾತ್ರಿ ಈ ಘಟನೆ ನಡೆದಿದೆ. ರಾತ್ರಿ ವೇಳೆ ಆಹಾರ ಅರಸಿ ಬಂದ 20 ರಿಂದ 25 ವರ್ಷ ಪ್ರಾಯದ ಗಂಡು ಕಾಡಾನೆ ಮೃತಪಟ್ಟಿದೆ. ಮೇಲ್ನೋ ಟಕ್ಕೆ ಕಾಡಾನೆ ಕೆಸರಿನಲ್ಲಿ ಹೂತುಕೊಂ ಡಿರುವ ಸ್ಥಿತಿಯಲ್ಲಿದ್ದು ಮೇಲೇಳಲು ಸಾಧ್ಯ ವಾಗದೆ ಉಸಿರುಗಟ್ಟಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ.

ಘಟನಾ ಸ್ಥಳಕ್ಕೆ ಎಸಿಎಫ್ ನವೀನ್ ಕುಮಾರ್, ಕುಶಾಲನಗರ ವಲಯ ಆರ್ ಎಫ್‌ಓ ರಕ್ಷಿತ್ ಮತ್ತು ಸಿಬ್ಬಂದಿಗಳು ಆಗಮಿಸಿ ಪರಿಶೀಲನೆ ನಡೆಸಿದರು. ಬಳಿಕ ಕಾಡಾನೆಯ ಕಳೇಬರವನ್ನು ಕ್ರೇನ್ ಸಹಾಯದಿಂದ ಕೆಸರಿನಿಂದ ಮೇಲೆತ್ತಿ ಅರಣ್ಯ ಪ್ರದೇಶಕ್ಕೆ ಕೊಂಡೊಯ್ಯಲಾಯಿತು. ತದನಂತರ ದಂತಗಳನ್ನು ಬೇರ್ಪಡಿಸಿ ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆ ದರು. ಬಳಿಕ ಇಲಾಖೆ ಪಶು ವೈದ್ಯರಾದ ಡಾ. ಮುಜೀಬ್ ಮರಣೋತ್ತರ ಪರೀಕ್ಷೆ ನಡೆಸಿದರು.

ಬಳಿಕ ಕಾಡಾನೆ ಕಳೇಬರವನ್ನು ಹೂಳಲಾಯಿತು. ಕಾಡಾನೆಯ ಮರಣೋತ್ತರ ಪರೀಕ್ಷೆ ಬಳಿಕ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ಅರಣ್ಯ ಇಲಾಖಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ ಜೂ.4–ಪೊನ್ನಂಪೇಟೆ 66/11 ಕೆವಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ಫೀಡರ್ ನಿರ್ವಹಣೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಈ ಕೇಂದ್ರದಿಂದ ಹೊರಹೊಮ್ಮುವ ಎಫ್1–ನಲ್ಲೂರು, ಎಫ್2–ಬಾಳೆಲೆ, ಎಫ್16–ದೇವನೂರು, ಎಫ್14–ಕಿರಗೂರು ಫೀಡರ್ ನಲ್ಲಿ ಜೂ.5 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಾಗುವ ಗ್ರಾಮಗಳಾದ ಪೊನ್ನಂಪೇಟೆ, ಕಿರಗೂರು, ನಲ್ಲೂರು, ಬೆಸಗೂರು, ಪೊನ್ನಪ್ಪಸಂತೆ, ಬೀಳೂರು, ಕೊಟ್ಟಗೇರಿ, ಸುಳುಗೋಡು, ಬಾಳೆಲೆ, ನಿಟ್ಟೂರು, ರಾಜಾಪುರ, ಕಿಸ್ತೂರು, ಮಳಲುಕೊಟೆ, ಕಾರ್ಮಾಡು, ಜಾಗಲೆ, ಮತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಜೂ.10,ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ: ಕರ್ನಾಟಕ ಲೋಕಾಯುಕ್ತ ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಜೂ.10ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸೋಮವಾರ ಪೇಟೆ ತಾಲೂಕು ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ಸ್ವೀಕರಿಸಲಿದ್ದಾರೆ ಭರ್ತಿ ಮಾಡಿದ ಮತ್ತು ನೋಟರಿಯಿಂದ ಆಫಿಡೆವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದೆ. ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ದೂ.ಸಂ.08272–295297 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಕೊಡಗು ಜಿಲ್ಲಾ ಹಿಂದುಳಿದ ಒಕ್ಕಲಿಗರ ಸಂಘದ ಅಧ್ಯಕ್ಷರ ನೇಮಕ



ವಿರಾಜಪೇಟೆ: ಕೊಡಗು ಜಿಲ್ಲಾ ಹಿಂದುಳಿದ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ವಿರಾಜಪೇಟೆ ಅಮ್ಮತ್ತಿಯ ಕಣ್ಣಂಗಾಲದ ಕೆ.ಎಸ್.ಗೋಪಾಲಕೃಷ್ಣ ಅವರನ್ನು ನೇಮಿಸಿ ರಾಜ್ಯಾಧ್ಯಕ್ಷ ಹೆಚ್.ಪಿ.ಸೋಮಶೇಖರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇತ್ತೀಚೆಗೆ ರಾಜ್ಯಾಧ್ಯಕ್ಷರಾದ ಸೋಮಶೇಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೊಡಗು ಜಿಲ್ಲೆಯ ಹಿಂದುಳಿದ ಬಡ ಒಕ್ಕಲಿಗರನ್ನು ಸಂಪೂರ್ಣ ರಕ್ಷಿಸಲು ಮತ್ತು ಸರಕಾರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಕೆ.ಎಸ್.ಗೋಪಾಲಕೃಷ್ಣ ಅವರನ್ನು ನೇಮಕಮಾಡಿ ಅವರಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಹೋಟೆಲ್ ಮಾಲಕಿ ಮೇಲೆ ಹಲ್ಲೆ ಪ್ರಕರಣಕ್ಕೆ ಟ್ವಿಸ್ಟ್

ಹೋಟೆಲ್ ಮಾಲೀಕ ತಲವಾರ್ ಹಿಡಿದು ಪ್ರವಾಸಿಗರಿಗೆ ಬೆದರಿಕೆ

ಸಾಮಾಜಿಕ ಜಾಲತಾಣದಲ್ಲಿ ವೀಡಿಯೊ ವೈರಲ್



ಮಡಿಕೇರಿ: ನಗರದ ಹೊರ ವಲಯದ ನಂದಿಮೊಟ್ಟೆ ಬಳಿ ಜೂ.2ರ ಸಂಜೆ ಹೋಟೆಲ್‌ಗೆ ಆಗಮಿಸಿದ ಪ್ರವಾಸಿಗರು ಕ್ಷುಲ್ಲಕ ಕಾರಣಕ್ಕೆ ಹೊಟೇಲ್ ಮಾಲಕಿಯ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ ಎಂಬ ಪ್ರಕರಣ ಮತ್ತೊಂದು ತಿರುವು ಪಡೆದಿದೆ.

ಹೊಟೇಲ್ ಮಾಲೀಕ ಅಗಸ್ಟಿನ್ ಎಂಬವರು ತಲವಾರ್ ಹಿಡಿದು ಪ್ರವಾಸಿಗರಿಗೆ ಬೆದರಿಕೆ ಒಡ್ಡಿದ ವೀಡಿಯೊ ದೃಶ್ಯಗಳನ್ನು ಹೊಟೇಲ್‌ಗೆ ಬಂದಿದ್ದ ಪ್ರವಾಸಿಗರು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿಕೊಂಡಿದ್ದು, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಹಿನ್ನೆಲೆಯಲ್ಲಿ ಹೊಟೇಲ್ ಮಾಲೀಕ ಅಗಸ್ಟಿನ್ ವಿರುದ್ದವೂ ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಪ್ರಕರಣ ದಾಖಲಿದಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಮಡಿಕೇರಿ ಹೊರವಲಯದ ಪ್ರವಾಸಿ ತಾಣಗಳಾದ ಅಬ್ಬಿಫಾಲ್ಸ್ ಮತ್ತು ಮಾಂದಲ್ ಪಟ್ಟಿಗೆ ತೆರಳುವ ನಂದಿಮೊಟ್ಟೆ ಬಳಿ ಅಗಸ್ಟೀನ್ ಮತ್ತು ಹ್ಯಾಗ್ನೀಸ್ ಎಂಬವರು ಹೋಟೆಲ್ ನಡೆಸುತ್ತಿದ್ದು ಮಂಗಳವಾರ ಸಂಜೆ 4 ಗಂಟೆ ಸಮಯದಲ್ಲಿ ಕಾರಿನಲ್ಲಿ ಪ್ರವಾಸಿಗರು ಆಗಮಿಸಿದ್ದರು. ಬಳಿಕ ಕ್ಷುಲ್ಲಕ ವಿಚಾರಕ್ಕೆ ಪ್ರವಾಸಿಗರು ಮತ್ತು ಹೋಟೆಲ್ ಮಾಲೀಕರ ನಡುವೆ ಗಲಾಟೆ ನಡೆದಿದ್ದು, ಈ ಕುರಿತು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮೇಕೆದಾಟು ಅಣೆಕಟ್ಟು ಕಾಮಗಾರಿ ಆರಂಭಿಸಿ

ಜಿಲ್ಲಾಭಿವೃದ್ಧಿ ಹೋರಾಟ ಸಮಿತಿ ಆಗ್ರಹ



ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ಜೂ.4– ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ಆಕ್ಷೇಪವೆತ್ತಿರುವುದು ಖಂಡನೀಯ, ಕರ್ನಾಟಕ ಸರ್ಕಾರ ತಮಿಳುನಾಡು ಆಕ್ಷೇಪಕ್ಕೆ ಮಣಿಯದೇ ಮೇಕೆದಾಟು ಅಣೆಕಟ್ಟು ನಿರ್ಮಾಣ ಕಾಮಗಾರಿ ಆರಂಭಿಸಬೇಕು ಎಂದು ಜಿಲ್ಲಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣ ಸಂಬಂಧ 2025ನವೆಂಬರ್‌ನಲ್ಲಿ ಪ್ರಕಟಿಸಿದ್ದ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ತಮಿಳುನಾಡು ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿತ್ತು. ಆದರೆ ಸುಪ್ರೀಂಕೋರ್ಟ್ ತಮಿಳುನಾಡು ಅರ್ಜಿಯನ್ನು ವಜಾಗೊಳಿಸಿತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕಾವೇರಿ ನೀರು ನಿಯಂತ್ರಣ ಸಮಿತಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದ ನಂತರವೇ ಕೇಂದ್ರ ಜಲ ಆಯೋಗ ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಅನುಮತಿ ನೀಡಿದೆ. ವಾಸ್ತವಾಂಶ ಹೀಗಿದ್ದರೂ, ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್' ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುವುದಾದರೂ ಏಕೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿನ ಒತ್ತಾಯಕ್ಕೆ ಮಣಿಯದೇ, ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ರಾಜ್ಯಸರ್ಕಾರಕ್ಕೆ ಆದೇಶ ನೀಡಬೇಕು ಎಂದು ಪ್ರಧಾನಮಂತ್ರಿ ನರೇಂದ್ರಮೋದಿ ಹಾಗೂ ಜಲಸಂಪನ್ಮೂಲ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಬೆಳೆಯುತ್ತಿರುವ ಬೆಂಗಳೂರು ನಗರ ಸೇರಿದಂತೆ ಇತರೇ ಪಟ್ಟಣ, ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದು, ಹರಿದು ಹೋಗುವ ಮಳೆನೀರನ್ನು ಸಂಗ್ರಹಮಾಡಿಕೊಳ್ಳುವ ಉದ್ದೇಶದ ಹಿನ್ನೆಲೆಯಲ್ಲಿ ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಅನುಮತಿ ಕೊಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಪದಾಧಿಕಾರಿಗಳು, ಶಾಸಕರು, ಸಂಸದರ ಜೊತೆ ವಿಪಕ್ಷ ನಾಯಕರಾಗಿದ್ದ ಡಿ.ಕೆ.ಶಿವ ಕುಮಾರ್ ಅವರು ಕಳೆದ 4ವರ್ಷದ ಹಿಂದೆ ಬೆಂಗಳೂರಿನಿಂದ ಮೇಕೆದಾಟುವರಗೆ ಪಾದಯಾತ್ರೆ ಮಾಡಿ, ಕೇಂದ್ರಸರ್ಕಾರದ ಗಮನಸೆಳೆದಿದ್ದರು. ಪ್ರಸ್ತುತ ಡಿಕೆಶಿ ರಾಜ್ಯದ ಮುಖ್ಯಮಂತ್ರಿಯಾಗಿದ್ದು, ಬೇಗನೆ ಮೇಕೆದಾಟು ಅಣೆಕಟ್ಟು ನಿರ್ಮಾಣ ಕಾಮಗಾರಿ ಆರಂಭಿಸಬೇಕು, ವಿಳಂಬ ಮಾಡಿದರೆ ಮೇಕೆದಾಟು ಪ್ರದೇಶದಲ್ಲಿ ವಿವಿಧಸಂಘಟನೆಗಳ ಜೊತೆ ಜಿಲ್ಲಾಭಿವೃದ್ಧಿ ಹೋರಾಟ ಸಮಿತಿ ದೊಡ್ಡಮಟ್ಟದ ಹೋರಾಟಕ್ಕೆ ಸಜ್ಜಾಗಲಿದೆ ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಮರಿಯಾಲ ಲಿಂಗಪ್ಪಸ್ವಾಮಿ, ಪುಟ್ಟಸ್ವಾಮಿ, ಭವಾನಿ ಶಂಕರ್ ಕಾರ್ಯದರ್ಶಿ ಅಮ್ಮನಪುರ ನಂಜುಂಡಸ್ವಾಮಿ ಹಾಜರಿದ್ದರು.

ಸರ್ಕಾರದ ವತಿಯಿಂದ ಶ್ರೀ ವಿದ್ಯಾರಣ್ಯರ ಜಯಂತಿ ಆಚರಿಸಬೇಕು

ಸಂಸ್ಕೃತಿ ಚಿಂತಕ ಸುರೇಶ್ ಎನ್ ಋಗ್ವೇದಿ ಮನವಿ



ಕರ್ನಾಟಕ ರಾಜ್ಯ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರ ಜಯಂತಿ ಆಚರಣೆ.

ಚಾಮರಾಜನಗರ: ಕರ್ನಾಟಕ ರಾಜ್ಯ ಸಂಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರ ಜಯಂತಿಯನ್ನು ರಾಜ್ಯದಲ್ಲಿ ಸರ್ಕಾರದ ವತಿಯಿಂದ ಆಚರಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಸಂಸ್ಕೃತಿ ಚಿಂತಕ ಸುರೇಶ್ ಎನ್ ಋಗ್ವೇದಿ ಮನವಿ ಮಾಡಿದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೂಲಕ ಕನ್ನಡಿಗರ ಸಾಹಿತ್ಯ, ಕಲೆ, ಸಂಸ್ಕೃತಿ, ಪರಂಪರೆ, ವಾಸ್ತುಶಿಲ್ಪದ ಮಹತ್ವವನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದ ಮಹಾನ್ ಚಿಂತಕರು, ಸಾಹಿತಿಗಳು, ಜಗದ್ಗುರುಗಳಾದ ವಿದ್ಯಾರಣ್ಯರ ಜಯಂತಿಯ ಮೂಲಕ ಯುವ ಜನಾಂಗಕ್ಕೆ ಮಹರ್ಷಿಗಳ ಸಾಧನೆ ಹಾಗೂ ಮಾರ್ಗದರ್ಶನಗಳ ಸಂದೇಶಗಳನ್ನು ತಿಳಿಸುವ ಮೂಲಕ ಸದೃಢ ಕರ್ನಾಟಕವನ್ನು ನಿರ್ಮಿಸಬಹುದು ಎಂದು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಘ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ನಡೆದ ಜಗದ್ಗುರು, ತತ್ವಜ್ಞಾನಿ ವಿದ್ಯಾರಣ್ಯ ಮಹರ್ಷಿಗಳ ದಿವ್ಯ ಸಂದೇಶಗಳು ಮತ್ತು ಕೊಡುಗೆಗಳ ಕುರಿತು ಮಾತನಾಡುತ್ತಾ 13ನೇ ಶತಮಾನದಲ್ಲಿ ಹರಿಹರ ಮತ್ತು ಬುಕ್ಕರಾಯರ ಮೂಲಕ ಕನ್ನಡ ಸಾಮ್ರಾಜ್ಯವನ್ನು ಸ್ಥಾಪಿಸಿ ಇಡೀ ದಕ್ಷಿಣ ಭಾರತದಲ್ಲಿ ಕನ್ನಡ ಸಂಸ್ಕೃತಿಯನ್ನು ಮತ್ತು ಪರಂಪರೆಯನ್ನು ಸಂರಕ್ಷಿಸಿ ಭಾರತೀಯ ಸನಾತನ ಧರ್ಮವನ್ನು ಉಳಿಸಿ ಬೆಳೆಸಿದ ಕೀರ್ತಿ ಶ್ರೀ ವಿದ್ಯಾರಣ್ಯರಿಗೆ ಸಲ್ಲುತ್ತದೆ. ವಿಜಯನಗರ ಸಾಮ್ರಾಜ್ಯ ವಿಶ್ವದಲ್ಲಿ ಮರೆಯಲಾಗದ ಸಾಮ್ರಾಜ್ಯವೆಂದು ಪ್ರಸಿದ್ಧಿಯಾಗಿದೆ. ಆಡಳಿತ ಸೇವೆ ಆಧ್ಯಾತ್ಮ ಧರ್ಮ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಕಲೆ ವಾಸ್ತುಶಿಲ್ಪ, ಚಿತ್ರಕಲೆ, ನೃತ್ಯ ಕಲೆ ಹೀಗೆ ಹಲವು ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯ ಮೂಲಕ ಇಡೀ ವಿಶ್ವಕ್ಕೆ ಪ್ರಸಿದ್ಧವಾದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲು ಮಾರ್ಗದರ್ಶನವನ್ನು ನೀಡಿ ಕರ್ನಾಟಕ ರಾಜ್ಯ ಸಂಸ್ಥಾಪನಾಚಾರ್ಯ ಎಂಬ ಗೌರವಕ್ಕೆಪಾತ್ರರಾದ ವಿದ್ಯಾರಣ್ಯರ ಜಯಂತಿ ಇಡೀ ರಾಜ್ಯದ ಎಲ್ಲೆಡೆ ವೈಭವದಿಂದ ನಡೆಯುವ ಮೂಲಕ ಸಂಸ್ಕೃತಿ ಪರಂಪರೆಯ ದಿವ್ಯ ಸಂದೇ ಶಗಳು ತಲಪಬೇಕು ಎಂದು ಅವರು ಹೇಳಿದರು.

ಕಸಾಪ ನಿರ್ದೇಶಕಉಲ್.ಶಿವಲಿಂಗ ಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕುಮಾರ್, ಸುರೇಶ್, ಮುರುಗೇಶ್, ದೊಡ್ಡರಾಜು, ಸಿದ್ದೇಶ್, ಗಣೇಶ್, ಮನೋಜ್, ಹರಿಹರನ್, ಯೋಗೀಶ್, ವೇದಾಂತ ಇತರರಿದ್ದರು.

ಉಡ ಸಾಗಿಸುತ್ತಿದ್ದ ಇಬ್ಬರ ಬಂಧನ



ಉಡವನ್ನು ಸಾಗಿಸುತ್ತಿದ್ದ ಇಬ್ಬರನ್ನು ಸಿಐಡಿ ಅರಣ್ಯ ಪೊಲೀಸರು ಬಂಧಿಸಿರುವುದು.

ಕೊಳ್ಳೇಗಾಲ, ಜೂ.4– ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್‌ನ ರಸ್ತೆಯಿಂದ ಅಣತಿ ದೂರದಲ್ಲಿ ಅಕ್ರಮವಾಗಿ ವನ್ಯಜೀವಿ ಉಡವನ್ನು ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಹುಣಸೂರಿನ ಸರ್ದಾರ್(45) ಮತ್ತು ರಫಿ(44) ಬಂಧಿತರು, ಇವರಿಂದ ಪಂಜರದಲ್ಲಿ ರಟ್ಟಿನ ಮೂಲಕ ಅಡಗಿಸಿದ್ದ ಜೀವಂತ ಉಡವನ್ನು ಜಪ್ತಿ ಮಾಡಲಾಗಿದೆ.

ಆರೋಪಿಗಳು ಸತ್ತೇಗಾಲ ಹ್ಯಾಂಡ್ ಪೋಸ್ಟ್‌ನ ಕಾವೇರಿ ನದಿ ದಡದ ಬಳಿ ಉಡವನ್ನು ಹಿಡಿದು ಮಾರಾಟಕ್ಕೆ ಸಾಗಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ಅರಣ್ಯ ಸಂಚಾರಿ ದಳದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅವಿನಾಶ್, ಮುಖ್ಯ ಪೇದೆಗಳಾದ ಸ್ವಾಮಿ, ರಾಮಚಂದ್ರ, ಲತಾ, ಪ್ರಭಾಕರ್, ಜಮೀಲ್ ಇನ್ನಿತರರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಜೀವಂತ ಉಡವನ್ನು ಅರಣ್ಯ ಇಲಾಖಾಧಿಕಾರಿಗಳಿಗೆ ಹಸ್ತಾಂತರಿಸಿದ್ದು ಬಂಧಿತ ಆರೋಪಿಯನ್ನು ಸಿಐಡಿ ಅರಣ್ಯ ಸಂಚಾರಿ ದಳದ ಕಚೇರಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಧ್ಯವರ್ತಿ ಹಾವಳಿ ಖಂಡಿಸಿ ಕರವೇ ಪ್ರತಿಭಟನೆ



ಭ್ರಷ್ಟಾಚಾರ, ವಿಳಂಬ ನೀತಿ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ.

ಕೊಳ್ಳೇಗಾಲ: ನಗರಸಭೆಯ ದುರಾಡಳಿತ, ಭ್ರಷ್ಟಾಚಾರ, ವಿಳಂಬ ನೀತಿ ಮತ್ತು ಮಧ್ಯವರ್ತಿಗಳ ಹಾವಳಿ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣ್ ಗೌಡ ಬಣದ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿ ಅಗತ್ಯ ಕ್ರಮವಹಿಸುವಂತೆ ನಗರಸಭಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟ ಕರವೇ ಪದಾಧಿಕಾರಿಗಳು ನಗರ ಸಭೆ ಆಡಳಿತ ವಿರುದ್ಧ ಘೋಷಣೆ ಕೂಗುವ ಮೂಲಕ ಡಾ.ರಾಜಕುಮಾರ್, ಡಾ.ಅಂಬೇಡ್ಕರ್ ರಸ್ತೆ ಮೂಲಕ ನಗರಸಭಾ ಕಚೇರಿಗೆ ತೆರಳಿ ಪ್ರಭಾರ ಪೌರಾಯುಕ್ತರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದರು.

ಸ್ಥಳೀಯ ನಗರಸಭೆಯಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಭ್ರಷ್ಟಾಚಾರ, ಅಧಿಕಾರಿಗಳ ಲಂಚಾವತಾರ ಮತ್ತು ಸಾರ್ವಜನಿಕ ಕೆಲಸಗಳಲ್ಲಿನ ತೀವ್ರ ನಿರ್ಲಕ್ಷ್ಯವನ್ನು ಖಂಡಿಸಿ ಪ್ರತಿಭಟನೆ ಮಾಡಿದರು.

ಖಾತೆ ಬದಲಾವಣೆ, ಕಟ್ಟಡ ನಕ್ಷೆ ಮಂಜೂರಾತಿ, ಜನನ–ಮರಣ ಪ್ರಮಾಣಪತ್ರ ಸೇರಿದಂತೆ ವಿವಿಧ ಅಗತ್ಯ ಸೇವೆಗಳಿಗಾಗಿ ಅರ್ಜಿ ಸಲ್ಲಿಸಿ ಸಾರ್ವಜನಿಕರು ಅಲೆದಾಡುತ್ತಿದ್ದಾರೆ. ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು, ಪ್ರತಿಯೊಂದು ಸಣ್ಣ ಕೆಲಸಕ್ಕೂ ಸಾರ್ವಜನಿಕರಿಂದ ನೇರವಾಗಿ ಅಥವಾ ಪರೋಕ್ಷವಾಗಿ ಲಂಚಕ್ಕೆ ಬೇಡಿಕೆ. ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ ಹಣ ಸುಲಿಗೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹೆಚ್‌ಎನ್ ಮಂಜೇಶ್, ಮೆಹಬೂಬ್ ಪಾಷ, ರೂಪೇಶ್, ಹೇಮಂತ್,ಅಸಾದ್, ಅಭಿಷೇಕ್.ಆರ್, ಶಾಂತರಾಜು, ಬಸವಣ್ಣ ಮುಳ್ಳೂರು, ಇನ್ನಿತರಿದ್ದರು.

ಕಾರು–ಪಿಕ್ ಅಪ್ ವಾಹನ ಡಿಕ್ಕಿ; ಏಳು ತಿಂಗಳ ಮಗು, ವೃದ್ಧ ಸಾವು



ಚಾಮರಾಜನಗರ: ಕಾರು ಹಾಗೂ ಪಿಕ್ ಅಪ್ ವಾಹನದ ನಡುವೆ ಡಿಕ್ಕಿಯಾಗಿ ಏಳು ತಿಂಗಳ ಮಗು ಸೇರಿದಂತೆ ಇಬ್ಬರು ಮೃತಪಟ್ಟ ಘಟನೆ ಚಾಮರಾಜನಗರ ತಾಲೂಕಿನ ದೊಡ್ಡಮೂಡಹಳ್ಳಿ ಕ್ರಾಸ್ ನಲ್ಲಿ ನಡೆದಿದೆ. ಬೆಂಗಳೂರು ಮೂಲದ ಮುಬಾರಕ್ (70) ಹಾಗೂ 7 ತಿಂಗಳ ಗಂಡು ಮಗು ಮೃತಪಟ್ಟವರು.

ತಮಿಳುನಾಡು ಕಡೆಗೆ ತೆರಳುತ್ತಿದ್ದ ಬೊಲೆರೋ ಪಿಕ್ ಅಪ್ ಹಾಗೂ ತಮಿಳುನಾಡಿನಿಂದ ಬೆಂಗಳೂರಿನತ್ತ ಹೊರಟಿದ್ದ ಎರ್ಟಿಗಾ ಕಾರಿನ ನಡುವೆ ಅಪಘಾತ ಸಂಭವಿಸಿದೆ. ಡಿಕ್ಕಿ ಪರಿಣಾಮ ಇಬ್ಬರು ಮೃತಪಟ್ಟಿದ್ದು, ಮಕ್ಕಳು ಸೇರಿದಂತೆ ನಾಲ್ವರು ತೀವ್ರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಆಂಬ್ಯುಲೆನ್ಸ್ ಮೂಲಕ ಚಾಮರಾಜನಗರ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಈ ಸಂಬಂಧ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ಯೇಕ ಎಸ್ಟಿ ಹಿತರಕ್ಷಣಾ ಸಮಿತಿ ಸಭೆ ಕರೆಯುವಂತೆ ಒತ್ತಾಯಿಸಿ ಡಿಸಿಗೆ ಮನವಿ




ಜಿಲ್ಲಾ ನಾಯಕ ಜನಾಂಗದ ಹಿತರಕ್ಷಣಾ ಸಮಿತಿ ವತಿಯಿಂದ ಡಿಸಿಗೆ ಮನವಿ.

ಚಾಮರಾಜನಗರ: ಪತ್ಯೇಕವಾಗಿ ಪರಿಶಿಷ್ಟ ಪಂಗಡದ ಹಿತರಕ್ಷಣಾ ಸಮಿತಿ ಸಭೆಯನ್ನು ಕರೆಯುವಂತೆ ಒತ್ತಾಯಿಸಿ ಜಿಲ್ಲಾ ನಾಯಕ ಜನಾಂಗದ ಹಿತರಕ್ಷಣಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎರಡು ಸಮುದಾಯಗಳ ಸಭೆಯನ್ನು ಒಟ್ಟಿಗೆ ಕರೆಯುವುದರಿಂದ ನಮ್ಮ ಸಮುದಾಯ ವಿಷಯಗಳ ಸಮಸ್ಯೆಗಳು, ಕುಂದುಕೊರತೆಗಳನ್ನು ಚರ್ಚಿಸಲು ಕಾಲಾವಕಾಶ ಇರುವುದಿಲ್ಲ. ಬರೀ ಗೊಂದಲದಲ್ಲಿ ಸಭೆ ಮುಗಿಯುತ್ತದೆ. ಯಾವುದೇ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ ಹಾಗಾಗಿ ಪರಿಶಿಷ್ಟ ಪಂಗಡದ ಹಿತರಕ್ಷಣಾ ಸಮಿತಿ ಸಭೆಯನ್ನು ಪತ್ಯೇಕವಾಗಿ ಕರೆಯುವಂತೆ ಜಿಲ್ಲಾ ನಾಯಕ ಜನಾಂಗದ ಹಿತರಕ್ಷಣಾ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಬುಲೆಟ್ ಚಂದ್ರು, ಕೃಷ್ಣನಾಯಕ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಸಮಿತಿಯ ಚಂದ್ರು ಹರದನಹಳ್ಳಿ, ಶಕುಂತಲಾ, ಸುಬ್ರಹ್ಮಣ್ಯ, ಗಣೇಶ್, ಬಂಗಾರನಾಯಕ ಕಿಲಗೆರೆ, ಜಯಕುಮಾರ್ ಇತರರು ಹಾಜರಿದ್ದರು.

ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಬಿದ್ದ ಚಿರತೆ



ಚಾಮರಾಜನಗರ: ಅರಣ್ಯ ಇಲಾಖೆ ಸಿಬ್ಬಂದಿ ಇಟ್ಟಿದ್ದ ಬೋನಿನಲ್ಲಿ ಗಂಡು ಚಿರತೆಯೊಂದು ಸೆರೆಯಾಗಿರುವ ಘಟನೆ ತಾಲೂಕಿನ ಹರದನಹಳ್ಳಿ ಹೋಬಳಿಯ ಹೊನ್ನಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಪ್ರಾದೇಶಿಕ ವಲಯ ವ್ಯಾಪ್ತಿಯ ಹರದನಹಳ್ಳಿ ಹೋಬಳಿಯ ಹೊನ್ನಹಳ್ಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆಯ ಹಾವಳಿ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಬೋನನ್ನು ಅಳವಡಿಸಲಾಗಿತ್ತು. ಬೋನಿಗೆ ಗುರುವಾರ ಸುಮಾರು 5 ವರ್ಷದ ಗಂಡು ಚಿರತೆಯೊಂದು ಬಿದ್ದಿದೆ. ವಿಷಯ ತಿಳಿದ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಚಿರತೆಯನ್ನು ಸುರಕ್ಷಿತವಾಗಿ ಸ್ಥಳಾಂತರ ಮಾಡಿದ್ದಾರೆ. ಪಶುವೈದ್ಯರ ತಪಾಸಣೆ ನಡೆಸಿದ ನಂತರ ಚಿರತೆಯು ಆರೋಗ್ಯವಾಗಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಮಾರ್ಗ ಸೂಚಿಗಳ ಅನ್ವಯ ಸೂಕ್ತ ಅರಣ್ಯ ಪ್ರದೇಶದಲ್ಲಿ ಸುರಕ್ಷಿತವಾಗಿ ಬಿಡುಗಡೆ ಮಾಡಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



'3ಡಿ'ಯಲ್ಲಿ ಬರ್ತಿದೆ 'ಕೊರಗಜ್ಜ'



ದಕ್ಷಿಣ ಕನ್ನಡ ಭಾಗದ ಜನರ ಆರಾಧ್ಯ ದೈವವಾದ ಕೊರಗಜ್ಜನ ಜೀವನ ಚರಿತ್ರೆ, ಪವಾಡಗಳನ್ನು ತೆರೆದಿಡುವ 'ಕೊರಗಜ್ಜ' ಚಿತ್ರವನ್ನು ಸುಧೀರ್ ಅತ್ತಾವರ್ ಕಥೆ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಸಣ್ಣ ಪ್ರಮಾಣದಲ್ಲಿ ಪ್ರಾರಂಭ ವಾದ ಈ ಚಿತ್ರ ಇದೀಗ 45 ಕೋಟಿ ರೂ.ಗಳ ಬಿಗ್‌ಬಜೆಟ್‌ನಲ್ಲಿ ತಯಾರಾಗುತ್ತಿದೆ, ಚಿತ್ರವನ್ನು ಮತ್ತಷ್ಟು ವೈಭವವಾಗಿಸಲು ಮುಂದಾದ ನಿರ್ಮಾಪಕ ತ್ರಿವಿಕ್ರಮ ಸಫಲ್ಯ ಅವರು ಇದೀಗ ಚಿತ್ರಕ್ಕೆ '3 ಡಿ' ಮೆರಗನ್ನು ತುಂಬಿಸಿದ್ದಾರೆ. ಬಿಡುಗಡೆ ಸನ್ನಿಹಿತವಾದಂತೆ ಚಿತ್ರದ ಪ್ರಚಾರವೂ ಜೋರಾಗುತ್ತಿದೆ, ಇತ್ತೀಚೆಗೆ ಕೊರಗಜ್ಜ ದೈವದ ಅಗೆಲು ಸೇವೆಯನ್ನು, ನಿರ್ದೇಶಕರಿಗೆ ನಿರ್ಮಾಪಕರು ಕೊಡುಗೆಯಾಗಿ ನೀಡಿದ ಹೊಸ ಮನೆಯಲ್ಲಿ ಪತ್ರಕರ್ತರ ಸಮ್ಮುಖದಲ್ಲಿ ನಡೆಸಲಾಯಿತು.

ಈ ವೇಳೆ ನಿರ್ದೇಶಕ ಸುಧೀರ್ ಅತ್ತಾವರ್ ಮಾತನಾಡಿ, ಈಗ ಕೊಚ್ಚಿ ಮತ್ತು ಚೆನ್ನೈನಲ್ಲಿ ಚಿತ್ರದ 3ಡಿ ಕೆಲಸಗಳು ನಡೆಯುತ್ತಿದೆ. ನಮ್ಮ ಚಿತ್ರ ತಾಂತ್ರಿಕವಾಗಿ ಯಾವುದೇ ಅಂತರಾಷ್ಟ್ರೀಯ ಸಿನಿಮಾಗೂ ಕಡಿಮೆ ಇಲ್ಲದಂತೆ ಮೂಡಿಬರುತ್ತಿದೆ, ಸದ್ಯದಲ್ಲೇ ರಿಲೀಸ್ ಮಾಡುತ್ತಿದ್ದೇವೆ ಎಂದು ಹೇಳಿದರು. ಇದಕ್ಕೆ ಪೂರಕವಾಗಿ ಅಂತಾರಾಷ್ಟ್ರೀಯ ವಿತರಣಾ ಸಂಸ್ಥೆಗಳು ಚಿತ್ರವನ್ನು ರಿಲೀಸ್ ಮಾಡಲು ಆಸಕ್ತಿ ತೋರಿಸುತ್ತಿರುವುದಾಗಿ ನಿರ್ಮಾಪಕ ತ್ರಿವಿಕ್ರಮ ಸಪಲ್ಯ ಹೇಳಿದರು. ಈಗಾಗಲೇ ಕನ್ನಡ ಸೇರಿದಂತೆ ಆರು ಭಾಷೆಗಳಲ್ಲಿ ಸಿದ್ಧವಾಗುತ್ತಿರುವ ಈ ಚಿತ್ರವನ್ನು ಅಸ್ಸಾಮಿ, ಚೈನಿಸ್ ಮತ್ತು ಇಂಗ್ಲಿಷ್ ಭಾಷೆಯಲ್ಲೂ ರಿಲೀಸ್ ಮಾಡುತಿದ್ದೇವೆ ಎಂದು ಅವರು ತಿಳಿಸಿದರು.

ಹಿರಿಯ ನಟಿ ಭವ್ಯ ಕೊರಗಜ್ಜ ದೈವ ಇಷ್ಟಪಡುವ ಕುಚಲಕ್ಕಿ ಅನ್ನ, ಹುರುಳಿ-ಬಸಳೆಸೊಪ್ಪಿನ ಸಾರು, ಬಂಗುಡೆ ಮೀನಿನ ಗಸಿ, ಮಿಡಿಮಾವಿನ ಉಪ್ಪಿನಕಾಯಿ, ಕೋಳಿ ಸುಕ್ಕ, ಕಳ್ಳು ಇದನ್ನೆಲ್ಲ ಗೆರಸೆಯಲ್ಲಿಟ್ಟು ಅಜ್ಜನಿಗೆ ಸಮರ್ಪಿಸಿದರು. ಈವೇಳೆ ಮಾತನಾಡಿದ ಭವ್ಯ ಕೊರಗಜ್ಜ ಚಿತ್ರ ನನ್ನಲ್ಲಿರುವ ದೈವಭಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಚಿತ್ರದಲ್ಲಿ ನಾನು ಕೊರಗಜ್ಜನಿಗೆ ಪ್ರಪ್ರಥಮವಾಗಿ ಅಗೆಲುಸೇವೆ ನೀಡುವ ರಾಣಿ ಪಂಜಂದಾಯಿ ಪಾತ್ರ ನಿರ್ವಹಿಸಿದ್ದೆ. ಈಗ ನಿಜ ಜೀವನದಲ್ಲೂ ಕೊರಗಜ್ಜನಿಗೆ ಅಗೆಲುಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ ಎಂದರು, ಕಾರ್ಯಕಾರಿ ನಿರ್ಮಾಪಕ ಹಾಗೂ ಚಿತ್ರದ ಎಡಿಟರ್ ವಿದ್ಯಾಧರ್ ಶೆಟ್ಟಿ ಮಾತನಾಡುತ್ತ ಇದೇ ಆಗಸ್ಟ್‌ನಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಸಿದ್ದತೆ ಮಾಡಿಕೊಂಡಿರುವುದಾಗಿ ಹೇಳಿದರು. ಹಿರಿಯನಟಿ ಶೃತಿ, ಕಬೀರ್ ಬೇಡಿ ಕೂಡ ಚಿತ್ರದಲ್ಲಿ ನಟಿಸಿದ್ದಾರೆ, ಗೋಪಿ ಸುಂದರ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

'ದೊಡ್ಮನ್ಸ'ನ ಡ್ಯುಯೆಟ್ ಹಾಡು



ದೊಡ್ಮನ್ಸ ಚಿತ್ರದ ಮೂಲಕ ಶರತ್‌ಕೃಷ್ಣ ಮೊದಲಬಾರಿಗೆ ನಿರ್ದೇಶನದ ಜೊತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ. ರೇಶ್ಮಾ ಹಾಗೂ ಶಿಲ್ಪ ನಾಯಕಿಯರಾಗಿ ನಟಿಸಿದ್ದಾರೆ. ವೇದಿಕ್‌ವೀರಾ ಅವರ ನಿರ್ಮಾಣದ ಈ ಚಿತ್ರದ 'ಹಾಜರಿ ಹಾಕು ಈಗಲೇ' ಎಂಬ ಡ್ಯುಯೆಟ್ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ಹಳ್ಳಿ ಹುಡುಗನೊಬ್ಬ ಕಲಾವಿದನಾಗಬೇಕೆಂಬ ನೂರಾರು ಕನಸುಗಳನ್ನು ಕಟ್ಟಿಕೊಂಡು ಮಾಯಾನಗರಿ ಬೆಂಗಳೂರಿಗೆ ಬಂದಮೇಲೆ ಏನೇನೆಲ್ಲ ಪರಿಸ್ಥಿತಿ, ಕಠಿಣ ಸಂದರ್ಭಗಳನ್ನು ಎದುರಿಸುತ್ತಾನೆ ಎನ್ನುವುದೇ ಈ ಚಿತ್ರದ ತಿರುಳು.



ನಾಯಕ ಕಮ್ ನಿರ್ದೇಶಕ ಶರತ್‌ಕೃಷ್ಣ ಮಾತನಾಡಿ ಇದು ವಿಷ್ಣು ಅವರಿಗಾಗಿ ಎಸ್.ನಾರಾಯಣ್ ನಿರ್ದೇಶನ ಮಾಡಬೇಕಿದ್ದ ಟೈಟಲ್, ಅದೀಗ ನನಗೆ ಸಿಕ್ಕಿದೆ. ನಿರ್ಮಾಪಕರು ಚಿತ್ರಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಕನಸುಗಳನ್ನು ಕಟ್ಟಿಕೊಂಡು ಬೆಂಗಳೂರಿಗೆ ಬಂದ ಹುಡುಗ, ಆ ಕನಸನ್ನು ಈಡೇರಿಸಿಕೊಳ್ಳಲಾಗದೆ ಆಟೋ ಓಡಿಸಿಕೊಂಡಿರುತ್ತಾನೆ. ಮುಂದೆ ಬೇರೆಯವರ ಕನಸನ್ನು ನನಸಾಗಿಸಲು ಪ್ರಯತ್ನಿಸುತ್ತಾನೆ. ಆ ಮೂಲಕ ಆತ ಹೇಗೆ ದೊಡ್ಮನ್ಸ ಆಗ್ತಾನೆ. ದುಡ್ಡಿರೋರೆಲ್ಲ ದೊಡ್ಮನ್ಸರಲ್ಲ ಅಂತ ಹೇಳೋ ಚಿತ್ರವಿದು, ಆಟೋ ಚಾಲಕರಿಗಾಗಿ ಹುಬ್ಬಳ್ಳಿ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ರಾಜ್ಯದ 8 ಜಿಲ್ಲೆಗಳಲ್ಲಿ ಚಿತ್ರದ ಪ್ರೀಮಿಯರ್ ಶೋ ಏರ್ಪಡಿಸಿದ್ದೇವೆ, ಅದಕ್ಕೆಂದೇ ಒಂದು ಆಪ್ ರೆಡಿ ಮಾಡಿದ್ದೇವೆ, ಇದರ ಜತೆ ಲಕ್ಕಿಡಿಪ್‌ನಲ್ಲಿ ಗೆದ್ದ ಒಬ್ಬ ಆಟೋ ಚಾಲಕನಿಗೆ ಆಟೋ ಬಹುಮಾನವಿದೆ ಎಂದು ಹೇಳಿದರು.

ನಾಯಕಿ ರೇಶ್ಮಾ ಮಾತನಾಡಿ, ಸ್ನೇಹ ಎಂಬ ಮಧ್ಯಮವರ್ಗದ ಹುಡುಗಿಯ ಪಾತ್ರ ನನ್ನದು. ಆಕೆ ಆಟೋ ಡ್ರೈವರನ್ನು ಇಷ್ಟಪಟ್ಟಾಗ ಏನಾಗುತ್ತೆ ಅಂತ ನನ್ನ ಪಾತ್ರದ ಮೂಲಕ ಹೇಳಲಾಗಿದೆ ಎಂದರು.



ಭಜರಂಗಿ ಭಾಯಿಜಾನ್ ಮುನ್ನಿ ಈಗ ಹೇಗಿದ್ದಾರೆ ಗೊತ್ತಾ..!

ಸಲ್ಮಾನ್‌ಖಾನ್ ಅಭಿನಯದ ಸೂಪರ್‌ಹಿಟ್ ಭಜರಂಗಿ ಭಾಯಿಜಾನ್ ಚಿತ್ರದಲ್ಲಿ ನಟಿಸಿದ್ದ ಪುಟ್ಟಮಗು ಮುನ್ನಿ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ, ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರೋ ಆ ಪುಟ್ಟ ಹುಡುಗಿ ಜೂನ್ 3ರಂದು ತನ್ನ 18ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ಸಾವಿರಾರು ಮಕ್ಕಳ ಮಧ್ಯೆ ಆಡಿಷನ್‌ನಲ್ಲಿ ಆಯ್ಕೆಯಾಗಿದ್ದ ಹರ್ಷಾಲಿ, ಒಂದೇ ಒಂದು ಚಿತ್ರದಿಂದ ನ್ಯಾಷನಲ್ ಸ್ಟಾರ್ ಆಗಿ ಬೆಳೆಯುವ ಮೂಲಕ ತಮ್ಮ ಅದೃಷ್ಟವನ್ನೇ ಬದಲಿಸಿಕೊಂಡರು. ಒಂದೇ ಒಂದು ಡೈಲಾಗ್ ಇಲ್ಲದ ಮಗುವಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಹರ್ಷಾಲಿ ತನ್ನ ಮುಗ್ಧ ಅಭಿನಯದಿಂದಲೇ ದೇಶಾದ್ಯಂತ ಸಿನಿ ಪ್ರೇಕ್ಷಕರ ಮನವನ್ನು ಗೆದ್ದಿದ್ದರು. ಈಗ ಹರ್ಷಾಲಿಯ ರೂಪಾಂತರವನ್ನು ನೋಡಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ.


ಹರ್ಷಾಲಿ ಭಜರಂಗಿ ಭಾಯಿಜಾನ್ ಚಿತ್ರದ ನಂತರ ಯಾವುದೇ ಚಿತ್ರದಲ್ಲಿ ಕಾಣಿಸಿಕೊಂಡಿದ್ದಿಲ್ಲ, ಸ್ಟಡಿ ಜತೆಗೆ ಶಾಸ್ತ್ರೀಯ ನೃತ್ಯದಲ್ಲಿ ಪರಿಣತಿ ಹೊಂದಿರುವ ಹರ್ಷಾಲಿ ಇನ್‌ಸ್ಟಾಗ್ರಾಮ್‌ನಲ್ಲಿ ಸಕ್ರಿಯರಾಗಿದ್ದು, ಕಥಕ್ ಮೇಲಿನ ಅವರ ಪ್ರೀತಿ ಆಗಾಗ ವ್ಯಕ್ತವಾಗುತ್ತದೆ. ಅಂದರೆ, ಅವರು ವರ್ಷಗಳ ಕಾಲ ನಟನೆಯಿಂದ ದೂರವಿದ್ದರೂ, ತಮ್ಮ ನೃತ್ಯ ಪಯಣವನ್ನು ಮುಂದುವರಿಸಿದ್ದಾರೆ.

ಹರ್ಷಾಲಿ ಅವರು ನಂದ ಮೂರಿ ಬಾಲಕೃಷ್ಣ ನಟನೆಯ ಅಖಂಡ 2 ಚಿತ್ರದ ಮೂಲಕ ನಟನೆಗೆ ಮರಳಿದ್ದಾರೆ.

ಸಿನಿಪದಬಂಧ-629



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರಮೇಶ್ ಅಭಿನಯದಲ್ಲಿ ವಿಜ್ಞಾನಿ ಇದ್ದಾನೆ 4
4. ಶಂಕರ್ ನಾಗನಿಗೆ ಆದ ಮಾಗದ ಹುಣ್ಣು 5
6. ಹಣದ ಭೂತ 5
8. ಡಾ. ರಾಜ್‌ಕುಮಾರ್ ತ್ರಿಪಾತ್ರಾಭಿನಯದ ಚಿತ್ರ 5
10. ದೇವರಾಜ್ ನಾಟಕದ ಗೀಳು ಅಂಟಿಸಿಕೊಂಡ ಚಿತ್ರ 5
15. ಕುಮಾರ್ ಗೋವಿಂದ್, ಶ್ರುತಿ, ಶ್ವೇತಾ ಅಭಿನಯಕ್ಕೆ ಶಿವಮಣಿ ನಿರ್ದೇಶಕ 5
17. ಹೆಸರಿನ ಆರಂಭ ಕಣ್ಣು ಕೊನೆಯಲ್ಲಿ ನಕ್ಷತ್ರವುಳ್ಳ ನಟಿ 5
18. ಮಾತು ಬಾರದವನು ತೀರಿಸಿಕೊಂಡ ಹಗೆ 5
20. ಆಂಗ್ಲದ ಮಧುಚಂದ್ರ 4

ಮೇಲಿನಿಂದ ಕೆಳಕ್ಕೆ

1. ರೆಬೆಲ್ ಸ್ಟಾರ್ ಕಷ್ಟ ಕಾಲಕ್ಕೆ ಆಗಿದ್ದಾನೆ 5
2. ಜನನಾಯಕ ಚಿತ್ರದ ನಾಯಕಿ 2
3. ಪ್ರಜ್ವಲ್ ದೇವರಾಜ್ ಅಭಿನಯದಲ್ಲಿ ಬಂದ ಮಂಗಳ ಗ್ರಹ 4
4. ಈ ಪೋಷಕ ನಟ ನಮ್ಮೊಂದಿಗಿಲ್ಲ 5
5. ಶಿವಣ್ಣ ಅಭಿನಯದ ಮೇಷ ಬಳಗದ ಪ್ರಾಣಿ 3
7. ಕೋಗಿಲೆಗೆ ಹೀಗೊಂದು ಹೆಸರು 2
9. ಡಾ. ರಾಜ್ ಬೀರಿದ ದೃಷ್ಟಿ 2
11. ಶ್ರೀನಾಥ್, ಕೋಕಿಲಾ ಮೋಹನ್, ಗೀತಾ ಅಭಿನಯದ ಚಿತ್ರ 5
12. ಯಶ್ – ದೀಪಾ ಸನ್ನಿಧಿ ಅಭಿನಯದ ಚಿತ್ರ 2
13. _ _ ಶಂಕರಿ 2
14. ಕೃಷ್ಣಭಕ್ತೆ ಮೈಸೂರಿನ ಹೂವು ಮುಡಿಯುವಾಗ ಸಿಕ್ಕ ನಟಿ 5
15. ರಾಶಿಯೊಂದು ಚಿತ್ರವೂ ಹೌದು 3
16. ನಟ – ನಟಿಯರ ಸಮೂಹಕ್ಕೆ ಹೀಗೇನ್ನಿ 4
19. 'ಆನಂದವೇ ಮೈ ತುಂಬಿದೆ ಆಕಾಶವೇ ಕೈ ಚಾಚಿದೆ...', ಗೀತೆಯ ಚಿತ್ರ 2

ಸಿನಿ ಪದಬಂಧ 628ರ ಉತ್ತರ

ರ	ಣ	ಧೀ	ರ				ಪ			
ಹ		ರ		ಕ	ರಿ	ಚಿ	ರ	ತೆ		ಮಿ
ಸ್ಯ				ನ್ನ			ಮಾ			ಲ
ರಾ	ಧ	ನ	ಗಂ	ಡ		ಆ	ತ್ಮ	ಬಂ	ಧ	ನ
ತ್ರಿ		ಗ್ಮ		ರಾ					ಣಿ	
			ಮಂ	ಜು	ಳಾ	ಶ	ರ್ಮಾ			
	ಬೇ					ರ		ಭೀ		ಪ
ಸೇ	ಡಿ	ನ	ಹ	ಕ್ಕಿ		ಪಂ	ಚ	ಮ	ವೇ	ದ
ವಂ			ನಿ			ಜ				ವಿ
ತಿ		ಸಾ	ಹ	ಸ	ವೀ	ರ		ಪ್ರೇ		ಪೂ
			ನಿ				ಪ್ರೇ	ಮ	ಪ	ರ್ವ

ವಿಜೇತರು: ರಾಮಚಂದ್ರ, ಧನಗಳ್ಳಿ, ನಂ.60, ಮೈಸೂರು ತಾಲೂಕು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನನ್ನ ಮಗಳೇ ಸೂಪರ್‌ಸ್ಟಾರ್



ಪ್ರತಿ ಮಕ್ಕಳಲ್ಲೂ ಒಂದು ಟ್ಯಾಲೆಂಟ್ ಇರುತ್ತದೆ. ಅವರಿಗೆ ಅದನ್ನು ಸಾಧಿಸಲು ಬಿಡಿ, ಒತ್ತಾಯಪೂರ್ವಕವಾಗಿ ನಿಮ್ಮ ಕನಸುಗಳನ್ನು ಅವರ ಮೇಲೆ ಹೇರಬೇಡಿ ಎಂಬ ಸಂದೇಶವಿರುವ ಚಿತ್ರ ನನ್ನ ಮಗಳೇ ಸೂಪರ್‌ಸ್ಟಾರ್. ಎನ್.ಎ.ಶಿವಕುಮಾರ್ ನಿರ್ಮಾಣದ ಈ ಚಿತ್ರಕ್ಕೆ ಆಯುರ್ ಆಕ್ಷನ್‌ಕಟ್ ಹೇಳಿದ್ದಾರೆ. ಸೀತಾರಾಮ ಸೀರಿಯಲ್ ಖ್ಯಾತಿಯ ಬೇಬಿ ರೀತುಸಿಂಗ್ ಆ ಮಕ್ಕಳ ಪ್ರತಿರೂಪವಾಗಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್-ಆಡಿಯೋ ಬಿಡುಗಡೆಯಾಯಿತು. ಫಿಲಂ ಚೇಂಬರ್ ಅಧ್ಯಕ್ಷೆ ಡಾ॥ಜಯಮಾಲ, ನಟ ಸುಂದರ ರಾಜ್, ಸಾಹಿತಿ ಬಿ.ಆರ್.ಲಕ್ಷ್ಮಣರಾವ್, ಪರಿಸರ ಪ್ರೇಮಿ ರೇವತಿ ಕಾಮತ್ ಕಾರ್ಯಕ್ರಮದ ಅತಿಥಿಗಳಾಗಿ ಭಾಗವಹಿಸಿದ್ದರು. ನನ್ನ ಮಗಳೇ ಸೂಪರ್‌ಸ್ಟಾರ್ ಚಿತ್ರದ ಮೂರು ಹಾಡುಗಳಿಗೆ ಕೆವಿನ್ ಅವರ ಸಂಗೀತ, ಬಿ.ಆರ್.ಲಕ್ಷ್ಮಣರಾವ್ ಅವರ ಸಾಹಿತ್ಯವಿದೆ.

ಮಕ್ಕಳ ಮೇಲೆ ನಿಮ್ಮ ಕನಸುಗಳ ಹೇರಬೇಡಿ

ನಿರ್ದೇಶಕ ಆಯುರ್ ಮಾತನಾಡುತ್ತ ತಂದೆ, ತಾಯಿಗೆ ತಮ್ಮ ಮಕ್ಕಳು ಸೂಪರ್‌ಸ್ಟಾರ್ ಆಗಬೇಕೆಂಬ ಕನಸು. ಜೊತೆಗೆ ತಾವು ಅಂದುಕೊಂಡಂತೆ ಅವರಿರಬೇಕು ಎಂದುಕೊಳ್ಳುತ್ತಾರೆ. ಆದರೆ ಆ ಮಕ್ಕಳಿಗೆ ಅವರದೇ ಆದ ಆಸೆ, ಆಕಾಂಕ್ಷೆ ಇರುತ್ತದೆ, ನಿಮ್ಮ ಕನಸುಗಳನ್ನು ಅವರ ಮೇಲೆ ಹೇರದೆ, ಅವರ ಮನಸಲ್ಲೇನಿದೆ ಅಂತ ತಿಳಿದು ಅದನ್ನು ಪೋಷಿಸಿದರೆ, ಜಗತ್ತೇ ಮೆಚ್ಚುವಂಥ ಸಾಧನೆ ಮಾಡುತ್ತಾರೆ ಎಂಬುದನ್ನು ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ ಎಂದರು.

ನಟ ಚೆಲುವರಾಜ್ ಮಾತನಾಡುತ್ತ ಈವರೆಗೆ ನಾನು ಹೆಚ್ಚು ವಿಲನ್ ಪಾತ್ರಗಳಲ್ಲೇ ನಟಿಸಿದ್ದೆ, ಈ ಚಿತ್ರದಲ್ಲಿ ಒಬ್ಬ ಜವಾಬ್ದಾರಿಯುತ ತಂದೆಯ ಪಾತ್ರ ಮಾಡಿದ್ದೇನೆ ಎಂದರು.

'ಕಿರು ನಗೆ' ಗರ್ಭಿಣಿ ಮಹಿಳೆಯ ಕಥೆ

ಮಾಜಿ ಶಾಸಕ ದೇವಾನಂದ್ ಚವ್ಹಾಣ್ ಅವರ ಪುತ್ರಿ ಲತಾಶ್ರೀ ಡಿ.ಸಿ. ಕಥೆ ಬರೆದು ನಿರ್ಮಿಸಿರುವ ಹಾಗೂ ಅಶೋಕ್ ಕಡಬ ಅವರ ನಿರ್ದೇಶನದ 'ಕಿರುನಗೆ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ವೇದಿಕೆಯಲ್ಲಿ ಅಣ್ಣಾವ್ರ ಪುತ್ರಿ ಲಕ್ಷ್ಮಿ, ಎಸ್.ಎ. ಗೋವಿಂದರಾಜು ಟೀಸರ್‌ಗೆ ಚಾಲನೆ ನೀಡಿದರು.

ಚಿತ್ರದ ನಿರ್ದೇಶಕ ಅಶೋಕ್ ಕಡಬ ಮಾತನಾಡುತ್ತ ಕಿರುನಗೆ ನನ್ನ ನಿರ್ದೇಶನದ ಆರನೇ ಚಿತ್ರ. ಇದೊಂದು ಲವ್ ಜಾನರ್ ಚಿತ್ರವಾದರೂ, ತಮ್ಮ ತಂದೆ, ತಾಯಿಗಾಗಿ ಮಕ್ಕಳೇ ಪ್ರೀತಿಯನ್ನು ತ್ಯಾಗ ಮಾಡುವ ಕಥಾಹಂದರ ಚಿತ್ರದಲ್ಲಿದೆ, ಈಗಿನ ಜನರೇಶನ್‌ನಲ್ಲಿ ನಡೆವ ಕಥೆಯಿದು, ತಾಯಿಗೋಸ್ಕರ ಪ್ರೀತಿ ತ್ಯಾಗ ಮಾಡುವ ಮಗಳು ಮುಂದೆ ಪ್ರೀತಿಯ ಬಲೆಯಲ್ಲಿ ಬಿದ್ದು ಹೇಗೆ ಪರಿತಪಿಸುತ್ತಾಳೆ ಎಂದು ಚಿತ್ರದಲ್ಲಿ ಹೇಳಿದ್ದೇವೆ, ಚಿತ್ರದ ಪ್ರಥಮ ಭಾಗ ಮದುವೆ ಮನೆಯಲ್ಲೇ ನಡೆಯುತ್ತದೆ. ಬೆಂಗಳೂರು, ಉಡುಪಿ, ವಿಜಯಪುರ, ಚಿಕ್ಕಮಗಳೂರು, ಮುಂಬೈ ಹಾಗೂ ಗೋವಾದಲ್ಲಿ 60 ದಿನಗಳವರೆಗೆ ಚಿತ್ರೀಕರಣ ನಡೆಸಿದ್ದೇವೆ, ಈಗಾಗಲೇ ಶೂಟಿಂಗ್ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ಎಂದು ಹೇಳಿದರು.

ನಿರ್ಮಾಪಕಿ ಲತಾಶ್ರೀ ಡಿ.ಸಿ. ಮಾತನಾಡುತ್ತ ಪ್ರೀತಿ ಪ್ರೇಮದ ಸುತ್ತ ನಡೆಯುವ ಕಥೆಯಿದು, ನಮ್ಮ ಚಿತ್ರದಲ್ಲಿ ಪ್ರೀತಿಯನ್ನು ತೋರಿಸಿರುವ ರೀತಿಯೇ ಬೇರೆ. ಒಂದು ಲವ್‌ಸ್ಟೋರಿಯನ್ನು ಮಹಿಳೆಯೊಬ್ಬಳ ದೃಷ್ಟಿಕೋನದಲ್ಲಿ ಹೇಳಿದ್ದೇವೆ, ಗರ್ಭಿಣಿ ಹೆಣ್ಣುಮಗಳ ಸುತ್ತ ಚಿತ್ರದ ಕಥೆ ನಡೆಯುತ್ತದೆ. ಹಾಗಂತ ಇದು ಮಹಿಳಾ ಪ್ರಧಾನ ಚಿತ್ರವಲ್ಲ. ಆಗಸ್ಟ್‌ನಲ್ಲಿ ರಿಲೀಸ್ ಮಾಡುವ ಯೋಜನೆಯಿದೆ ಎಂದು ಹೇಳಿದರು.

ತಾಯಿಯ ಪಾತ್ರದಲ್ಲಿ ಹಿರಿಯ ನಟಿ ಸಂಗೀತಾ ನಟಿಸಿದ್ದಾರೆ. ಸಂಗೀತ ನಿರ್ದೇಶಕ ಸುಕೃತ್ ಮಾತನಾಡುತ್ತ



ಚಿತ್ರದಲ್ಲಿ 5 ಹಾಡುಗಳಿದ್ದು, ಸ್ನೇಹಿತ ನಾಗಾರ್ಜುನ ಶರ್ಮಾ ಅವರೇ ಸಾಹಿತ್ಯ ರಚಿಸಿದ್ದಾರೆ ಎಂದರು. ಛಾಯಾಗ್ರಾಹಕ ಸಿದ್ದು ಕಂಚನಹಳ್ಳಿ, ಹಾಗೂ ಕಲಾವಿದ ಮೂಗು ಸುರೇಶ್ ಸಿನಿಮಾ ಕುರಿತಂತೆ ಮಾತನಾಡಿದರು.

ತಿ.ನರಸೀಪುರದಲ್ಲಿ ಪೌರಕಾರ್ಮಿಕರೊಂದಿಗೆ ಸಂವಾದ

ಸ್ವಚ್ಛತೆ ಕಾಪಾಡುವಲ್ಲಿ ಪೌರ ಕಾರ್ಮಿಕರ ಪಾತ್ರ ಅಪಾರ

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಶಂಕರ ಅಂಕನಶೆಟ್ಟಿಪುರ



ಆಯೋಗದ ಸದಸ್ಯ ಶಂಕರ ಪೌರ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ತಿ.ನರಸೀಪುರ, ಜೂ.4– ಪಟ್ಟಣದ ಪುರಸಭೆ ಸಭಾಂಗಣದಲ್ಲಿ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರು ಪೌರ ಕಾರ್ಮಿಕರೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಗಳು, ಬೇಡಿಕೆಗಳು ಹಾಗೂ ಕೆಲಸದ ಪರಿಸ್ಥಿತಿಗಳ ಕುರಿತು ಮಾಹಿತಿ ಪಡೆದರು.

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಶಂಕರ ಅಂಕನಶೆಟ್ಟಿಪುರ ಮಾತನಾಡಿ, ಪೌರ ಕಾರ್ಮಿಕರು ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರ ಪರಿಶ್ರಮದಿಂದ ಪಟ್ಟಣ ಸ್ವಚ್ಛ ಹಾಗೂ ಸುಂದರವಾಗಿ ಉಳಿದಿವೆ. ಆದ್ದರಿಂದ ಕಾರ್ಮಿಕರ ಹಿತಾಸಕ್ತಿಗೆ ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ದೊರಕಿಸಿಕೊಡಲು ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದರು.

ಸಂವಾದ ವೇಳೆ ಪೌರ ಕಾರ್ಮಿಕರು ಸೇವಾ ಭದ್ರತೆ, ವೇತನ, ಆರೋಗ್ಯ ವಿಮೆ, ವಸತಿ ಸೌಲಭ್ಯ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಸದಸ್ಯರ ಗಮನಕ್ಕೆ ತಂದರು. ಕಾರ್ಮಿಕರ ಅಹವಾಲು ಆಲಿಸಿದ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್ ಮಾತನಾಡಿ, ಪೌರ ಕಾರ್ಮಿಕರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಮಿಕರಿಗೆ ಅಗತ್ಯ ಸುರಕ್ಷತಾ ಪರಿಕರಗಳು, ಆರೋಗ್ಯ ತಪಾಸಣೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ ಎಂದರು.

ಪೌರ ಕಾರ್ಮಿಕರು ತಮ್ಮ ಸಮುದಾಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ವಿಶೇಷವಾಗಿ ಸ್ಮಶಾನ ಭೂಮಿ, ನಿವೇಶನ ಹಂಚಿಕೆ ಹಾಗೂ ಸಮುದಾಯ ಭವನದ ಬೇಡಿಕೆ ಮಂಡಿಸಿದರು. ಅದೇ ರೀತಿ, ನಿವೇಶನವಿಲ್ಲದೆ ಬಾಡಿಗೆ ಮನೆಗಳಲ್ಲಿ ಜೀವನ ಸಾಗಿಸುತ್ತಿರುವ ಅನೇಕ ಪೌರಕಾರ್ಮಿಕರಿಗೆ ಸರ್ಕಾರದಿಂದ ನಿವೇಶನ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದ ಅವರು ಸ್ವಂತ ಮನೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದರೆ ಕಾರ್ಮಿಕರ ಜೀವನಮಟ್ಟ ಸುಧಾರಣೆಯಾಗಲಿದೆ ಎಂದರು.

ಕಾರ್ಮಿಕರ ಮನವಿಗೆ ಸ್ಪಂದಿಸಿದ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರು, ಮುಖ್ಯಾಧಿಕಾರಿ ಶ್ರೀನಿವಾಸ್ ಹಾಗೂ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರು ಸ್ಮಶಾನ, ನಿವೇಶನ ಹಾಗೂ ಸಮುದಾಯ ಭವನಕ್ಕೆ ಸಂಬಂಧಿಸಿದ ಬೇಡಿಕೆಗಳನ್ನು ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರಲಾಗುವುದು. ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

3 ತಿಂಗಳಿಗೊಮ್ಮೆ ತಪಾಸಣೆ: ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಮಾತನಾಡಿ, ಪೌರ ಕಾರ್ಮಿಕರು ಸಾರ್ವಜನಿಕ ಆರೋಗ್ಯ ಮತ್ತು ಸ್ವಚ್ಛತೆಯ ಕಾವಲುಗಾರರಾಗಿದ್ದಾರೆ. ಅವರ ಆರೋಗ್ಯ ಉತ್ತಮವಾಗಿದ್ದಾಗ ಮಾತ್ರ ಜನರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ಆದ್ದರಿಂದ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ, ಲಸಿಕೆ ಪಡೆಯುವುದು ಹಾಗೂ ವೈದ್ಯರ ಸಲಹೆಗಳನ್ನು ಪಾಲಿಸುವುದು ಅಗತ್ಯ ಎಂದರು.

ಕಚೇರಿ ವ್ಯವಸ್ಥಾಪಕ ಮಹೇಂದ್ರ, ಸಮುದಾಯ ಸಂಘಟನಾಧಿಕಾರಿ ನಳಿನಿ, ಕಂದಾಯಾಧಿಕಾರಿ ತ್ರಿವೇಣಿ, ಕಂದಾಯ ನಿರೀಕ್ಷಕ ಅಶೋಕ್, ಸಿಬ್ಬಂದಿ ವರ್ಗದ ಆಶಾ, ಗೋಪಾಲ್, ನಿಂಗರಾಜು, ಸ್ಯಾನಿಟರಿ ಸೂಪರ್ ವೈಸರ್ ಪ್ರಸನ್ನ, ಪೌರ ಕಾರ್ಮಿಕರಾದ ಶಿವಣ್ಣ, ಸೋಮ, ಮಹದೇವ, ಸರೋಜ, ಜ್ಯೋತಿ, ಭಾಗ್ಯ, ಗಣೇಶ್, ಸತೀಶ, ನಿಂಗರಾಜು, ಮನೋಜ್, ಮಣಿರಾಜು, ನವೀನ್ ಮತ್ತಿತರರಿದ್ದರು.

ಶೂ, ಗ್ಲೌಸ್, ಮಾಸ್ಕ್ ಧರಿಸದಿದ್ದಲ್ಲಿ ಕ್ರಮ


ತಿ.ನರಸೀಪುರ: ಪೌರ ಕಾರ್ಮಿಕರು ಕಡ್ಡಾಯವಾಗಿ ಸುರಕ್ಷತಾ ಪರಿಕರಗಳಾದ ಗ್ಲೌಸ್, ಶೂ, ಮಾಸ್ಕ್ ಸೇರಿದಂತೆ ಅಗತ್ಯ ಸುರಕ್ಷತಾ ಉಪಕರಣಗಳನ್ನು ಧರಿಸಿ ಕೆಲಸ ನಿರ್ವಹಿಸಬೇಕು ಎಂದು ಮುಖ್ಯಾಧಿಕಾರಿ ಸಿ.ಶ್ರೀನಿವಾಸ್ ಸೂಚಿಸಿದರು.

ಸ್ವಚ್ಛತಾ ಕಾರ್ಯದ ವೇಳೆ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆ ಅತ್ಯಂತ ಮುಖ್ಯವಾಗಿದ್ದು, ಪುರಸಭೆಯಿಂದ ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಆದರೂ ಕೆಲ ಕಾರ್ಮಿಕರು ಗ್ಲೌಸ್ ಮತ್ತು ಶೂಗಳನ್ನು ಬಳಸದೇ ಕಾರ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ ಎಂದರು.

ಸುರಕ್ಷತಾ ಪರಿಕರಗಳ ಬಳಕೆ ಕೇವಲ ನಿಯಮವಲ್ಲ. ಅದು ಕಾರ್ಮಿಕರ ಆರೋಗ್ಯ ರಕ್ಷಣೆಗೆ ಅಗತ್ಯವಾಗಿದೆ. ಸೋಂಕು, ಗಾಯಗಳು ಹಾಗೂ ಇತರೆ ಆರೋಗ್ಯ ಸಮಸ್ಯೆಗಳಿಂದ ರಕ್ಷಿಸಿಕೊಳ್ಳಲು ಪ್ರತಿಯೊಬ್ಬ ಕಾರ್ಮಿಕರು ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪರಿಕರಗಳನ್ನು ನೀಡಿದ ಬಳಿಕವೂ ಅವುಗಳನ್ನು ಬಳಸದೇ ಇದ್ದರೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಹಿನ್ನೆಲೆ

ಕೋಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಹೆಚ್.ಡಿ.ಕೋಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಜೂ.4– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಮಾನತೆಯ ಹರಿಕಾರರಾಗಿ ಎಲ್ಲರಿಗೂ ಮಾದರಿಯಾಗಿದ್ದರು ಎಂದು ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವರಾಜ್ ತಿಳಿಸಿದರು.

ತಾಲೂಕಿನ ಪಡುಕೋಟೆ ಕಾವಲ್ ಗ್ರಾಪಂ ವ್ಯಾಪ್ತಿಯ ಇಂದಿರಾನಗರದ ಗಾನವಿ ಮೆಡಿಕಲ್ ಆವರಣದಲ್ಲಿ ಸಮತಾ ಟ್ರಸ್ಟ್ ಕೋಟೆ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಮೈಸೂರು ಮಹಾ ಸಂಸ್ಥಾನವನ್ನಾಳಿದ ಮಹಾರಾಜರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಮುಖರು. ಇವರ ಕಾಲದಲ್ಲಿ ಏಷ್ಯಾದಲ್ಲೇ ಮೊದಲು ಶಿವನಸಮುದ್ರದಲ್ಲಿ ಜಲ ವಿದ್ಯುತ್ ಉತ್ಪಾದನೆ, ಬೆಂಗಳೂರಿಗೆ ವಿದ್ಯುತ್ ದೀಪ, ಶಿವನಸಮುದ್ರದಿಂದ ಕೋಲಾರ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ, ಕೆಆರ್‌ಎಸ್ ನಿರ್ಮಾಣ, ಕಡ್ಡಾಯವಾಗಿ ಶಿಕ್ಷಣ ಮತ್ತು ಉಚಿತ ಶಿಕ್ಷಣ ಸೇರಿದಂತೆ ಸಾರ್ವಜನಿಕರ ಅನುಕೂಲಕ್ಕಾಗಿ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು.

ಇದೇ ವೇಳೆ ಶಿಬಿರದಲ್ಲಿ ಬಿಪಿ, ಶುಗರ್, ಸೇರಿದಂತೆ ಇನ್ನಿತರ ಪರೀಕ್ಷೆ ಮಾಡಲಾಯಿತು. ನೂರಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ನಂಬಿಕೆ ಸಿರಿಧಾನ್ಯ ಮಿಲ್ ನಾಗರಾಜು ಮಾತನಾಡಿದರು.

ಈ ವೇಳೆ ಮುಖಂಡರಾದ ರವೀಂದ್ರ, ಸೋಮೇಶ್, ಮರಿಲಿಂಗಯ್ಯ, ಜಿ.ನಾಗೇಶ್, ಸೋಮು, ಕುಮಾರಸ್ವಾಮಿ, ನವೀನ್, ಎಸ್‌ಬಿಐ ವ್ಯವಸ್ಥಾಪಕ ಪ್ರವೀಣ್ ಗೌಡರ್, ರವೀಂದ್ರ, ಸೋಮೇಶ್, ಮರಿಲಿಂಗಯ್ಯ, ನಾಗೇಶ್, ಸೋಮು, ಕುಮಾರಸ್ವಾಮಿ, ಐಡಿಯಾ ವೆಂಕಟೇಶ್, ವಿನಯ್, ಸಿದ್ದರಾಜು, ನವೀನ್, ಮಂಜುನಾಥ್ ಇನ್ನಿತರರಿದ್ದರು.

ನೂತನ ಕೆಪಿಸಿಸಿ ಅಧ್ಯಕ್ಷರಿಗೆ ಅಭಿನಂದನೆ



ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರನ್ನು ಬೆಂಗಳೂರಿನಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅಭಿನಂದಿಸಿದರು. ಈ ವೇಳೆ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಜಿಪಂ ಮಾಜಿ ಸದಸ್ಯ ಬಸವರಾಜು ಇನ್ನಿತರರಿದ್ದರು.



ಜಗದೀಶ್‌ಗೆ ಪಿಹೆಚ್.ಡಿ ಪದವಿ

ಮೈಸೂರು, ಜೂ.4– ಡಾ. ಡಿ.ವಿಜಯಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಜಗದೀಶ.ಕೆ. ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಚಪ್ಪರದಹಳ್ಳಿ ಪಿಎಸಿಎಸ್‌ಗೆ ಅಧ್ಯಕ್ಷೆ, ಉಪಾಧ್ಯಕ್ಷೆ ಆಯ್ಕೆ



ಚಪ್ಪರದಹಳ್ಳಿ ಪಿಎಸಿಎಸ್ ಅಧ್ಯಕ್ಷೆಯಾಗಿ ಸಂಗೀತಾ, ಉಪಾಧ್ಯಕ್ಷೆಯಾಗಿ ಪುಟ್ಟಮ್ಮ ಆಯ್ಕೆಯಾದರು.

ಬೆಟ್ಟದಪುರ, ಜೂ.4– ಪಿರಿಯಾಪಟ್ಟಣ ತಾಲೂಕಿನ ಚಪ್ಪರದಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಸಂಗೀತ, ಉಪಾಧ್ಯಕ್ಷೆಯಾಗಿ ಪುಟ್ಟಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಂಗೀತ, ಉಪಾಧ್ಯಕ್ಷ ಸ್ಥಾನಕ್ಕೆ ಪುಟ್ಟಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಿತೇಂದ್ರ ಘೋಷಿಸಿದರು.

ನೂತನ ಅಧ್ಯಕ್ಷೆ ಸಂಗೀತಾ ಮಾತನಾಡಿ, ಸಹಕಾರ ಸಂಘದ ಅಭಿವೃದ್ಧಿಗೆ ಎಲ್ಲಾ ಸದಸ್ಯರ ಸಲಹೆ, ಸಹಕಾರ ಪಡೆದು ಶಕ್ತಿ ಮೀರಿ ಶ್ರಮಿಸಲಾಗುವುದು. ನನ್ನನ್ನು ಅಧ್ಯಕ್ಷೆಯಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಾಜಿ ಅಧ್ಯಕ್ಷ ಸುರೇಶ್ ಮಾತನಾಡಿ, ಸಹಕಾರ ಸಂಘದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು, ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಲು ಕ್ರಮ ವಹಿಸುತ್ತೇವೆ. ಅಲ್ಲದೇ ಸಂಘವನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಲು ನೂತನ ಅಧ್ಯಕ್ಷರಿಗೆ ಸಹಕಾರ ನೀಡಲಾಗುವುದು ಎಂದರು.

ಈ ವೇಳೆ ನಿರ್ದೇಶಕರಾದ ರಘು, ಜಗದೀಶ್, ಕುಶಾಲ್, ಸುರೇಶ್, ರವಿ, ಮುಕುಂದಚಾರ್, ಅಶ್ವತ್ ಕುಮಾರ್, ಗೌರಮ್ಮ, ಚೆಲುವನಾಯಕ, ಸಿಇಓ ಹುಚ್ಚಪ್ಪ, ಸಿಬ್ಬಂದಿ ಹಾಗೂ ರೈತರು ಇತರರಿದ್ದರು.

ಸರಗೂರು: ರಸ್ತೆ ಕಾಮಗಾರಿ ಪರಿಶೀಲನೆ



ಸರಗೂರಿನ 8ನೇ ವಾರ್ಡ್‌ನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದು.

ಸರಗೂರು, ಜೂ.4– ಪಟ್ಟಣದ 8ನೇ ವಾರ್ಡ್‌ಗೆ ಪಪಂ ಸದಸ್ಯೆ ಉಮಾ ರಾಮು ಭೇಟಿ ನೀಡಿ ರಸ್ತೆ ಕಾಮಗಾರಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ವಾರ್ಡ್‌ಗಳ ರಸ್ತೆಗಳು ಅಭಿವೃದ್ಧಿ ಯಾದರೆ ಸಾರ್ವಜನಿಕರ ಜೀವನ ಮಟ್ಟ ಸುಧಾರಿಸಲಿದೆ. ಈ ದೃಷ್ಟಿಯಿಂದ ವಾರ್ಡ್ ರಸ್ತೆಗಳ ದುರಸ್ತಿ ಮತ್ತು ಡಾಂಬರೀಕರಣ ಕಾರ್ಯಗಳು ಮುಂದುವರೆದಿವೆ. ಆದರೆ ಇನ್ನು ಪೂರ್ಣ ಪ್ರಮಾಣದ ರಸ್ತೆ ಡಾಂಬರೀಕರಣ ಕಾಮಗಾರಿಯಾದರೆ ಮಾತ್ರ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ ಎಂದರು.

ಈ ವೇಳೆ ಬ್ರಾಹ್ಮಣ ಸಮಾಜದ ಅಧ್ಯಕ್ಷ ಸಾಂಬವಮೂರ್ತಿ, ಪುರೋಹಿತ್ ಹರೀಶ್, ಶ್ರೀವತ್ಸ ಇನ್ನಿತರರಿದ್ದರು.

ಡಿಕೆಶಿ ಸಿಎಂ ಹಿನ್ನೆಲೆ: ಹುಣಸೂರಲ್ಲಿ ಸಂಭ್ರಮಾಚರಣೆ



ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ಹುಣಸೂರು, ಜೂ.4– ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಹಾಗೂ ಉಪ ಮುಖ್ಯಮಂತ್ರಿಯಾಗಿ ಡಾ.ಜಿ.ಪರಮೇಶ್ವರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದ ಬಸ್ ನಿಲ್ದಾಣದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ನಗರದ ಬಸ್ ನಿಲ್ದಾಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ನೇಹಜೀವಿ ಹೆಚ್.ಪಿ.ಮಂಜುನಾಥ್ ಅಭಿಮಾನಿ ಬಳಗದಿಂದ ಸಾರ್ವಜನಿಕರಿಗೆ ಬಾದಾಮಿ ಹಾಲು ಹಾಗೂ ಉದ್ಯಮಿ ನಾಡಪ್ಪನಹಳ್ಳಿ ರಾಜು ಶಿವರಾಜೇಗೌಡರು 20 ಸಾವಿರ ಲಾಡು ಹಂಚಿ, ಪಟಾಕಿ ಸಿಡಿಸಿ ಘೋಷಣೆ ಕೂಗಿ ಸಂಭ್ರಮಿಸಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅಧಿಕಾರಾವಧಿಯಲ್ಲಿ ರಾಜ್ಯ ಅಭಿವೃದ್ಧಿ ಪಥದತ್ತ ಸಾಗಲಿದೆ. ಮಾಜಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಗಳನ್ನು ಮತ್ತಷ್ಟು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಸಂಕಲ್ಪದೊಂದಿಗೆ ರಾಜ್ಯದಲ್ಲಿ ಭಾರತ್ ಜೋಡೋ 10 ಸಾವಿರ ಯುವ ಸಂಘಟನೆ ಸ್ಥಾಪನೆಗೆ ಒತ್ತು ನೀಡುವ ಮೂಲಕ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಂಕಲ್ಪ ಮಾಡಿದ್ದಾರೆ ಎಂದರು.

ಈ ವೇಳೆ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಘು, ಟಿ.ಕೃಷ್ಣ, ಕಾಂಕ್ರಿಟ್ ರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ನಗರಸಭೆ ಮಾಜಿ ಸದಸ್ಯ ಯೋಗೇಶ್, ಮುಖಂಡರಾದ ಪಟೇಲ್ ಮಹೇಶ್, ಮಂಜು, ಬಾಬಣ್ಣ, ಕ್ರೇಜಿ ಮಹೇಶ್, ಪುಟ್ಟರಾಜ್, ರೇಣುಕಾ, ನೇತ್ರಾವತಿ, ಯುವ ಕಾಂಗ್ರೆಸ್ ಅಧ್ಯಕ್ಷರಾದ ಪೈಸಾಲ್, ದರ್ಶನ್ ಸೇರಿದಂತೆ ಇತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಜೂ.4– ಪ್ರಸಕ್ತ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡುವ ಪ್ರತಿ ಟನ್ ಕಬ್ಬಿಗೆ 4500 ರೂ. ಮುಂಗಡ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಘೋಷಣೆ ಕೂಗಿದರು. ಬಳಿಕ ಪಾದಯಾತ್ರೆ ಮೂಲಕ ತಾಲೂಕು ಕಚೇರಿಗೆ ತೆರಳಿ ಪ್ರವೇಶ ದ್ವಾರದಲ್ಲಿ ಕೆಲ ಕಾಲ ಧರಣಿ ನಡೆಸಿದರು.

ಕಬ್ಬು ಬೆಳೆಗಾರರ ರೈತ ಸಂಘದ ರಾಜ್ಯಾಧ್ಯಕ್ಷ ಹಾಡ್ಯ ರವಿ ಮಾತನಾಡಿ, ಕಬ್ಬಿಗೆ ಎಫ್‌ಆರ್‌ಪಿ ದರ ನಿಗದಿ ಪಡಿಸುವಲ್ಲಿ ಅವೈಜ್ಞಾನಿಕ ಮಾನದಂಡ ಅನುಸರಿಸಲಾಗಿದೆ. ಇದರಿಂದ ರೈತರು ಆರ್ಥಿಕವಾಗಿ ನಷ್ಟ ಅನುಭವಿಸುವಂತಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ನೆರವಾಗುವ ಸಲುವಾಗಿ ಪ್ರಸಕ್ತ ವರ್ಷ ಕಬ್ಬಿಗೆ ಕನಿಷ್ಠ 4500 ರೂ. ಗಳನ್ನು ಮುಂಗಡ ನೀಡುವಂತೆ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ನಿರ್ದೇಶನ ನೀಡಬೇಕು. ಇನ್ನು ಕಬ್ಬಿನ ಉಪ ಉತ್ಪನ್ನಗಳಿಂದ ಲಭ್ಯವಾಗುವ ಲಾಭಾಂಶವನ್ನು ರೈತರಿಗೂ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು. ಸಕ್ಕರೆ ಇಳುವರಿ ನೈಜತೆಯನ್ನು ಕಾರ್ಖಾನೆಯವರು ಮರೆ ಮಾಚುತ್ತಿರುವುದನ್ನು ತಪ್ಪಿಸುವ ಸಲುವಾಗಿ ಸರ್ಕಾರದಿಂದ ಸಕ್ಕರೆ ಅಂಶ ಪತ್ತೆ ಹಚ್ಚುವ ಲ್ಯಾಬ್‌ಗಳನ್ನು ತೆರೆಯಬೇಕು. ಜೊತೆಗೆ ಸಕ್ಕರೆ ಕಾರ್ಖಾನೆ ಆವರಣದಲ್ಲಿ ತೂಕದ ಯಂತ್ರಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು.

ತಾಲೂಕಿನ ಹುರ ಹಾಗೂ ಇತರೆ 24 ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಯೋಜನೆ ನಿರ್ಮಾಣ ಹಂತದಲ್ಲೇ ಸ್ಥಗಿತಗೊಂಡಿದ್ದು, ನೀರಾವರಿ ಇಲಾಖೆಯಿಂದ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ಅಲ್ಲದೇ ಕಂದಾಯ ಇಲಾಖೆಯಿಂದ ಪೌತಿ ಖಾತೆ, ಪೋಡಿ ನಿರ್ವಹಣೆ ಹಾಗೂ ಬೀಳುರೆಸ್ಟೋರ್ ಕಾರ್ಯ ವಿಳಂಬವಾಗಿರುವುದರಿಂದ ರೈತರು ನಿತ್ಯ ತಾಲೂಕು ಕಚೇರಿಗೆ ಅಲೆದಾಡುವಂತಾಗಿದೆ. ಹೀಗಾಗಿ ರೈತರ ಕೆಲಸ ಕಾರ್ಯಗಳು ಜರೂರಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಜೊತೆಗೆ ಖಾಸಗಿ ಮೈಕ್ರೋ ಫೈನಾನ್ಸ್ ಸಂಸ್ಥೆಯವರು ಗ್ರಾಮೀಣ ಪ್ರದೇಶದಲ್ಲಿ ಸಾಲ ವಸೂಲಾತಿ ನೆಪದಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಆದ್ದರಿಂದ ಈ ಸಂಸ್ಥೆಗಳ ಮ್ಯಾನೇಜರ್‌ಗಳ ಸಭೆಯನ್ನು ತಹಸೀಲ್ದಾರ್ ಹಾಗೂ ಪೊಲೀಸರ ಸಮ್ಮುಖದಲ್ಲಿ ಕರೆದು ಸಾಲ ವಸೂಲಾತಿ ನೆಪದಲ್ಲಿ ರೈತರಿಗೆ ನೀಡುತ್ತಿರುವ ಕಿರುಕುಳ ತಪ್ಪಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಸ್ಥಳಕ್ಕಾಗಮಿಸಿದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಮುದ್ದಹಳ್ಳಿ ಚಿಕ್ಕಸ್ವಾಮಿ, ತಾಲೂಕು ಅಧ್ಯಕ್ಷ ಅಂಬಳೆ ಮಹದೇವಸ್ವಾಮಿ, ಮರಿಸ್ವಾಮಪ್ಪ, ಕುಮಾರ್, ವಸಂತ, ಲೋಕೇಶ್, ಮಹೇಶ್, ಮಹದೇವಪ್ಪ ಮದನ್, ಜೀವನ್, ಹರ್ಷ, ಕುಮಾರ್, ಕೆಂಪಣ್ಣ ಇತರರಿದ್ದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆ ಮುಚ್ಚುವ ಹುನ್ನಾರ

ತಿ.ನರಸೀಪುರ, ಕೆ.ಆರ್.ನಗರದಲ್ಲಿ ವಿವಿಧ ಸಂಘಟನೆಯಿಂದ ಪ್ರತಿಭಟನೆ





ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆಗಳ ಮುಚ್ಚಿ ವಿಲೀನಗೊಳಿಸುವ ನಿರ್ಧಾರ ಕೈ ಬಿಡುವಂತೆ ಒತ್ತಾಯಿಸಿ ತಿ.ನರಸೀಪುರ(ಎಡಚಿತ್ರ), ಕೆ.ಆರ್.ನಗರ(ಬಲಚಿತ್ರ)ದಲ್ಲಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ/ಕೆ.ಆರ್.ನಗರ, ಜೂ.4– ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಿ ವಿಲೀನಗೊಳಿಸುವ ನಿರ್ಧಾರವನ್ನು ಸರ್ಕಾರ ಕೈಬಿಡುವಂತೆ ಒತ್ತಾಯಿಸಿ ತಿ.ನರಸೀಪುರ ಹಾಗೂ ಕೆ.ಆರ್.ನಗರದಲ್ಲಿ ಬುಧವಾರ ಆಲ್ ಇಂಡಿಯಾ ಡೆಮೊಕ್ರೆಟಿಕ್ ಸ್ಟೂಡೆಂಟ್ ಆರ್ಗನೈಜೇಷನ್ (ಎಐಡಿಎಸ್‌ಓ) ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ: ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೆಪಿಎಸ್ ಶಾಲೆಗಳೊಂದಿಗೆ ವಿಲೀನ ಪ್ರಕ್ರಿಯೆ ಆರಂಭಿಸಿ, ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರ ಹಾಗೂ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಯುವ ಮುಖಂಡ ಶಿವಕುಮಾರ್(ಬಡ್ಡು) ಮಾತನಾಡಿ, ನಮ್ಮೂರ ಶಾಲೆ ನಮ್ಮೂರ ಮಕ್ಕಳ ಜ್ಞಾನದ ಮಂದಿರವಾಗಿದೆ. ನಮ್ಮೂರ ಶಾಲೆಯನ್ನು ಮುಚ್ಚಲು /ವಿಲೀನಗೊಳಿಸಲು ನಮ್ಮ ಒಪ್ಪಿಗೆ ಇಲ್ಲ. ಅಲ್ಲದೇ ಸರ್ಕಾರವು 1ನೇ ತರಗತಿಯಿಂದಲೇ ಕನ್ನಡ ಮಾಧ್ಯಮದೊಂದಿಗೆ ಇಂಗ್ಲಿಷ್ ಮಾಧ್ಯಮ ಕೂಡ ಆರಂಭಿಸುತ್ತಿದೆ. ಕೆಲವು ಕಡೆ ದ್ವಿಭಾಷಾ ಮಾಧ್ಯಮದ ಹೆಸರಲ್ಲಿ ಕೇವಲ ಇಂಗ್ಲಿಷ್ ಮಾಧ್ಯಮ ಕಲಿಸಲು ತಯಾರಿ ನಡೆಸಲಾಗುತ್ತಿದೆ. ಯಾವುದೇ ಕಾರಣಕ್ಕೂ ಕನ್ನಡ ಮಾಧ್ಯಮ ತೆಗೆದು ಹಾಕುವುದನ್ನು ಒಪ್ಪಲು ಸಾಧ್ಯವಿಲ್ಲ. ಈ ಆದೇಶ ಜಾರಿಯಾದರೆ ಬಡ ಕೂಲಿಕಾರರ ಮತ್ತು ರೈತರ ಮಕ್ಕಳ ಜ್ಞಾನ ಮಂದಿರಗಳಾದ ನಮ್ಮೂರ ಶಾಲೆಗಳು ಕ್ರಮೇಣವಾಗಿ ಮುಚ್ಚಿ ಹೋಗುತ್ತವೆ. ಹೀಗಾಗಿ ಗ್ರಾಮೀಣ ಮಟ್ಟದಿಂದ ಆರಂಭಿಸಿ ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದವರೆಗೂ ಪ್ರತಿಭಟನೆ ಹಾಗೂ ಸಮಾವೇಶ ನಡೆಸಲಾಗುವುದು.

ಸಾರ್ವಜನಿಕ ಶಿಕ್ಷಣ ಹೋರಾಟ ಸಮಿತಿ ಉಪಾಧ್ಯಕ್ಷೆ ಎಸ್.ಸುಮಾ ಮಾತನಾಡಿ, ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದಂತೆ ಕೆಪಿಎಸ್ ಶಾಲೆಗಳನ್ನು ಆರಂಭಿಸಿ, 3 ರಿಂದ 5 ಕಿಮೀ ವ್ಯಾಪ್ತಿಯ ಶಾಲೆಗಳನ್ನು ವಿಲೀನಗೊಳಿಸಿದೆ. ಜಿಲ್ಲೆಯಲ್ಲಿ 34 ಕೆಪಿಎಸ್ ಶಾಲೆಗಳಲ್ಲಿ ತಾಲೂಕಿನ 4 ಶಾಲೆಗಳು ಸೇರಿದ್ದು, ಸುತ್ತಮುತ್ತಲಿನ 45 ರಿಂದ 50 ಶಾಲೆಗಳನ್ನು ವಿಲೀನಗೊಳಿಸುವುದಾಗಿ ಪಟ್ಟಿ ಮಾಡಲಾಗಿದೆ. ಈ ಕೆಪಿಎಸ್ ಶಾಲೆಗಳಿಗೆ ಸಾಸಿವೆ ಕಾಳಿನಷ್ಟೂ ಅಗತ್ಯ ಸೌಕರ್ಯಗಳನ್ನು ನೀಡಿಲ್ಲ. ಇದು ಜನರಿಗೆ ಮಾಡುತ್ತಿರುವ ದೊಡ್ಡ ದ್ರೋಹ ಎಂದರು.

ಸೋಸಲೆ ಪಿಎಸಿಎಸ್ ನಿರ್ದೇಶಕ ಎಸ್.ನಂಜುಂಡಯ್ಯ ಮಾತನಾಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಅಧೀಕ್ಷಕರಿಗೆ ಮನವಿ ಸಲ್ಲಿಸಲಾಯಿತು. ಸೋಸಲೆ, ಶ್ರೀರಂಗರಾಜಪುರ, ಕಗ್ಗಲೀಪುರ, ಇಂಡವಾಳು, ಎಂ.ಕೆಬ್ಬೆಹುಂಡಿ, ಎಸ್.ಮೇಗಡಹಳ್ಳಿ, ಕೈಯಂಬಳ್ಳಿ, ಕೃಷ್ಣಾಪುರ, ಬೆನಕನಹಳ್ಳಿ ಮತ್ತು ಇನ್ನಿತರ ಗ್ರಾಮಗಳ ಪೋಷಕರು ಸೇರಿದಂತೆ ಎಐಡಿಎಸ್‌ಓ ಸಂಘಟನೆ ಕಾರ್ಯಕರ್ತರಾದ ಚಂದ್ರಿಕಾ, ರಣಜಿತ್, ನೀತುಶ್ರೀ, ಮಣಿಲಾ, ಎ.ಶಿವಕುಮಾರ್, ಎ.ನಾಗರಾಜು, ನಂಜುಂಡಸ್ವಾಮಿ, ಸೋಮ, ಶ್ರೀಧರ್, ಚಿಕ್ಕಭೈರಯ್ಯ, ಬಸಪ್ಪ, ಸ್ವಾಮಿ, ಮಹದೇವಶೆಟ್ಟಿ, ಚಂದ್ರೇಗೌಡ, ಬಸವರಾಜು, ಚೆನ್ನಾಜಮ್ಮ, ಗಂಗಾಧರ್, ಚಂದ್ರು, ಸಿದ್ದರಾಜು, ದೀಪು, ಮಲ್ಲಿಕಾರ್ಜುನ, ಶ್ರೀನಿವಾಸ್ ಇತರರಿದ್ದರು.

ಕೆ.ಆರ್.ನಗರ: ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ 30ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಿ ವಿಲೀನಗೊಳಿಸುವ ನಿರ್ಧಾರವನ್ನು ಸರ್ಕಾರ ಕೈಬಿಡುವಂತೆ ಒತ್ತಾಯಿಸಿ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

> “ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ. ಈ ಬಗ್ಗೆ ಮೇಲಿನ ಅಧಿಕಾರಿಗಳ ಗಮನಕ್ಕೆ ತರುತ್ತೇವೆ.
> – ಆರ್.ಕೃಷ್ಣಪ್ಪ, ಬಿಇಓ ಕೆ.ಆರ್.ನಗರ.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಈ ದೇಶದ ಶಿಕ್ಷಣದ ಅಡಿಪಾಯಗಳು. ಬಡ ಹಾಗೂ ಅತ್ಯಂತ ಹಿಂದುಳಿದ ಮಕ್ಕಳಿಗೆ ಅವರ ಊರಿನಲ್ಲೇ ದೊರೆಯುವ ಜ್ಞಾನದ ಬಾಗಿಲುಗಳು ಮತ್ತು ಸಾರ್ವತ್ರಿಕ ಶಿಕ್ಷಣವನ್ನು ಖಾತ್ರಿಪಡಿಸುವ ಘಟಕಗಳು. ಆದರೆ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಹಳ್ಳಿಗಳಲ್ಲಿರುವ ಶಾಲೆಗಳನ್ನು ಮುಚ್ಚಿ ಸಂಭಾವ್ಯ ಕೆಪಿಎಸ್ ಶಾಲೆಗೆ ವಿಲೀನಗೊಳಲು ಹೊರಟಿರುವುದು ಗ್ರಾಮೀಣ ಶಾಲೆಗಳನ್ನು ಮುಚ್ಚುವ ಹುನ್ನಾರ ಎಂದು ಆರೋಪಿಸಿದರು.

ಸರ್ಕಾರ ಕೆಪಿಎಸ್ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಕೊಡುವುದಾಗಿ ಹೇಳುತ್ತಿದೆ. ಆದರೆ ಈಗಾಗಲೇ ಇರುವ ಕೆಪಿಎಸ್ ಶಾಲೆಗಳು ಮೂಲಭೂತ ಸೌಕರ್ಯಗಳಿಲ್ಲದೆ ಸೊರಗುತ್ತಿವೆ. ಕರ್ನಾಟಕದಲ್ಲಿ ಸದ್ಯ 59 ಸಾವಿರಕ್ಕೂ ಅಧಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ರಾಜ್ಯದ 7 ಸಾವಿರ ಸರ್ಕಾರಿ ಶಾಲೆಗಳು ಒಬ್ಬರೇ ಶಿಕ್ಷಕರ ಮೇಲೆ ಅವಲಂಬಿತವಾಗಿರುವ ಏಕೋಪಾಧ್ಯಾಯ ಶಾಲೆಗಳಾಗಿವೆ. ಅಲ್ಲದೆ 21 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಕಟ್ಟಡಗಳು ದುರಸ್ತಿಗೆ ಹಲವಾರು ವರ್ಷಗಳಿಂದ ಕಾಯುತ್ತಿವೆ. ಶೇ.80ರಷ್ಟು ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿಲ್ಲ. 3500ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಲ್ಲಿ ಬಳಕೆಗೆ ಯೋಗ್ಯವಾದ ಶೌಚಾಲಗಳಿಲ್ಲ. ಸರ್ಕಾರಕ್ಕೆ ನಿಜವಾಗಿಯೂ ಗುಣಮಟ್ಟದ ಶಿಕ್ಷಣ ಕೊಡುವ ಮನಸ್ಸಿದ್ದರೆ, ಮೊದಲು ಈ ಸಮಸ್ಯೆಗಳನ್ನು ಬಗೆಹರಿಸಿ ಹಳ್ಳಿಗಳ ಶಾಲೆಗಳನ್ನು ಬಲಪಡಿಸಲಿ” ಎಂದು ಆಗ್ರಹಿಸಿದರು.

ದ್ವಿಭಾಷಾ ಮಾಧ್ಯಮ ಹೆಸರಿನಲ್ಲಿ ಮಾತೃಭಾಷಾ ಶಿಕ್ಷಣದ ಮಹತ್ವ ಮತ್ತು ಅವಶ್ಯಕತೆಯನ್ನು ಸರ್ಕಾರ ಬದಿಗೊತ್ತಿದೆ. ಇದು ಮಕ್ಕಳ ಕಲಿಕೆಯನ್ನು ಕುಂಠಿತಗೊಳಿಸುತ್ತದೆ. ಹಾಗಾಗಿ ಮಗುವಿನ ಸಂವಹನ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂದು ಆಗ್ರಹಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಸದಸ್ಯರಾದ ಸುನೀಲ್, ಚಿಕ್ಕವಡ್ಡರಗುಡಿ ಸಿ.ಪಿ.ಸಂಜಯ್ ಮಾತನಾಡಿದರು. ಪ್ರತಿಭಟನೆ ನಂತರ ಬಿಇಓ ಆರ್.ಕೃಷ್ಣಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಪದಾಧಿಕಾರಿಗಳಾದ ಹೇಮ, ದಿಶಾ, ನಂದೀಶ್, ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಸದಸ್ಯರಾದ ರಮೇಶ್, ಲೋಕೇಶ್, ಧನಪಾಲ್, ಮಹದೇವ್, ಮಂಜು, ಚಲುವರಾಜು, ರಾಜೇಗೌಡ, ಪ್ರಕಾಶ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಮೈಸೂರಿನ ವಿವಿಧೆಡೆ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮಗಳಲ್ಲಿ ಯದುವೀರ್ ಒಡೆಯರ್ ಭಾಗಿ

ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ; 40ಕ್ಕೂ ಹೆಚ್ಚು ಜಾಗಗಳಲ್ಲಿ ಅನ್ನಸಂತರ್ಪಣೆ

ಮೈಸೂರು, ಜೂ.4– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತಿ ಅಂಗವಾಗಿ ನಗರದಲ್ಲಿ ಆಯೋಜಿಸಿದ್ದ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸೇವಾ ಕಾರ್ಯಗಳಲ್ಲಿ ರಾಜವಂಶಸ್ಥರೂ ಆದ ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸಿ, ರಾಜರ್ಷಿಗೆ ಗೌರವ ನಮನ ಸಲ್ಲಿಸಿದರು.

ಗುರುವಾರ ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಅವರು ನಾಡದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿ ರಾಜ್ಯದ ಸಮೃದ್ಧಿ, ಜನರ ಸುಖ–ಶಾಂತಿ ಹಾಗೂ ಅಭಿವೃದ್ಧಿಗಾಗಿ ಪ್ರಾರ್ಥಿಸಿದರು. ಬಳಿಕ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಅನ್ನಸಂತರ್ಪಣೆಗೆ ಸ್ವತಃ ಬಡಿಸುವ ಮೂಲಕ ಚಾಲನೆ ನೀಡಿದರು.

ನಂತರ ನಗರದ ಕೆ.ಆರ್.ವೃತ್ತದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ಅವರ ದೂರದೃಷ್ಟಿ, ಜನಪರ ಆಡಳಿತ ಹಾಗೂ ಅಭಿವೃದ್ಧಿ ಚಿಂತನೆಗಳನ್ನು ಸ್ಮರಿಸಿದರು. ಬಳಿಕ ಮೈಸೂರಿನ ವಿವಿಧೆಡೆ ಏರ್ಪಡಿಸಿದ್ದ ಅನ್ನಸಂತರ್ಪಣೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ನಗರಾದ್ಯಂತ 40ಕ್ಕೂ ಹೆಚ್ಚು ಸ್ಥಳಗಳಲ್ಲಿ ನಡೆದ ಅನ್ನಸಂತರ್ಪಣೆಯಲ್ಲಿ ಲಕ್ಷಕ್ಕೂ ಅಧಿಕ ಜನ ಭಾಗವಹಿಸಿ, ಪ್ರಸಾದ ಸ್ವೀಕರಿಸಿದ್ದರ ಬಗ್ಗೆ ಸಂತಸ ವ್ಯಕ್ತಪಡಿಸಿದರು.


ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಸಂಸದ ಯದುವೀರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಯದುವೀರ್ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೇವಲ ಮೈಸೂರು ಸಂಸ್ಥಾನದ ಆಡಳಿತಗಾರರಷ್ಟೇ ಆಗಿರಲಿಲ್ಲ, ಆಧುನಿಕ ಕರ್ನಾಟಕದ ನಿರ್ಮಾಣಕ್ಕೆ ಭದ್ರ ಅಡಿಪಾಯ ಹಾಕಿದ ದೂರದೃಷ್ಟಿಯ ನಾಯಕರಾಗಿದ್ದರು. ಶಿಕ್ಷಣ, ನೀರಾವರಿ, ಆರೋಗ್ಯ, ವಿದ್ಯುತ್, ಕೈಗಾರಿಕೆ ಹಾಗೂ ಸಾಮಾಜಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಅವರು ಕೈಗೊಂಡ ಕ್ರಮಗಳು ಇಂದಿಗೂ ಮಾದರಿಯಾಗಿವೆ ಎಂದು ಹೇಳಿದರು.

ಇಂದಿನ ಕರ್ನಾಟಕ ಪ್ರಗತಿಪರ ರಾಜ್ಯವಾಗಿ ಗುರುತಿಸಿಕೊಳ್ಳಲು ನಾಲ್ವಡಿ ಅವರಂತಹ ಮಹಾನ್ ನಾಯಕರ ಕೊಡುಗೆ ಮಹತ್ವದ್ದಾಗಿದೆ. ಅವರ ಆದರ್ಶಗಳು, ಆಡಳಿತದ ದೃಷ್ಟಿಕೋನ ಹಾಗೂ ಜನಪರ ಚಿಂತನೆಗಳು ಯುವ ಜನತೆಗೆ ತಲುಪಬೇಕು. ಅವರ ಜೀವನ ಗಾಥೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಿಸಿದರು.

ಧರ್ಮ, ಜಾತಿ ಅಥವಾ ವೈಯಕ್ತಿಕ ಹಿನ್ನೆಲೆ ಯಾವುದೇ ಆಗಿರಲಿ, ಸಮಾಜದಲ್ಲಿ ಪರಸ್ಪರ ಗೌರವ, ಸಹಕಾರ ಹಾಗೂ ಸೇವಾ ಮನೋಭಾವನೆ ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯ. ಅನ್ನದಾನ ಮತ್ತು ಸೇವಾ ಕಾರ್ಯಕ್ರಮಗಳು ಸಮಾಜದ ಒಗ್ಗಟ್ಟನ್ನು ಬಲಪಡಿಸುವ ಶಕ್ತಿಯಾಗಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕನಸಿನ ಸುವರ್ಣ ಮೈಸೂರು ಮಾದರಿಯಲ್ಲಿ ಸಮೃದ್ಧ ಮತ್ತು ಸಾಂಸ್ಕೃತಿಕ ಕರ್ನಾಟಕವನ್ನು ನಿರ್ಮಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ. ಅವರ ಮೌಲ್ಯಗಳು ಮತ್ತು ಆದರ್ಶಗಳನ್ನು ಅನುಸರಿಸುವುದೇ ನಾವು ಅವರಿಗೆ ಅರ್ಪಿಸುವ ಅರ್ಥಪೂರ್ಣ ನಮನ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಮಹಾಪ್ರಸಾದ ವಿನಿಯೋಗ


ಮೈಸೂರಿನ ತೊಣಚಿಕೊಪ್ಪಲು ಬಡಾವಣೆಯಲ್ಲಿನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುವಾರ ಸಾವಿರಾರು ಭಕ್ತರಿಗೆ ಮಹಾಪ್ರಸಾದ ವಿತರಣೆ ಮಾಡಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಜಯರಾಂ, ಧರ್ಮದರ್ಶಿ ಕೃಷ್ಣಮೂರ್ತಿ ಮತ್ತು ವೆಂಕಟಾಚಲ ಉಪಸ್ಥಿತರಿದ್ದರು.

ಯದುವೀರ್ ಒಡೆಯರ್ ಸಂಸದರಾಗಿ ಎರಡು ವರ್ಷ

ಚಾಮರಾಜ ಬಿಜೆಪಿ ಮುಖಂಡರಿಂದ ಅಭಿನಂದನೆ


ಸಂಸದರಾಗಿ ಎರಡು ವರ್ಷ ಪೂರ್ಣಗೊಳಿಸಿದ ಯದುವೀರ್ ಒಡೆಯರ್ ಅವರನ್ನು ಬಿಜೆಪಿ ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡರ ನೇತೃತ್ವದಲ್ಲಿ ಅಭಿನಂದಿಸಲಾಯಿತು.

ಮೈಸೂರು, ಜೂ.4– ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಂಸದರಾಗಿ ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಅವರನ್ನು ಬಿಜೆಪಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡರ ನೇತೃತ್ವದಲ್ಲಿ ಅಭಿನಂದಿಸಲಾಯಿತು.

ಈ ವೇಳೆ ದಿನೇಶ್ ಗೌಡ ಮಾತನಾಡಿ, ಯದುವೀರ್ ಒಡೆಯರ್ ಅವರು ಕಳೆದ ಎರಡು ವರ್ಷಗಳಲ್ಲಿ ಜನರ ಪ್ರೀತಿ, ವಿಶ್ವಾಸ ಮತ್ತು ನಂಬಿಕೆ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಂಸದರಾದ ಬಳಿಕ ಅವರು ಮೈಸೂರು–ಕೊಡಗು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಾ ಹಲವಾರು ಜನಪರ ಯೋಜನೆಗಳು ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ ಎಂದರು.

ಮೈಸೂರು ರೈಲ್ವೆ ಸೇವೆ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿರುವ ಅವರು, ಹೊಸ ರೈಲು ಸೇವೆಗಳ ವಿಸ್ತರಣೆ, ರೈಲ್ವೆ ಮೂಲಸೌಕರ್ಯಗಳ ಸುಧಾರಣೆ ಹಾಗೂ ಮೈಸೂರು ರೈಲ್ವೆ ನಿಲ್ದಾಣದ ಆಧುನೀಕರಣಕ್ಕಾಗಿ ನಿರಂತರ ಪ್ರಯತ್ನ ನಡೆಸಿದ್ದಾರೆ. ಅಲ್ಲದೆ, ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ, ರಾಷ್ಟ್ರೀಯ ಹೆದ್ದಾರಿ ಹಾಗೂ ಗ್ರಾಮೀಣ ರಸ್ತೆ ಸಂಪರ್ಕ ವಿಸ್ತರಣೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆ ಮತ್ತು ಅನುದಾನ ದೊರಕಿಸಿಕೊಡುವಲ್ಲಿ ಸಫಲರಾಗಿದ್ದಾರೆ ಎಂದು ತಿಳಿಸಿದರು.

ಮೈಸೂರಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕೆ ವಿಶೇಷ ಆದ್ಯತೆ ನೀಡಿದ್ದಾರೆ. ಇದರೊಂದಿಗೆ ಮೈಸೂರು ಅರಮನೆ, ಚಾಮುಂಡಿಬೆಟ್ಟ ಹಾಗೂ ಇತರ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಕ್ರಮ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ಹೇಳಿದರು.


ಕೊಡಗು ಜಿಲ್ಲೆಯಲ್ಲಿ ಪರಿಸರ ಸಂರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿ, ಕಾಫಿ ಬೆಳೆಗಾರರ ಸಮಸ್ಯೆಗಳ ಪರಿಹಾರ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಸಹಕಾರ ನೀಡಿರುವುದರ ಜೊತೆಗೆ, ಯುವಜನರಿಗೆ ಉದ್ಯೋಗಾವಕಾಶಗಳು, ಕ್ರೀಡಾ ಸೌಲಭ್ಯಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದು ಬಣ್ಣಿಸಿದರು.

ಸಂಸತ್ತಿನಲ್ಲೂ ಕ್ಷೇತ್ರದ ಜನರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸಿ, ರೈಲ್ವೆ, ರಸ್ತೆ, ಪ್ರವಾಸೋದ್ಯಮ, ಪರಂಪರೆ ಸಂರಕ್ಷಣೆ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಧ್ವನಿ ಎತ್ತುವ ಮೂಲಕ ಜನಪ್ರತಿನಿಧಿಯಾಗಿ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ ಎಂದು ದಿನೇಶ್ ಗೌಡ ಅಭಿಪ್ರಾಯಿಸಿದರು.

ಕಾಕ್ರೋಚ್ ಜನತಾ ಪಾರ್ಟಿ ಹೋರಾಟ ಬೆಂಬಲಿಸಿ

ನಾಳೆ ಮೈಸೂರಲ್ಲೂ ಪ್ರತಿಭಟನೆ

ವಿವಿಧ ಸಂಘಟನೆಗಳ ಸಭೆಯಲ್ಲಿ ನಿರ್ಣಯ


ಮೈಸೂರಿನ ಕಲಾಮಂದಿರ ಆವರಣದಲ್ಲಿ ಗುರುವಾರ ಸಂಜೆ ವಿವಿಧ ಸಂಘಟನೆಗಳ ಮುಖಂಡರು ಸಭೆ ನಡೆಸಿದರು.

ಮೈಸೂರು,ಜೂ.4(ಪಿಎಂ)– ಸಾಮಾಜಿಕ ಜಾಲತಾಣದಲ್ಲಿ ಸಂಚಲನ ಸೃಷ್ಟಿಸಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಹೋರಾಟಕ್ಕೆ ಮೈಸೂರಿನಲ್ಲಿ ಬೆಂಬಲ ವ್ಯಕ್ತವಾಗಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಜೂ.6ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಸಿಜೆಪಿ ಪ್ರತಿಭಟನೆ ಹಮ್ಮಿಕೊಂಡಿದ್ದು, ಸಿಜೆಪಿ ಹೋರಾಟ ಬೆಂಬಲಿಸಿ ಮೈಸೂರಿನಲ್ಲೂ ಅಂದು ಪ್ರತಿಭಟನೆ ನಡೆಸಲು ಒಂದಾಗೋಣ ಕೈಜೋಡಿಸಿ ಸಂಘಟನೆ, ಪ್ರಗತಿಪರ ಮತ್ತು ಜನಪರ ಸಂಘಟನೆಗಳು ತೀರ್ಮಾನ ಕೈಗೊಂಡಿವೆ.


ಮೈಸೂರಿನ ಕಲಾಮಂದಿರ ಆವರಣದಲ್ಲಿ ಗುರುವಾರ ಸಂಜೆ ಸದರಿ ಸಂಘಟನೆಗಳ ಮುಖಂಡರು ಸಭೆ ನಡೆಸಿ ಈ ತೀರ್ಮಾನ ಕೈಗೊಂಡರು. ಅಂದು ಮೈಸೂರಿನ ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಬೆಳಗ್ಗೆ 10.30ರಿಂದ 2 ಗಂಟೆ ಕಾಲ ಶಾಂತಿಯುತ ಪ್ರತಿಭಟನೆ ನಡೆಸಲು ನಿರ್ಣಯಿಸಲಾಯಿತು.

ಸಭೆಯಲ್ಲಿ ಸಾಮಾಜಿಕ ಕಾರ್ಯಕರ್ತ ಡಾ.ಮ.ಪು.ಪೂರ್ಣಾನಂದ ಮಾತನಾಡಿ, ಸಿಜೆಐ ಆರಂಭಿಸಿದ ಅಭಿಜೀತ್ ದೀಪ್ಕೆ ಜೂ.6ರಂದು ಭಾರತಕ್ಕೆ ಮರಳಲಿದ್ದು, ಸಿಜೆಐ ಹೋರಾಟ ಬೆಂಬಲಿಸಿ ಅಂದಿನಿಂದಲೇ ಮೈಸೂರಿನಲ್ಲಿ ಹೋರಾಟ ಆರಂಭಿಸೋಣ. ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ಮಾತನಾಡಲು ಅವಕಾಶ ಕಲ್ಪಿಸಬೇಕು. 'ನಿರುದ್ಯೋಗಿ ಯುವ ಜನತೆ ಜಿರಳೆಗಳಿದ್ದಂತೆ' ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಹೇಳಿಕೆಯನ್ನು ತಿರಸ್ಕರಿಸುವ ಬದಲು, ದಿಪ್ಕೆ ಅದನ್ನು ಒಂದು ವಿಡಂಬನಾತ್ಮಕ ಗುಂಪಾಗಿ ಪರಿವರ್ತಿಸಿದರು. ಈಗ ಇದನ್ನು ಯುವಜನರು ಬೆಂಬಲಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಭಾರತದ ಸಂವಿಧಾನದ ಮಾರ್ಗವನ್ನು ಅನುಸರಿಸಿ ನಾವೆಲ್ಲರೂ ಒಗ್ಗೂಡಿ, ನೀಟ್ ಪರೀಕ್ಷೆ ಅಕ್ರಮ ಸಂಬಂಧ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ಸಮಯ ಬಂದಿದೆ. ನಾವು ಒಕ್ಕೊರಲ ಧ್ವನಿ ಎತ್ತಿದರೆ, ಅವರು ಖಂಡಿತವಾಗಿಯೂ ಮಣಿಯಲೇಬೇಕು. ಯುವಜನರು ನಮ್ಮ ದೇಶದ ಶಕ್ತಿ. ದೇಶ ಉಳಿಸಲು ಅವರು ಹೋರಾಡುವುದು ಅಗತ್ಯ ಎಂದರು.

ವಿವಿಧ ಸಂಘಟನೆಗಳ ಮುಖಂಡರಾದ ಸವಿತಾ ಪ.ಮಲ್ಲೇಶ್, ಅಯ್ಯಪ್ಪ ಹೂಗಾರ್, ನೆಲೆ ಹಿನ್ನಲೆ ಗೋಪಾಲಕೃಷ್ಣ, ಲಕ್ಷ್ಮೀರಾವ್, ಜಗದೀಶ್ ಸೂರ್ಯ, ಸೋಸಲೆ ಸಿದ್ದರಾಜು, ವಿಜಯ್ ಕುಮಾರ್, ಗಿರೀಶ್ ಮಾಚಳ್ಳಿ, ಅಭಿಜಿತ್, ಅಭಿಷೇಕ್ ಸೇರಿದಂತೆ ರೈತ, ದಲಿತ, ಯುವ ಹಾಗೂ ಕಮ್ಯುನಿಸ್ಟ್ ಸಂಘಟನೆಗಳ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ಜಿಟಿಎನ್ ಜನ್ಮಶತಮಾನೋತ್ಸವ



ಮೈಸೂರು, ಜೂ.4– ಮೈಸೂರಿನ ಕುವೆಂಪುನಗರದ ಗಾನಭಾರತೀ ಸಂಸ್ಥೆಯ ವತಿಯಿಂದ ಸಂಸ್ಥೆಯ ವೀಣೆಶೇಷಣ್ಣ ಭವನದಲ್ಲಿ ಜೂ.6ರಂದು ಸಂಜೆ 5.30ಕ್ಕೆ ಪ್ರೊ.ಜಿ.ಟಿ.ನಾರಾಯಣರಾಯರ ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಾಡೋಜ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಧ್ಯಕ್ಷತೆ ಹಾಗೂ ಡಾ.ಟಿ.ಎನ್.ನಾಗರತ್ನ ಉಪಸ್ಥಿತಿಯಲ್ಲಿ 'ಜಿಟಿಎನ್–ನುಡಿನಮನ' ಸಲ್ಲಿಸಿದ ನಂತರ ವರಕವಿ ದ.ರಾ.ಬೇಂದ್ರೆ ಅವರ ಕವನಗಳನ್ನಾಧರಿಸಿದ 'ಪ್ರತಿಬಿಂಬ' ವಿಶೇಷ ನೃತ್ಯವನ್ನು ವಿದುಷಿ ಪ್ರತಿಭಾ ರಾಮಸ್ವಾಮಿ ಹಾಗೂ ವಿದುಷಿ ಜನನಿ ಮುರುಳಿ ಪ್ರಸ್ತುತಪಡಿಸಲಿದ್ದಾರೆ.

ಡಾ. ಯತೀಂದ್ರರಿಗೆ ಹಣಕಾಸು ಖಾತೆಗೆ ಆಗ್ರಹ


ವರುಣಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಡಾ.ಯತೀಂದ್ರ ಅವರನ್ನು ಭೇಟಿಯಾಗಿ ಶುಭಾಶಯ ಕೋರಿದರು

ಮೈಸೂರು, ಜೂ.4(ಎಂಕೆ)– ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಹಣಕಾಸು ಖಾತೆ ನೀಡುವಂತೆ ವರುಣಾ ಕ್ಷೇತ್ರದ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಪ್ರಮಾಣವಚನ ಸ್ವೀಕಾರ ಸಮಾರಂಭದ ಬಳಿಕ ಡಾ.ಯತೀಂದ್ರ ಅವರನ್ನು ಭೇಟಿಯಾಗಿ ಶುಭಾಶಯ ಕೋರಿರುವ ಕ್ಷೇತ್ರದ ಕಾರ್ಯಕರ್ತರು, ಸಿದ್ದರಾಮಯ್ಯ ಅವರಂತೆ ಉತ್ತಮ ಆಡಳಿತ ನಡೆಸಲು ಡಾ.ಯತೀಂದ್ರ ಕೂಡ ಸಮರ್ಥರಾಗಿದ್ದು ಹಣಕಾಸು ಖಾತೆ ನೀಡಬೇಕು ಎಂದು ಆಗ್ರಹಿಸಿದರು.

ತಾಪಂ ಸದಸ್ಯ ಮುದ್ದುರಾಮೇಗೌಡ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಲಲಿತಾದ್ರಿಪುರ ಬಸವರಾಜ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬೀರಪ್ಪ, ಕೃಷ್ಣ, ಶಿವಣ್ಣ, ಸದಸ್ಯರಾದ ಬಸವರಾಜು, ಮಹದೇವು, ಶಂಕರ್, ರಾಧಮಹದೇವ್, ರೋಜನ್, ಬಸವಣ್ಣ, ಸಾಕಪ್ಪ, ಪ್ರಭಾಕರ್, ಶಿವರಾಜು, ಸಂತು, ಮೈಸೂರು ಶಶಿಕುಮಾರ್, ಮೆಲ್ಲಳ್ಳಿ ಮತ್ತಿತರರಿದ್ದರು.

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಒಡಂಬಡಿಕೆ


ವಿಮಾನ ನಿಲ್ದಾಣ ಪ್ರಾಧಿಕಾರದ ಉದ್ಯೋಗಿಗಳಿಗೆ ವೈದ್ಯಕೀಯ ಸೇವೆ ಕಲ್ಪಿಸುವ ಸಂಬಂಧ ಪ್ರಾಧಿಕಾರ ಹಾಗೂ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಮೈಸೂರು, ಜೂ. 4– ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉದ್ಯೋಗಿಗಳಿಗೆ ಆರೋಗ್ಯ ಸ್ವಾಸ್ಥ್ಯ ಸೌಲಭ್ಯಗಳನ್ನು ವಿಸ್ತರಿಸಿದೆ.

ಈ ಸಂಬಂಧ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕರಾದ ಪಿ.ವಿ. ಉಷಾ ಕುಮಾರಿ, ಹಿರಿಯ ವ್ಯವಸ್ಥಾಪಕ ಅಭಿಷೇಕ ಜೋಶಿ, ಸಹಾಯಕ ವ್ಯವಸ್ಥಾಪಕ ಅರ್ಜುನ್ ಪ್ರಸಾದ್ ಹಾಗೂ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸರ್ಬೇಶ್ವರ್ ಕರ್ ಸಮ್ಮುಖದಲ್ಲಿ ಆಸ್ಪತ್ರೆ ಹಾಗೂ ಪ್ರಾಧಿಕಾರದ ನಡುವೆ ಅಧಿಕೃತ ಒಡಂಬಡಿಕೆಯಾಗಿದೆ.

ಈ ಸಂದರ್ಭದಲ್ಲಿ ಡಾ.ಸರ್ಬೇಶ್ವರ್ ಕರ್ ಮಾತನಾಡಿ, ಆಯುರ್ವೇದ ವೈದ್ಯಕೀಯ ಕ್ಷೇತ್ರದಲ್ಲಿ ಜೆಎಸ್‌ಎಸ್ ಸಂಸ್ಥೆಯು ಕಳೆದ 30 ವರ್ಷಗಳಿಂದ ಗಣನೀಯ ಸೇವೆಯ ಮೂಲಕ ಹೆಗ್ಗುರುತು ಮೂಡಿಸಿದೆ. ಎಲ್ಲ ರೋಗಿಗಳಿಗೆ ಅತ್ಯುತ್ತಮ ಆರೈಕೆ, ಔಷಧೋಪಚಾರದ ಜೊತೆಗೆ ತಜ್ಞ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆ ಹಾಗೂ ಪ್ರಾಧಿಕಾರದ ನಡುವಿನ ಈ ಒಡಂಬಡಿಕೆಯು ಸಾರ್ವಜನಿಕ ಕ್ಷೇತ್ರದಲ್ಲಿ ಆಯುರ್ವೇದ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಹೆಚ್.ವಿ.ರಾಜೀವ್ ನೇತೃತ್ವದ ಲಕ್ಷ ವೃಕ್ಷ ಅಭಿಯಾನಕ್ಕೆ ಹಿರಿಯ ಪತ್ರಕರ್ತ ಅಜಿತ್ ಹನುಮಕ್ಕನವರ್ ಚಾಲನೆ

ಗಿಡ ಬೆಳೆಸುವುದರಿಂದ ಅಪಾಯ ಮುಂದೂಡಬಹುದು

ಮೈಸೂರು, ಜೂ.4(ಎಂಕೆ)– ಮನುಷ್ಯನ ಕೊಳ್ಳುಬಾಕತನದಿಂದ (ಅತಿಯಾದ ಬಳಕೆ ಮತ್ತು ಗ್ರಾಹಕೀಕರಣ) ಪರಿಸರ ನಾಶವಾಗಿ ನೈಸರ್ಗಿಕ ಸಂಪನ್ಮೂಲಗಳು ಬರಿದಾಗುತ್ತಿದ್ದು, ಗಿಡಗಳನ್ನು ನೆಟ್ಟು ಪೋಷಣೆ ಮಾಡಿ ಬೆಳೆಸುವುದರಿಂದ ಎದುರಾಗುವ ಅಪಾಯವನ್ನು ಮುಂದೂಡಬಹುದಾಗಿದೆ ಎಂದು ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ್ ತಿಳಿಸಿದರು.

ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಹಸಿರು ಮೈಸೂರು ನರ್ಸರಿ ಆವರಣದಲ್ಲಿ ಹೆಚ್.ವಿ.ರಾಜೀವ್ ಸ್ನೇಹ ಬಳಗ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ ಹಮ್ಮಿಕೊಂಡಿರುವ 'ಹಸಿರು ಮೈಸೂರು–ಲಕ್ಷ ವೃಕ್ಷ ಅಭಿಯಾನ' ಸಮಾರಂಭವನ್ನು ಗಿಡ ನೆಟ್ಟು ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಹೆಚ್.ವಿ.ರಾಜೀವ್ ಸ್ನೇಹ ಬಳಗ ಹಾಗೂ ಇನ್ನಿತರೆ ಸಂಸ್ಥೆಗಳಿಂದ ಮೈಸೂರಿನಲ್ಲಿ 2018ರಿಂದಲೂ ಗಿಡಗಳ ವಿತರಣೆ, ಅವುಗಳನ್ನು ನೆಟ್ಟು ಬೆಳೆಸುವ ಮಹತ್ವದ ಕಾರ್ಯಕ್ರಮವನ್ನು ಮುನ್ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಗಿಡಗಳನ್ನು ನೆಟ್ಟು ಬೆಳೆಸುವುದು ಮುಂದೊಂದು ದಿನ ಎದುರಾಗುವ ಪ್ರಳಯಕ್ಕೆ ಪರಿಹಾರವಲ್ಲ. ಆದರೆ, ಆಗಬಹುದಾದ ಅನಾಹುತವನ್ನು ಮುಂದಿನ ಜನಾಂಗಕ್ಕೆ ಮುಂದೂಡುವುದಾಗಿದೆ ಎಂದರು.

ನಿಜವಾಗಲೂ ಪರಿಸರವನ್ನು ಉಳಿಸುವುದೆಂದರೆ ಪರಿಸರವನ್ನು ಅದರ ಪಾಡಿಗೆ ಬಿಡುವುದಾಗಿದೆ. ಪ್ರಸ್ತುತ ಪರಿಸರ ಎಲ್ಲಿ ಚೆನ್ನಾಗಿದೆ ಎಂದು ಯಾರಾದರೂ ಹೇಳಿದರೆ, ಮನುಷ್ಯ ಎಲ್ಲಿ ಕಾಲಿಟ್ಟಿಲ್ಲವೋ ಅಲ್ಲಿ ಮಾತ್ರವೇ ಪರಿಸರ ಚೆನ್ನಾಗಿದೆ ಎಂದು ಹೇಳಬಹುದಾಗಿದೆ. ಭೂಮಿಯಲ್ಲಿ ಜೀವಿಗಳು ಉಗಮವಾದಾಗಿನಿಂದ ಇಲ್ಲಿಯವರೆಗೆ ಕಾಲವನ್ನು ಒಂದು ದಿನಕ್ಕೆ ಸಿಮೀತಗೊಳಿಸಿ ನೋಡಿದರೆ ಅದರಲ್ಲಿ ಮನುಷ್ಯ ಹುಟ್ಟಿ ಕೇವಲ ಮೂರು ಸೆಕೆಂಡ್ ಆಗಿದೆ. ಈ ಮೂರು ಸೆಕೆಂಡ್‌ನಲ್ಲಿ ಮನುಷ್ಯ ಏನೆಲ್ಲಾ ಮಾಡಬಾರದೋ ಅದೆಲ್ಲವನ್ನೂ ಮಾಡಿ ಪರಿಸರ ನಾಶಕ್ಕೆ ಮುಂದಾಗಿದ್ದಾನೆ ಎಂದು ತಿಳಿಸಿದರು.


ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಹಸಿರು ಮೈಸೂರು ನರ್ಸರಿ ಆವರಣದಲ್ಲಿ 'ಹಸಿರು ಮೈಸೂರು–ಲಕ್ಷ ವೃಕ್ಷ ಅಭಿಯಾನ' ಸಮಾರಂಭವನ್ನು ಗಿಡ ನೆಟ್ಟು ನೀರೆರೆಯುವ ಮೂಲಕ ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ್ ಉದ್ಘಾಟಿಸಿದರು. ಶ್ರೀ ಮುರುಘರಾಜೇಂದ್ರ ಮಹಾ ಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ನಿವೃತ್ತ ಐಎಫ್‌ಎಸ್ ಅಧಿಕಾರಿ ಟಿ.ಬಾಲಚಂದ್ರ, ಹಸಿರು ಮೈಸೂರು ಮತ್ತು ಲಕ್ಷ ವೃಕ್ಷ ರೂವಾರಿ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರಿದ್ದರು.

ಪ್ರಕೃತಿಯಲ್ಲಿ ಅಧ್ವಾನ ಆರಂಭವಾಗಿದ್ದೆ ನಮ್ಮ ಮನಸ್ಸಿನಿಂದ. ಮನುಷ್ಯ ತಾನು ಇತರೆ ಜೀವಿಗಳಿಗಿಂತ ಭಿನ್ನ, ತಾನೇ ಸುಪ್ರೀಂ ಎಂಬ ಭ್ರಮೆಯಿಂದಾಗಿ ಇಷ್ಟೆಲ್ಲಾ ಅಧ್ವಾನವಾಗಿದೆ. ಮೈಸೂರು ನಗರಕ್ಕೂ ಬೆಂಗಳೂರಿಗೂ ಇರುವ ವ್ಯತ್ಯಾಸ ತಿಳಿಯಲು ಎರಡು ನಗರದಲ್ಲಿ ಒಂದೊಂದು ದಿನ ಉಳಿದರೆ ಸಾಕು. ಮೈಸೂರಿಗೆ ಮಹರಾಜರು ನೀಡಿದ ಕೊಡುಗೆಯಿಂದಾಗಿ ಇಂದಿಗೂ ತಣ್ಣನೆಯ ವಾತಾವರಣದಿಂದ ಕೂಡಿದೆ. ಆದರೆ, ಪರಿಸರದ ದೃಷ್ಟಿಯಿಂದ ಹೇಳುವುದಾದರೆ ಮೈಸೂರು ನಗರಕ್ಕೆ ಇಪ್ಪತ್ತೈದು–ಮೂವತ್ತು ವರ್ಷವಷ್ಟೇ ಆಯಸ್ಸು. ಆ ನಂತರ ಬೆಂಗಳೂರಿನಂತೆಯೇ ಆಗಲಿದ್ದು, ಎಚ್ಚೆತ್ತುಕೊಳ್ಳಬೇಕಿದೆ. ಪರಿಸರ ಸಂರಕ್ಷಣೆ ಎಂಬುದು ನಮ್ಮ ಉಳಿವಿಗಾಗಿ ನಾವು ಮಾಡಿಕೊಳ್ಳುತ್ತಿರುವ ಕೆಲಸವಷ್ಟೇ ಹೊರತು ಬೇರೇನೂ ಅಲ್ಲ ಎಂದು ಮನವರಿಕೆ ಮಾಡಿಕೊಟ್ಟರು.

> "ಮನೆಯ ಆವರಣದಲ್ಲಿ ನಾಲ್ಕು ಕಿಟಕಿಗಳಿದ್ದು, ನಾಲ್ಕೈದು ಗಿಡಗಳಿದ್ದರೆ ಶೇ.30ರಷ್ಟು ಕರೆಂಟ್ ಬಿಲ್ ಉಳಿಯಲಿದೆ. ಗೊತ್ತಿದ್ದೋ ಗೊತ್ತಿಲ್ಲದೆಂಯೋ ಪರಿಸರವನ್ನು ಹಾಳು ಮಾಡಿದ್ದೇವೆ. ಮುಂದಾದರೂ ಉಳಿಸುವ ಕೆಲಸ ಮಾಡಬೇಕು. ಎದುರಾಗುವ ಅನಾಹುತವನ್ನು ಮುಂದೂಡುವ ಕೆಲಸವಾಗಬೇಕು.
> -ಅಜಿತ್ ಹನುಮಕ್ಕನವರ್

ದಾಖಲೆ ಬಿಸಿಲು: ಈ ಸಲ 150 ವರ್ಷದ ರೆಕಾರ್ಡ್ ಬ್ರೇಕ್ ಆಗುವಷ್ಟು ಬಿಸಿಲಿನ ತಾಪವಿರಲಿದೆ ಎಂದು ಹಲವು ಸಂಶೋದನೆಗಳು ಹೇಳುತ್ತಿವೆ. ಮನುಷ್ಯ ಮಾಡಿರುವ ಅಧ್ವಾನದಿಂದ ಪ್ರಳಯ ನಿಶ್ಚಿತ. ಆದರೆ, ಗಿಡಗಳನ್ನು ನೆಟ್ಟು ಬೆಳೆಸುವುದರಿಂದ ಎದುರಾಗುವ ಅನಾಹುತವನ್ನು ಮುಂದೂಡಬಹುದಾಗಿದೆ. ಆದ್ದರಿಂದ ಪ್ರತಿ ಮನೆಯಲ್ಲಿ ಗಿಡಗಳನ್ನು ಬೆಳೆಸುವುದು ಅವಶ್ಯವೆಂದರು.

ಗಿಡ ವಿತರಣೆ: ನಗರ ಪಾಲಿಕೆಗೆ ಐದು ಸಾವಿರ ಗಿಡಗಳು ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಸಾವಿರಾರು ಗಿಡಗಳನ್ನು ವಿತರಣೆ ಮಾಡಲಾಯಿತು. ಚಾಮರಾಜನಗರ ಮರಿಯಾಲದ ಶ್ರೀ ಮುರುಘರಾಜೇಂದ್ರ ಮಹಾ ಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಹಿರಿಯ ಸಾಹಿತಿ ಶಿವಪ್ಪ, ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ನಿವೃತ್ತ ಐಎಫ್‌ಎಸ್ ಅಧಿಕಾರಿ ಟಿ.ಬಾಲಚಂದ್ರ, ಹಸಿರು ಮೈಸೂರು ಮತ್ತು ಲಕ್ಷ ವೃಕ್ಷ ರೂವಾರಿ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮತ್ತಿತರರಿದ್ದರು.

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ
(DMLT) SSLC / PUC Pass / Fail
Direct PUC Science Commerce @ Arts
9886654463

Nypunya School of Excellence MYSURU
ದಟ್ಟಗಳ್ಳಿ ಮತ್ತು ಆರ್.ಟಿ. ನಗರ
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಹುತ್ತನಹಳ್ಳಿ, ಹೊಸಹುಂಡಿ ವ್ಯಾಪ್ತಿಯ ಮಹಿಳಾ ಆಯಾ ಬೇಕಾಗಿದ್ದಾರೆ.
ಶಾಲಾ ವಾಹನ ಚಲಾಯಿಸಲು ಹೆವಿ ಲೈಸೆನ್ಸ್ ಉಳ್ಳ ಅನುಭವಿ ಡ್ರೈವರ್ ಬೇಕಾಗಿದ್ದಾರೆ.
ಆಸಕ್ತರು ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ :
96069 59451

JOB OPPORTUNITY
- Delivery Boys
- Office Work Staff
- Drivers for Omni Car

PART TIME JOB ONLY
Hard working candidates preferred. Contact:
Mob : 89714 22339

RAM TUITION CENTER
I PUC
Admissions Open
Classes Starts from Monday 8th June 2026
Office Time - 4.30 pm to 8.00 pm
Branches : Agrahara & Kuvempunagar
Call : 81973 63131, 95380 65996
Admission open For Weekend CET / NEET Classes

Vidyavardhaka Sangha (R), Mysuru
Vidyavardhaka Composite PU College
(High School Section)
Sheshadri Iyer Road, Mysuru-01.
Ph : 0821-4264886 | Email : vidyavardhaka.ee0028@gmail.com
WANTED TEACHERS
Trained experienced teacher to teach following subject for
HIGH SCHOOL : Social Science - M.A., B.Ed.,
(To teach in Kannada & English medium)
Please submit the application at the above address with the copies of Certificates, Resume & Passport size photo within 7 days from the date of publication.
Hon. President Hon. Secretary



ಹಸಿರು ನಮ್ಮ ಉಸಿರು

ನಿವೇಶನಗಳು ಮಾರಾಟಕ್ಕಿವೆ
ಸಾನ್ವಿ ಎನ್‌ಕ್ಲೇವ್
- ಸೈಟ್ ಅಳತೆ 30x30 | 30x40 30x50
- ಸ್ಥಳ: ಜಯಪುರ (ರಾಷ್ಟ್ರೀಯ ಹೆದ್ದಾರಿ ಹತ್ತಿರ)
- E' ಖಾತ ಲಭ್ಯವಿದೆ

ನೇರ ನೋಂದಣಿ ಸಿದ್ಧವಾಗಿದೆ
ಬ್ಯಾಂಕ್ ಸಾಲ ಸೌಲಭ್ಯವಿದೆ
APPROVED DTCP APPROVED
ಆರ್ಕ ಪ್ರಾಪರ್ಟೀಸ್
ARKA PROPERTIES Let's Grow Together
9972602543
Visit: www.arkaproperties.in
RERA REGISTERED: PRM/KA/RERA/1268/378/AG/190125/001254

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

SIGMA HOSPITAL THE HEALING TOUCH
P8/D, Saraswathipuram, Thonachikoppal Road, Mysuru - 09
Ph: 9108028661 / 0821-4266661
Date: 04.06.2026
ಸೂಚನೆ
ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಭಾರತೀಯ ವೈದ್ಯಕೀಯ ಮಂಡಳಿಯ (Medical Council of India) 2002ರ ನೈತಿಕ ಸಂಹಿತೆಯ ನಿಯಮಾವಳಿಗಳ ಪ್ರಕಾರ, ನಮ್ಮ ಆಸ್ಪತ್ರೆಯ ಒಳರೋಗಿ (In-patient) ಸೇವೆಯಲ್ಲಿ ನೋಂದಾಯಿಸಲಾದ **ದಿನಾಂಕ 7–11 – 2014 ರಿಂದ 31 – 03 – 2019 IP NO. 001 ರಿಂದ 20,780.** ರೋಗಿಗಳ ವೈದ್ಯಕೀಯ ದಾಖಲೆಗಳನ್ನು ರದ್ದುಗೊಳಿಸಿ (Shredding) ಮಾಡಿ ನಾಶಪಡಿಸಲಾಗುತ್ತದೆ. ಯಾವುದೇ ಆಸಕ್ತಿ ರೋಗಿಗಳು ತಮ್ಮ ವೈದ್ಯಕೀಯ ದಾಖಲೆಗಳನ್ನು ಪಡೆಯಲು ಬಯಸಿದ್ದಲ್ಲಿ, ಈ ಜಾಹೀರಾತು ಪ್ರಕಟವಾದ ಒಂದು ತಿಂಗಳೊಳಗೆ, ಆಸ್ಪತ್ರೆಯ ಗುರುತಿನ ಚೀಟಿಯನ್ನು ಸಲ್ಲಿಸಿ, ಸಿಗ್ಮಾ ಆಸ್ಪತ್ರೆ, ಮೈಸೂರು – ವೈದ್ಯಕೀಯ ದಾಖಲೆಗಳ ವಿಭಾಗಕ್ಕೆ ಭೇಟಿ ನೀಡುವಂತೆ ಸೂಚಿಸಲಾಗುತ್ತದೆ.
ಸೂಚನೆ: OP ಹಾಗೂ IP ಮೆಡಿಕೋ-ಲೀಗಲ್ (MLC) ಮತ್ತು ಮರಣದ ದಾಖಲೆಗಳು ಹೊರತುಪಡಿಸಲಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರುಗಳು

